ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ
ಕನ್ನಡ ವಾರಪತ್ರಿಕೆ
ಸಂಪುಟ 14 | ಸಂಚಿಕೆ 6 | ಫೆಬ್ರವರಿ 3-9, 2020 | ಪುಟ 16 | ರೂ.10/-



ಸೌಹಾರ್ದತೆಗಾಗಿ ಮಾನವ ಸರಪಳಿ

ಯೆಹೂದಿ ನರಮೇಧ 75





ದಿಲ್ಲಿಯಲ್ಲಿ ಬಿಜೆಪಿ ದ್ವೇಷ ಪ್ರಚಾರ



ಕೃಷಿ ಭೂಮಿ ಗುತ್ತಿಗೆ ಸಕ್ರಮ ಅಪಾಯಕಾರಿ

ಕೇಂದ್ರ ಮಂತ್ರಿ ಮತ್ತು ಬಿಜೆಪಿ ಎಂಪಿ ವಿರುದ್ಧ ದೂರು–ಎಫ್‌ಐಆರ್ ದಾಖಲಿಸಲು ದಿಲ್ಲಿ ಪೋಲೀಸ್ ಕಮಿಶನರ್‌ಗೆ ಬೃಂದಾ ಕಾರಟ್ ಆಗ್ರಹ

ಮಾತೆತ್ತಿದರೆ ರಾಜದ್ರೋಹದ ಕೇಸು ಹಾಕುವ ದಿಲ್ಲಿ ಪೋಲೀಸರ ಅತ್ಯಂತ ಆಕೇಪಾರ್ಹ ಹೇಳಿಕೆಗಳನ್ನು ನೀಡುತ್ತಿರುವವರ ಬಗ್ಗೆ ಸುಮ್ಮನಿರುವುದೇಕೆ?

ಸಿಪಿಐ(ಎಂ) ಪೊಲಿಟ್‌ಬ್ಯೂರೊ ಸದಸ್ಯರಾದ ಬೃಂದಾ ಕಾರಟ್ ಮತ್ತು ದಿಲ್ಲಿ ರಾಜ್ಯ ಸಮಿತಿಯ ಕಾರ್ಯದರ್ಶಿ ಕೆ.ಎಂ.ತಿವಾರಿ ಭಾರತ ಸರಕಾರದ ಹಣಕಾಸು ರಾಜ್ಯ ಮಂತ್ರಿ ಅನುರಾಗ್ ಠಾಕುರ್ ಮತ್ತು ಪಶ್ಚಿಮ ದಿಲ್ಲಿ ಲೋಕಸಭಾ ಕ್ಷೇತ್ರದ ಬಿಜೆಪಿ ಸಂಸತ್ ಸದಸ್ಯ ಪರ್ವೇಶ್ ವರ್ಮ ವಿರುದ್ಧ ಅವರು ಕೋಮು ವೈರತ್ವವನ್ನು ಪ್ರಚೋದಿಸುತ್ತಿದ್ದಾರೆ, ಬೆದರಿಕೆಗಳನ್ನು ಒಡ್ಡುತ್ತಿದ್ದಾರೆ ಮತ್ತು ರಾಷ್ಟ್ರೀಯ ಸಮಗ್ರತೆಗೆ ಸಂಚಕಾರ ತರುವ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ದಿಲ್ಲಿ ಪೋಲೀಸ್ ಕಮಿಶನರ್‌ಗೆ ದೂರು ಕೊಟ್ಟಿದ್ದಾರೆ ಮತ್ತು ಅವರ ವಿರುದ್ಧ ಕೂಡಲೇ ಎಫ್‌ಐಆರ್ ದಾಖಲಿಸಬೇಕು ಎಂದು ಆಗ್ರಹಿಸಿದ್ದಾರೆ.

ಸ್ವತಃ ಚುನಾವಣಾ ಆಯೋಗಕ್ಕೇ ಈ ಇಬ್ಬರೂ ಅತ್ಯಂತ ಆಕ್ಷೇಪಾರ್ಹ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ಮೇಲ್ನೋಟಕ್ಕೇ ಅನಿಸಿದ್ದು, ಅವರನ್ನು 'ಸ್ಟಾರ್' ಚುನಾವಣಾ ಪ್ರಚಾರಕರ ಪಟ್ಟಿಯಿಂದ ತೆಗೆದು ಹಾಕಿದೆ. ಈ ಬಗ್ಗೆ ದಿಲ್ಲಿ ಪೋಲೀಸ್‌ಗೆ ಖಂಡಿತಾ ತಿಳಿದಿದೆ. ಆದರೆ ಇತರ ಹಲವರ ಹೇಳಿಕೆಗಳನ್ನು ತಾವಾಗಿಯೇ ಗಮನಕ್ಕೆ ತಗೊಂಡು ರಾಜದ್ರೋಹ ಇತ್ಯಾದಿ ಕೇಸುಗಳನ್ನು ಹಾಕುತ್ತಿರುವ ದಿಲ್ಲಿ ಪೋಲೀಸರ ಗಮನಕ್ಕೆ ಈ ಇಬ್ಬರು ಮುಖಂಡರುಗಳ ನಗ್ನ ಕೋಮುವಾದಿ ಮತ್ತು ದ್ವೇಷ ಭಾಷಣಗಳು ಯಾವವೂ ಬಂದಿರದಿರುವುದು ಮತ್ತು ಅವರ ವಿರುದ್ಧ ಯಾವುದೇ ಕೇಸು ದಾಖಲಿಸದಿರುವುದು ಅತ್ಯಂತ ಖೇದಕರ ಸಂಗತಿ ಎಂದು ಈ ದೂರಿನಲ್ಲಿ ಹೇಳಲಾಗಿದೆ.

ಕಳೆದ ಕೆಲವು ದಿನಗಳಿಂದ ಅವರು ನೀಡುತ್ತಿರುವ ಹೇಳಿಕೆಗಳು ಪ್ರಚೋದನಾಕಾರಿ ಮತ್ತು ಕಾನೂನುಬಾಹಿರ. ಇವು ಭಾರತೀಯ ದಂಡ ಸಂಹಿತೆಯ ಸೆಕ್ಷನ್ 153ಎ/153ಬಿ/504 ಅಡಿಯಲ್ಲಿ ಅಪರಾಧಗಳಾಗಿವೆ, ಮತ್ತು ಸೆಕ್ಷನ್ 295ಎ/298/506 ಅಡಿಯಲ್ಲಿರುವ ಅಂಶಗಳು ಕೂಡ ಇವರಿಗೆ ಅನ್ವಯವಾಗುತ್ತವೆ ಎಂದು ಈ ದೂರಿನಲ್ಲಿ ದಿಲ್ಲಿ ಪೋಲೀಸರ ಗಮನಕ್ಕೆ ತರಲಾಗಿದೆ.

ಪರ್ವೇಶ್ ವರ್ಮ ಜನವರಿ 27ರಂದು ಮಾಡಿದ ಭಾಷಣದಲ್ಲಿ ಬಹಿರಂಗವಾಗಿಯೇ ಶಾಹೀನ್ ಬಾಗ್‌ನ ಪ್ರತಿಭಟನಾಕಾರರಿಗೆ ಬೆದರಿಕೆ ಹಾಕಿದರು, ಮತ್ತು ಬಿಜೆಪಿ ದಿಲ್ಲಿಯಲ್ಲಿ ಚುನಾಯಿತವಾದರೆ ಒಂದು ಗಂಟೆಯೊಳಗೆ ಶಾಹೀನ್ ಬಾಗ್‌ನ್ನು ತೆರವು ಮಾಡುವುದಾಗಿ ಹೇಳಿದರು. ಇದು ಬೆದರಿಕೆ, ಇಲ್ಲಿ ಅವರು ಶಾಹೀನ್ ಬಾಗ್‌ನಲ್ಲಿ ಶಾಂತಿಯುತವಾಗಿ ನೆರೆದಿರುವವರ ಮೇಲೆ ಬಲಪ್ರಯೋಗದ ಪ್ರಸ್ತಾಪ ಮಾಡುತ್ತಿದ್ದಾರೆ ಎಂಬುದು ಸ್ಪಷ್ಟ,

ಜನವರಿ 28ರಂದು ಎಎನ್‌ಐಗೆ ನೀಡಿದ ಸಂದರ್ಶನದಲ್ಲಿ ಈತ ಶಾಹೀನ್ ಬಾಗ್ ಪ್ರತಿಭಟನಾಕಾರರ ಬಗ್ಗೆ ಮಾತಾಡುತ್ತ "ಈ ಮಂದಿ ನಿಮ್ಮ ಮನೆಗಳೊಳಗೆ ನುಗ್ಗುತ್ತಾರೆ, ನಿಮ್ಮ ಸೋದರಿಯರು, ಹೆಣ್ಣುಮಕ್ಕಳನ್ನು ಎತ್ತಿಕೊಂಡು ಹೋಗುತ್ತಾರೆ, ಮತ್ತು ಅವರ ರೇಪ್ ಮಾಡುತ್ತಾರೆ, ಅವರನ್ನು ಸಾಯಿಸುತ್ತಾರೆ. ಆದ್ದರಿಂದ ಇಂದೇ ಸಮಯ ಬಂದಿದೆ. ನಾಳೆ ಉಳಿಸಲಿಕ್ಕೆ ಮೋದೀಜೀ ಬರುವುದಿಲ್ಲ, ನಾಳೆ ಷಾಜಿ ಉಳಿಸಲಿಕ್ಕೆ ಬರುವುದಿಲ್ಲ" ಎಂದು ಹೇಳಿದ್ದಾರೆ. (ಇದರ ವೀಡಿಯೋ ಮತ್ತು ಲೇಖನ ಇಂಡಿಯಾ ಟುಡೆಯ ವೆಬ್‌ಸೈಟ್‌ನಲ್ಲಿ ಇದೆ).

ಈ ಹೇಳಿಕೆ ಸ್ಪಷ್ಟವಾಗಿಯೂ ಸುಳ್ಳು, ಉದ್ರೇಕಕಾರಿ ಮತ್ತು ಕೋಮುವಾದಿ. ಏಕೆಂದರೆ ಶಾಹೀನ್ ಬಾಗ್ ಪ್ರತಿಭಟನೆ ಶಾಂತಿಯುತವಾಗಿದೆ, ಮಾತ್ರವಲ್ಲ, ಅದರಲ್ಲಿ ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು, ವಯಸ್ಸಾದವರು, ಮತ್ತು ಮಕ್ಕಳು ಭಾಗವಹಿಸುತ್ತಿದ್ದಾರೆ. ಅವರಲ್ಲಿ ಒಂದು ದೊಡ್ಡ ವಿಭಾಗ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರು. ವರ್ಮಾ ಶಾಹೀನ್ ಬಾಗ್‌ನ ಪ್ರತಿಭಟನಾಕಾರರು ಶಾಂತಿಯುತ ಹಿಂದೂಗಳ ಮನೆಗಳಿಗೆ ನುಗ್ಗಬಹುದಾದ ಅಪಾಯಕಾರಿ ವ್ಯಕ್ತಿಗಳು ಎಂದು ಚಿತ್ರಿಸಲು ಪ್ರಯತ್ನಿಸುತ್ತಿದ್ದಾರೆ. ಅವರನ್ನು ಅತ್ಯಾಚಾರಿಗಳು ಮತ್ತು ಕ್ರಿಮಿನಲ್‌ಗಳು ಎಂದು ಕರೆದು ಮತೀಯ ದ್ವೇಷವನ್ನು ಉದ್ರೇಕಿಸುತ್ತಿದ್ದಾರೆ. ಇದರ ಉದ್ದೇಶ ಬಹುಸಂಖ್ಯಾತ ಸಮುದಾಯಗಳಲ್ಲಿ, ವಿಶೇಷವಾಗಿ ಮಹಿಳೆಯರ ನಡುವೆ ಭೀತಿ ಹುಟ್ಟಿಸುವುದು ಮತ್ತು ಕೋಮು ವಿಭಜನೆಯನ್ನು ಸೃಷ್ಟಿಸುವುದು ಎಂದು ದಿಲ್ಲಿ ಪೋಲಿಸ್ ಕಮಿಶನರ ಗಮನಕ್ಕೆ ಈ ದೂರು ತಂದಿದೆ.

ವರ್ಮಾರವರ ಇನ್ನೂ ಒಂದು ಹೇಳಿಕೆ ವರದಿಯಾಗಿರುವುದನ್ನು ಈ ದೂರು ಕಮಿಶನರ್‌ರವರ ಗಮನಕ್ಕೆ ತಂದಿದೆ. "ದಿಲ್ಲಿಯಲ್ಲಿ ನನ್ನ ಸರಕಾರ ರಚನೆಗೊಳ್ಳಲಿ, ಫೆಬ್ರುವರಿ 11ರಿಂದ ಒಂದು ತಿಂಗಳ ಸಮಯ ಕೊಡಿ. ನನ್ನ ಲೋಕಸಭಾ ಕ್ಷೇತ್ರದಲ್ಲಿ ಸರಕಾರೀ ಜಾಗದಲ್ಲಿ ಕಟ್ಟಿರುವ ಯಾವುದೇ ಮಸೀದಿಯನ್ನು ಬಿಡುವದಿಲ್ಲ, ಅವೆಲ್ಲವನ್ನೂ ತೆಗೆಸುತ್ತೇನೆ" ಎಂದು ಅವರು ಹೇಳಿರುವುದಾಗಿ ವರದಿಯಾಗಿದೆ. ಇದು ಪ್ರಚೋದನಾಕಾರಿ, ಕೋಮುವಾದಿ ಮತ್ತು ಮುಸ್ಲಿಂ ಸಮುದಾಯವನ್ನು ಬೆದರಿಸುವ ಹೇಳಿಕೆ ಎಂಬುದು ಸ್ವಯಂವೇದ್ಯ. ಅದರಲ್ಲೂ ಒಂದು ಪ್ರಚಾರ ಭಾಷಣದಲ್ಲಿ ಒಬ್ಬ ಚುನಾಯಿತ ಪ್ರತಿನಿಧಿ ಹೇಳುತ್ತಿರುವುದು ಉದ್ದೇಶಪೂರ್ವಕವಾದ ಹೇಳಿಕೆಗಳು, ಮತೀಯ ಗುಂಪುಗಳ ನಡುವೆ ವೈರತ್ವವನ್ನು ಪ್ರಚೋದಿಸುವ ಮತ್ತು ಒಟ್ಟಾರೆಯಾಗಿ ಮುಸ್ಲಿಂ ಸಮುದಾಯದ ವಿರುದ್ಧ ಹಿಂಸಾಚಾರದ ಹೆದರಿಕೆಯನ್ನು ಹುಟ್ಟಿಸುವ, ಬೆದರಿಕೆಯನ್ನು ಹಾಕುವ ಗುರಿ ಹೊಂದಿದೆ. ಇಂತಹ ಹೇಳಿಕೆಗಳನ್ನು ಉಪೇಕ್ಷಿಸುವುದು ಸಾಧ್ಯವಿಲ್ಲ, ಏಕೆಂದರೆ ಇವು ಭಾರತೀಯ ಸಂವಿಧಾನ ಮತ್ತು ಸಮಾಜದ ಸತ್ವಕ್ಕೆ ವಿರುದ್ಧವಾಗಿವೆ, ಮಾತ್ರವೇ ಅಲ್ಲ, ಭಾರತೀಯ ದಂಡ ಸಂಹಿತೆಯ ಮೇಲೆ ಹೇಳಿರುವ ಸೆಕ್ಷನ್‌ಗಳ ಅಡಿಯಲ್ಲಿ ಗಂಭೀರ ಶಿಕ್ಷಾರ್ಹ ಅಪರಾಧಗಳೂ ಆಗಿವೆ ಎಂದು ದಿಲ್ಲಿ ಪೋಲೀಸ್ ಕಮಿಶನರಿಗೆ ಕೊಟ್ಟಿರುವ ಈ ದೂರಿನಲ್ಲಿ ನೆನಪಿಸಲಾಗಿದೆ. ಅಲ್ಲದೆ ಈ ಹೇಳಿಕೆಯನ್ನು ವರ್ಮಾ ಚುನಾವಣಾ ಪ್ರಚಾರದ ವೇಳೆಯಲ್ಲಿ ಹೇಳಿರುವುದರಿಂದ, ಸ್ಪಷ್ಟವಾಗಿಯೂ ಮುಂಬರುವ ಚುನಾವಣೆಗಳಲ್ಲಿ ಮತಗಳನ್ನು ಪಡೆಯಲಿಕ್ಕಾಗಿಯೇ ಹೇಳಿದ್ದಾರೆ ಎಂಬುದು ಸ್ಪಷ್ಟ, ಆದ್ದರಿಂದ ಸೆಕ್ಷನ್ 171 ಜಿ ಅಡಿಯಲ್ಲಿನ ಅಂಶವೂ ಇದಕ್ಕೆ ಅನ್ವಯವಾಗುತ್ತದೆ ಎಂಬ ಸಂಗತಿಯತ್ತವೂ ಈ ದೂರು ದಿಲ್ಲಿ ಪೋಲಿಸರ ಗಮನ ಸೆಳೆದಿದೆ.

ಇದೇ ರೀತಿಯಲ್ಲಿ, ಅನುರಾಗ್ ಠಾಕುರ್ ರಿಥಾಲಾದಲ್ಲಿ ಒಬ್ಬ ಬಿಜೆಪಿ ಅಭ್ಯರ್ಥಿ ಮಾನಿಶ್ ಚೌಧುರಿಯವರ ಪರವಾಗಿ ಪ್ರಚಾರ ಮಾಡುತ್ತ ಒಂದು ಬಿಜೆಪಿ ಬೆಂಬಲಿಗರ ರ್‍ಯಾಲಿಯಲ್ಲಿ "ದೇಶ್ ಕೇ ಗದ್ದಾರೋಂಕೋ, ಗೋಲಿ ಮಾರೋ ಸಾಲೋಂಕೋ" ಎಂಬ ಬೈಗುಳಭರಿತ ಘೋಷಣೆಗೆ ನೇತೃತ್ವ ನೀಡುತ್ತಿರುವುದು ಕಂಡು ಬಂದಿದೆ. ಟೈಮ್ಸ್ ಆಫ್ ಇಂಡಿಯ ಮತ್ತಿತರ ಸುದ್ದಿ ವೆಬ್‌ಸೈಟ್‌ಗಳಲ್ಲಿ ಹಾಕಿರುವ ವೀಡಿಯೋದಲ್ಲಿ ಅನುರಾಗ್ ಠಾಕುರ್ ಬಿಜೆಪಿ ಬೆಂಬಲಿಗರು ಮತ್ತು ರ್‍ಯಾಲಿಯಲ್ಲಿದ್ದ ಸಾರ್ವಜನಿಕರನ್ನು ಸಿಎಎ ಮತ್ತು ಎನ್‌ಆರ್‌ಸಿ ವಿರುದ್ಧ ಪ್ರತಿಭಟಿಸುತ್ತಿರುವವರ ಮೇಲೆ, ಅವರನ್ನು ದೇಶದ್ರೋಹಿಗಳು ಎಂದು ಹೇಳುತ್ತ, ಹಲ್ಲೆ ಮಾಡುವಂತೆ ಪ್ರಚೋದಿಸುತ್ತಿರುವುದು ಕಾಣುತ್ತಿದೆ. ನಿಜ ಹೇಳಬೇಕೆಂದರೆ ಈತ ಈ ಘೋಷಣೆ ಅಲ್ಲಿ ವೇದಿಕೆಯ ಮೇಲಿದ್ದ ಕೇಂದ್ರ ಮಂತ್ರಿ ಗಿರಿರಾಜ್ ಸಿಂಗ್ ಮತ್ತಿತರ ಬಿಜೆಪಿಯ ಪದಾಧಿಕಾರಿಗಳಿಗೆ ಕೇಳಿಸುವಂತೆ ಗಟ್ಟಿಯಾಗಿ ಹಾಕಲು ಮತ್ತೆ–ಮತ್ತೆ ಪ್ರಚೋದಿಸು ತ್ತಿರುವುದನ್ನೂ ಕಾಣಬಹುದು

ಆದ್ದರಿಂದ ನಮ್ಮ ರಾಷ್ಟ್ರೀಯ ಸಮಗ್ರತೆಗೆ ಬೆದರಿಕೆ ಒಡ್ಡಿರುವ ಈ ಶಿಕ್ಷಾರ್ಹ ಅಪರಾಧಗಳ ವಿರುದ್ಧ ಈ ದೂರಿನ ಮೇಲೆ ತಕ್ಷಣವೇ ಎಫ್‌ಐಆರ್ ದಾಖಲಿಸಬೇಕು ಎಂದು ಸಿಪಿಐ(ಎಂ) ಮುಖಂಡರುಗಳು ಆಗ್ರಹಿಸಿದ್ದಾರೆ.

ಬೃಂದಾ ಕಾರಟ್ ರವರಿಗೆ ಕೊಲೆ ಬೆದರಿಕೆ ಬಗ್ಗೆ ಕ್ಷಿಪ್ರ ಕ್ರಮ ಕೈಗೊಳ್ಳಿ – ಕರ್ನಾಟಕ ಸರಕಾರಕ್ಕೆ ಸಿಪಿಐ(ಎಂ) ಪೊಲಿಟ್ ಬ್ಯುರೊ ಆಗ್ರಹ

ಕರ್ನಾಟಕದಲ್ಲಿ ಹಲವು ಪ್ರತಿಷ್ಠಿತ ವ್ಯಕ್ತಿಗಳಿಗೆ ಕೊಲೆ ಬೆದರಿಕೆ ಕಳಿಸಿರುವುದನ್ನು ಸಿಪಿಐ(ಎಂ) ಪೊಲಿಟ್ ಬ್ಯುರೊ ಬಲವಾಗಿ ಖಂಡಿಸಿದೆ. ಈ ಪಟ್ಟಿಯಲ್ಲಿ ಸಿಪಿಐ(ಎಂ) ಪೊಲಿಟ್ ಬ್ಯುರೊ ಸದಸ್ಯರಾಗಿರುವ ಬೃಂದಾ ಕಾರಟ್, ಚಿತ್ರನಟರಾಗಿರುವ ಪ್ರಕಾಶ್ ರಾಜ್, ಸ್ವಾಮಿ ನಿಜಗುಣಾನಂದ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮತ್ತಿತರ 11 ಮಂದಿಯ ಹೆಸರುಗಳಿವೆ.

ಇದೊಂದು ಗಂಭೀರ ವಿಷಯ, ಕರ್ನಾಟಕ ಸರಕಾರ ತಕ್ಷಣವೇ ಈ ಬೆದರಿಕೆ ಪತ್ರದ ಹಿಂದೆ ಇರುವವರು ಯಾರು ಎಂಬುದನ್ನು ತನಿಖೆ ಮಾಡಬೇಕು ಮತ್ತು ಕ್ಷಿಪ್ರ ಕ್ರಮ ಕೈಗೊಳ್ಳಬೇಕು ಎಂದು ಪೊಲಿಟ್ ಬ್ಯುರೊ ಆಗ್ರಹಿಸಿದೆ.



ಹುತಾತ್ಮ ದಿನದಂದು ರಾಜಘಾಟ್‌ನಲ್ಲಿ ಗಾಂಧೀಜಿ ಸ್ಮರಣೆ

'ನಫ್ರತ್ ಛೋಡೋ, ಭಾರತ್ ಜೋಡೋ' ಘೋಷಣೆ

ಕೇಂದ್ರ ಮಂತ್ರಿ ಮತ್ತು ಆಳುವ ಪಕ್ಷದ ಎಂಪಿಗಳ ಸಾರ್ವಜನಿಕ ದ್ವೇಷ ಕೃತ್ಯಗಳ ವಿರುದ್ದ ಏನೊಂದೂ ಕ್ರಮ ಕೈಗೊಳ್ಳದ ಅಮಿತ್ ಷಾ ರವರ ದಿಲ್ಲಿ ಪೋಲೀಸರು ಮಹಾತ್ಮ ಗಾಂಧಿಯವರು ಹುತಾತ್ಮರಾದ ದಿನದಂದು ಅವರಿಗೆ ಅವರ ಸಮಾಧಿಯ ಬಳಿ ಶ್ರದ್ಧಾಂಜಲಿ ಅರ್ಪಿಸದಂತೆ ಸಾವಿರಾರು ಜನಗಳನ್ನು ತಡೆಯಲು ಸರ್ವ ಪ್ರಯತ್ನ ನಡೆಸಿದರು. ಆದರೂ ಆರೆಸ್ಸೆಸ್‌ನ ಬೌದ್ಧಿಕ ಕಾರ್ಯವಾಹ ನಾಥುರಾಂ ಗೋಡ್ಸೆ ಮಹಾತ್ಮ ಗಾಂಧಿಗೆ ಗುಂಡಿಕ್ಕಿದ ಸಮಯ, ಜನವರಿ 30ರ ಸಂಜೆ 5.17ಕ್ಕೆ ಸರಿಯಾಗಿ ಒಂದು ನಿಮಿಷದ ಮೌನಾಚರಣೆ ನಡೆಯುವುದನ್ನು ಸಂಪೂರ್ಣವಾಗಿ ತಡೆಯಲು ಅವರಿಂದಾಗಲಿಲ್ಲ.

ನೂರಕ್ಕೂ ಹೆಚ್ಚು ಸಾಮೂಹಿಕ ಮತ್ತು ವರ್ಗ ಸಂಘಟನೆಗಳು ಸೇರಿ ರಚಿಸಿಕೊಂಡಿರುವ ಜನ ಏಕತಾ ಜನ ಅಧಿಕಾರ್ ಆಂದೋಲನದ 'ನಫ್ರತ್ ಛೋಡೋ, ಭಾರತ್ ಜೋಡೋ'(ದ್ವೇಷ ಬಿಡಿ, ದೇಶ ಜೋಡಿಸಿ) ಕರೆಯ ಮೇರೆಗೆ ಜನವರಿ 30ರಂದು ಗಾಂಧೀಜಿಯ ಸಮಾಧಿಸ್ಥಳವಾದ ರಾಜಘಾಟ್‌ನ ಸುತ್ತ ಮಾನವ ಸರಪಳಿ ರಚಿಸುವ ಕಾರ್ಯಕ್ರಮವನ್ನು ತಡೆಯಲು ದೇಶದ ರಾಜಧಾನಿಯ ಹಲವೆಡೆಗಳಲ್ಲಿ ನೂರಾರು ಜನಗಳನ್ನು ಬಂಧಿಸಿ ಒಯ್ದರು, ಜನಗಳು ಬರದಂತೆ ತಡೆಯಲು ಮೂರು ಮೆಟ್ರೋ ನಿಲ್ದಾಣಗಳನ್ನು ಮುಚ್ಚಲಾಯಿತೆಂದೂ ವರದಿಯಾಗಿದೆ. ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೆನ್ ಮತ್ತು ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜ ಅವರನ್ನು ಕೂಡ ಬಂಧಿಸಿದರು. ಆದರೂ ಕೆಲವು ಮುಖಂಡರು ರಾಜಘಾಟ್ ತಲುಪಿ ಈ ಕಾರ್ಯಕ್ರಮವನ್ನು ನೆರವೇರಿಸಿದರು. ಇವರಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ, ಪೊಲಿಟ್‌ಬ್ಯುರೊ ಸದಸ್ಯರಾದ ಪ್ರಕಾಶ ಕಾರಟ್, ನೀಲೋತ್ಪಲ ಬಸು, ಎಸ್‌ಆರ್ ಪಿಳ್ಳೆ, ಬೃಂದಾ ಕಾರಟ್, ಹನ್ನನ್ ಮೊಲ್ಲ, ಹಾಗೂ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಅಧ್ಯಕ್ಷರಾದ ಮಾಲಿನಿ ಭಟ್ಟಾಚಾರ್ಯ ಮತ್ತು ಪ್ರಧಾನ ಕಾರ್ಯದರ್ಶಿ ಮರಿಯಂ ಧವಳೆ ಸೃಇದ್ದಾರೆ. ಇತರ ಹಲವಾರು ಪ್ರತಿಷ್ಠಿತ ಚಿಂತಕರೂ ಸೇರಿಕೊಂಡು ಸಂಜೆ 5.17ಕ್ಕೆ ಸರಿಯಾಗಿ ಒಂದು ನಿಮಿಷದ ಮೌನಾಚರಣೆ ನಡೆಸಿದರು. ಮಾನವ ಸರಪಳಿ ನಿರ್ಮಿಸಿ ಕೋಮು ಸೌಹಾರ್ದವನ್ನು ಮತ್ತು ಸಂವಿಧಾನವನ್ನು ರಕ್ಷಿಸುವ ಪ್ರತಿಜ್ಞೆಯನ್ನು ಪುನರುಚ್ಚರಿಸಿದರು, ರಾಷ್ಟ್ರಗೀತೆಯನ್ನು ಹಾಡಿದರು.

ಸಂಪಾದಕೀಯ

ಕೃಷಿ ಭೂಮಿ ಗುತ್ತಿಗೆ ಸಕ್ರಮ ಅಪಾಯಕಾರಿ

ರೈತರು ವ್ಯವಸಾಯ ಮಾಡುವುದನ್ನು ಕೈಬಿಟ್ಟು ಪಾಳು ಬಿದ್ದಿರುವ ಕೃಷಿ ಭೂಮಿಯನ್ನು ಬೇರೆಯವರಿಗೆ ಗುತ್ತಿಗೆ ನೀಡುವ ಪದ್ಧತಿಯನ್ನು ಸಕ್ರಮಗೊಳಿಸಲು ಚಿಂತನೆ ನಡೆಸಲಾಗುತ್ತದೆ ಎಂದು ಕಂದಾಯ ಸಚಿವ ಆರ್. ಅಶೋಕ್ ಇತ್ತೀಚೆಗೆ ಹೇಳಿದ್ದಾರೆ ಎಂದು ವರದಿಯಾಗಿದೆ. ಬೇಸಾಯ ಮಾಡುತ್ತಿರುವವರು ಹಳ್ಳಿ ಬಿಟ್ಟು ನಗರ ಪ್ರದೇಶಗಳನ್ನು ಸೇರಿದ್ದಾರೆ. ಇದರಿಂದಾಗಿ ಕೃಷಿ ಭೂಮಿ ಪಾಳು ಬಿದ್ದಿದೆ. ಇದರ ಪರಿಣಾಮವಾಗಿ ಕೃಷಿ ಆದಾಯ ಮತ್ತು ಆಹಾರೋತ್ಪಾದನೆ ಕಡಿಮೆಯಾಗಿದೆ. ಕೃಷಿ ಭೂಮಿಯನ್ನು ಬೇರೆಯವರಿಗೆ ಗುತ್ತಿಗೆ ನೀಡುವ ಪದ್ಧತಿಯನ್ನು ಕಾನೂನು ಬದ್ಧಗೊಳಿಸಿದರೆ ಕೃಷಿಭೂಮಿಯನ್ನು ಗುತ್ತಿಗೆಗೆ ನೀಡುವವರಿಗೂ ಹಾಗೂ ಗುತ್ತಿಗೆಗೆ ಭೂಮಿಯನ್ನು ಪಡೆಯುವವರಿಗೂ ಆದಾಯ ದೊರೆಯಲಿದೆ. ಜಮೀನಿನ ಮಾಲೀಕರು ಮತ್ತು ಜಮೀನನ್ನು ಗುತ್ತಿಗೆ ಪಡೆಯುವವರ ನಡುವೆ ಸರಕಾರ ಮಧ್ಯಪ್ರವೇಶಿಸುವುದಿಲ್ಲ. ವಾರ್ಷಿಕ ಗುತ್ತಿಗೆ ದರವನ್ನು ಜಮೀನಿನ ಒಡೆಯನೇ ನಿರ್ಧರಿಸುತ್ತಾನೆ. ಸರ್ಕಾರ ಮಧ್ಯಪ್ರವೇಶಿಸುವುದಿಲ್ಲ. ಗುತ್ತಿಗೆಯನ್ನು ಕಾನೂನು ಬದ್ಧಗೊಳಿಸುವ ಪಾತ್ರವನ್ನು ಮಾತ್ರ ನಿರ್ವಹಿಸುತ್ತದೆ. ರೈತರು ವ್ಯವಸಾಯ ಮಾಡದೆ ಪಾಳು ಬಿಟ್ಟಿರುವ ದೊಡ್ಡ ಪ್ರಮಾಣದ ಭೂಮಿಯನ್ನು ಗುತ್ತಿಗೆಗೆ ನೀಡಲು ಸಾಧ್ಯವಾದರೆ ಆಹಾರೋತ್ಪಾದನೆ ಜಾಸ್ತಿಯಾಗಲಿದೆ ಎಂದರು ಸಚಿವರು.

ರಾಜ್ಯ ಸರ್ಕಾರದ ಚಿಂತನೆ ಮತ್ತು ಕಂದಾಯ ಸಚಿವರ ತರ್ಕ ಮೇಲ್ನೋಟಕ್ಕೆ ರೈತ ಪರ ಹಾಗೂ ಕೃಷಿ ರಂಗದ ಪರವಾಗಿರುವಂತೆ ಕಾಣುತ್ತದೆ. ಆದರೆ ಅದರ ದೂರಗಾಮಿ ಪರಿಣಾಮಗಳನ್ನು ವಿಶ್ಲೇಷಣೆ ಮಾಡಿದರೆ ಈ ಚಿಂತನೆಯ ಹಿಂದಿರುವ ಅಪಾಯಕಾರಿ ಉದ್ದೇಶ ಸ್ಪಷ್ಟವಾಗದೆ ಇರುವುದಿಲ್ಲ.

ಕೃಷಿ ಭೂಮಿಯನ್ನು ಗುತ್ತಿಗೆಗೆ ನೀಡುವ ಪದ್ಧತಿ ಈಗಾಗಲೇ ಹಲವು ಕಡೆ ಇದೆ. ಆದರೆ ಅದು ಯಾವುದೇ ಲಿಖಿತ ಒಪ್ಪಂದದ ಆಧಾರವಿಲ್ಲದೆ, ಕೇವಲ ಬಾಯಿ ಮಾತಿನ ಭರವಸೆಯಲ್ಲಿ ನಡೆಯುತ್ತಿದೆ. ಈ ಪದ್ಧತಿಯಲ್ಲಿ ಬಹುತೇಕವಾಗಿ ಸ್ವಂತ ಭೂಮಿ ಇಲ್ಲದ ಅಥವಾ ಅಲ್ಪ ಸ್ವಲ್ಪ ಭೂಮಿ ಹೊಂದಿರುವ ಬಡಕೃಷಿಕರು ಶ್ರೀಮಂತ ಮಾಲೀಕರು ಬೀಳು ಬಿಟ್ಟ ಭೂಮಿಯನ್ನು ಗುತ್ತಿಗೆಗೆ ಪಡೆದ ವ್ಯವಸಾಯ ಮಾಡುತ್ತಿರುತ್ತಾರೆ. ಹೀಗೆ ಗುತ್ತಿಗೆಗೆ ಪಡೆದು ಭೂಮಿಯಲ್ಲಿ ವ್ಯವಸಾಯ ಮಾಡುವ ಭೂಹೀನ ಬಡವರು ಭೂ ಒಡೆಯರಿಂದ ತೀವ್ರ ಶೋಷಣೆಗೆ ಒಳಗಾಗುತ್ತಾ ಬರುತ್ತಿದ್ದರು. ಭೂ ಒಡೆಯರ ಈ ಶೋಷಣೆಯ ವಿರುದ್ಧ ದೇಶದ ಉದ್ದಗಲಕ್ಕೂ ನಡೆದ ಅನೇಕ ಧಿರೋದಾತ್ತವಾದ ಹೋರಾಟಗಳ ಪರಿಣಾಮವಾಗಿ ಭೂ ಸುಧಾರಣಾ ಕ್ರಮಗಳು ಜಾರಿಗೆ ಬಂದು 'ಉಳುವವನೇ ಭೂಮಿಯ ಒಡೆಯ' ಎಂಬ ಕ್ರಾಂತಿಕಾರಿ ಕ್ರಮ ಜಾರಿಗೆ ಬಂತು. ಈಗ ಮತ್ತೆ ಗುತ್ತಿಗೆ ಪದ್ಧತಿಗೆ ಮರಳುವುದು ಒಂದು ಪ್ರಗತಿಪರ ಹೆಜ್ಜೆಯಾಗಲಾರದು. ಸರಕಾರ ಈ ಪದ್ಧತಿಯನ್ನು ಸಕ್ರಮಗೊಳಿಸಿದರೆ, ಅದಕ್ಕೆ ತಕ್ಕ ನಿಯಮಾವಳಿಗಳನ್ನು ರೂಪಿಸಿ, ಗುತ್ತಿಗೆಗೆ ನೀಡುವವರೂ ಮತ್ತು ಗುತ್ತಿಗೆಗೆ ಪಡೆಯುವವರೂ ಅನ್ಯಾಯಕ್ಕೆ ಗುರಿಯಾಗದಂತೆ ನೋಡಿಕೊಳ್ಳಲಾಗುವುದು ಎಂಬ ಭರವಸೆ ನೀಡಲಾಗುತ್ತದೆ.

ಗುತ್ತಿಗೆ ಪದ್ಧತಿಯನ್ನು ಸಕ್ರಮಗೊಳಿಸಿದರೆ ಅತಿ ಹೆಚ್ಚು ಸಂತೋಷ ಪಡುವವರು ಕೃಷಿ ಕಂಪನಿಗಳ ಮಾಲೀಕರು. ಹಲವು ದೈತ್ಯ ಕಂಪನಿಗಳು ಭಾರತದ ವೈವಿಧ್ಯಮಯ ಗುಣ ಹೊಂದಿರುವ ಮಣ್ಣಿನ ಮೇಲೆ ಕಣ್ಣಿಟ್ಟಿವೆ. ಅಂತಹ ಭೂಮಿಯನ್ನು ಉಪಾಯದಿಂದ ತಮ್ಮ ಕೈ ವಶ ಮಾಡಲು ಅವುಗಳು ಹೊಂಚುಹಾಕುತ್ತಲೇ ಇವೆ. ಸಧ್ಯಕ್ಕೆ ರೈತರಿಂದ ಕೃಷಿ ಭೂಮಿಯನ್ನು ಗುತ್ತಿಗೆಗೆ ಪಡೆದು ನಂತರ ಕ್ರಮೇಣ ಸರ್ಕಾರದ ಮಧ್ಯಪ್ರವೇಶದ ಮೂಲಕ ರೈತರ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಮುಂದಾಗುವುದು ಅವುಗಳ ದೂರಾಲೋಚನೆಯಾಗಿದೆ. ಒಟ್ಟಾರೆಯಾಗಿ ಯಡಿಯೂರಪ್ಪ ಸರ್ಕಾರ ಕೃಷಿಯಲ್ಲಿ ಕಂಪೆನೀಕರಣಕ್ಕೆ ತುಂಬಾ ಅವಸರದಲ್ಲಿದ್ದಂತೆ ಕಾಣುತ್ತದೆ. ಹಿಂದೆ ಸಿದ್ದರಾಮಯ್ಯ ಸರ್ಕಾರ ಇದನ್ನೇ ಮಾಡಲು ಹೊರಟಿತ್ತು. ಆದರೆ ರೈತ ಸಂಘಗಳ ತೀವ್ರ ವಿರೋಧದ ಹಿನ್ನೆಲೆಯಲ್ಲಿ ಕೃಷಿ ಕಂಪೆನೀಕರಣವನ್ನು ಅದು ಮುಂದೂಡಿತ್ತು. ಆದರೆ ರೈತರ ಮೇಲೆ ಗುಂಡು ಹಾರಿಸಿದ ಖ್ಯಾತಿಯ ಮುಖ್ಯಮಂತ್ರಿ ಯಡಿಯೂರಪ್ಪ ಉದಾರೀಕರಣದ ನಿಷ್ಠಾವಂತ ಅನುಯಾಯಿಯಾಗಿ ಕೃಷಿ ಭೂಮಿಯನ್ನು ಗುತ್ತಿಗೆಗೆ ನೀಡುವ ಹೆಸರಿನಲ್ಲಿ ಕಾರ್ಪೊರೇಟ್ ಕಂಪೆನಿಗಳ ಅಡಿಯಾಳಾಗಲು ಮುಂದಾಗುತ್ತಿದ್ದರೆ ಆಶ್ಚರ್ಯಪಡಬೇಕಾಗಿಲ್ಲ. ನಮ್ಮ ದೇಶದಲ್ಲಿರುವ ಬಹುತೇಕ ಹಿಡುವಳಿಗಳು ಸಣ್ಣ ಮತ್ತು ಅತಿ ಸಣ್ಣ ಗಾತ್ರದವಾಗಿದ್ದು ಲಾಭದಾಯಕ ಕೃಷಿಗೆ ಯೋಗ್ಯವಲ್ಲ ಎಂಬ ಕಾರಣಕೊಟ್ಟು ಕೃಷಿ ಭೂಮಿ ಗುತ್ತಿಗೆಯನ್ನು ಸಮರ್ಥಿಸಲಾಗುತ್ತದೆ. ಸಣ್ಣ ಸಣ್ಣ ಹಿಡುವಳಿಗಳನ್ನು ಒಂದು ಗೂಡಿಸಿ ದೊಡ್ಡ ಮೊತ್ತದ ಬಂಡವಾಳ ಹೂಡಿ ಗಣನೀಯ ಪ್ರಮಾಣದಲ್ಲಿ ಕೃಷಿ ಆದಾಯ ಹೆಚ್ಚಿಸಿಕೊಳ್ಳಲು ಕೃಷಿ ಕಂಪೆನಿಗಳಿಗೆ ಮಾತ್ರ ಸಾಧ್ಯ ಎಂದು ವಾದಿಸಲಾಗುತ್ತದೆ. ಆದರೆ ಕಂಪೆನಿಗಳ ಆದಾಯ ಹೆಚ್ಚಾಗುವುದುರಿಂದ ನಮ್ಮ ರೈತರಿಗೆ, ಭೂರಹಿತ ಕೂಲಿಕಾರರಿಗೆ ಏನು ಲಾಭ?

ಭಾರತ ದೇಶದ ಕೃಷಿ ಇನ್ನೂ ಬಹಳ ಕಾಲ ರೈತಪ್ರಧಾನವಾಗಿಯೇ ಇರುವುದು ಅಗತ್ಯವಿದೆ. ಕ್ರಾಂತಿಕಾರಿ ಭೂಸುಧಾರಣೆಗಳಿಗೆ ಇನ್ನೂ ಅವಕಾಶವಿದೆ. ಶ್ರೀಮಂತ ರೈತರು, ಭೂಮಾಲೀಕರು ಬೀಳು ಬಿಟ್ಟಿರುವ ಭೂಮಿಯನ್ನು ಅವರಿಂದ ಸ್ವಾಧೀನ ಪಡಿಸಿ ಭೂಮಿಯಲ್ಲಿ ಆಸಕ್ತಿ ಹೊಂದಿರುವ ಬಡ ರೈತಾಪಿ ಕುಟುಂಬಗಳಿಗೆ ವಿತರಿಸಬೇಕು. ಭೂಮಿ ಮಾತ್ರವಲ್ಲ, ಅವರಿಗೆ ನೀಡಲಾದ ಭೂಮಿಗೆ ಅಗತ್ಯ ನೀರಾವರಿ, ಗೊಬ್ಬರ, ಬೀಜ, ಕ್ರಿಮಿನಾಶಕಗಳನ್ನು ಒದಗಿಸಬೇಕು. ಅಷ್ಟೇ ಮುಖ್ಯವಾಗಿ ಅವರಿಗೆ ಸರಿಯಾದ ಮಾರುಕಟ್ಟೆ ವ್ಯವಸ್ಥೆ, ಫಸಲು ದಾಸ್ತಾನು ಮಾಡಲು ವ್ಯವಸ್ಥೆ ಹಾಗೂ ಲಾಭದಾಯಕ ಬೆಲೆ ಖಚಿತ ಪಡಿಸಬೇಕು. ಆಗ ಅವರು ಬೆಳೆಯುತ್ತಾರೆ ಬೆವರು ಸುರಿಸಿ. ದೇಶಕ್ಕೆ ಅನ್ನ ನೀಡುತ್ತಾರೆ. ತಾವೂ ಬದುಕುತ್ತಾರೆ, ದೇಶವನ್ನೂ ಬದುಕಿಸುತ್ತಾರೆ. ಭೂಮಿಯನ್ನು ಗುತ್ತಿಗೆಗೆ ಕೊಡುವುದಕ್ಕಿಂತ ಹೆಚ್ಚಾಗಿ ಸಣ್ಣ ಹಿಡುವಳಿದಾರರಿಗೆ ಮತ್ತು ಭೂರಹಿತ ಬಡವರಿಗೆ ಭೂಮಿ ದೊರೆಯುವಂತಾದರೆ ದೇಶದ ಭಾಗ್ಯದ ಬಾಗಿಲು ತೆರೆಯುತ್ತದೆ.


ಜಾಮಿಯ ವಿದ್ಯಾರ್ಥಿಗಳ ಮೇಲೆ ಗುಂಡು ಹಾರಾಟಕ್ಕೆ ಕೇಂದ್ರ ಮಂತ್ರಿಯ ಪ್ರಚೋದನೆ ನೇರ ಹೊಣೆ

ಬಿಜೆಪಿ ಮುಖಂಡರ ಮೇಲೆ ಎಫ್‌ಐಆರ್ ಹಾಕಲು ದಿಲ್ಲಿ ಪೋಲೀಸ್ ಕಮಿಶನರ್‌ಗೆ ಮತ್ತೆ ಆಗ್ರಹ

ಜನವರಿ 29 ರಂದು ಅನುರಾಗ್ ಠಾಕುರ್ ಮತ್ತು ಪರ್ವೇಶ್ ವರ್ಮ ಮೇಲೆ ದ್ವೇಷ ಭಾಷಣ ಮಾಡಿರುವ ಬಗ್ಗೆ ಎಫ್‌ಐಆರ್ ಹಾಕಬೇಕು, ಅದನ್ನು ಭಾರತೀಯ ದಂಡ ಸಂಹಿತೆಯ ಸೆಕ್ಷನ್ 153ಎ/153ಬಿ/295ಎ/298/504/505/506 ಅಡಿಯಲ್ಲಿ ಹಾಕಬೇಕಾಗುತ್ತದೆ ಎಂದು ನಿರ್ದಿಷ್ಟವಾಗಿ ಹೇಳಿದರೂ ದಿಲ್ಲಿ ಪೋಲೀಸ್ ಮತ್ತು ಪೋಲೀಸ್ ಕಮಿಶನರ್ ಏನೂ ಮಾಡದೇ ಇರಲು ಯೋಚಿಸಿರುವಂತೆ ಕಾಣುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಮತ್ತು ದಿಲ್ಲಿ ರಾಜ್ಯ ಸಮಿತಿ ಕಾರ್ಯದರ್ಶಿ ಕೆ.ಎಂ.ತಿವಾರಿ ದಿಲ್ಲಿ ಪೋಲೀಸ್ ಕಮಿಶನರ್ ರವರಿಗೆ ಇನ್ನೊಂದು ದೂರು ಸಲ್ಲಿಸಿದ್ದಾರೆ.

ಈ ನಿಷ್ಕ್ರಿಯತೆಯ ನೇರ ಫಲಿತಾಂಶವಾಗಿ ದಿಲ್ಲಿ ಪೋಲೀಸ್ ಸಿಬ್ಬಂದಿಯ ಕಣ್ಣ ಮುಂದೆಯೇ ಒಬ್ಬ ಸಶಸ್ತ್ರ ವ್ಯಕ್ತಿ ಜಾಮಿಯ ವಿದ್ಯಾರ್ಥಿಗಳ ಮೇಲೆ ಗುಂಡು ಹಾರಿಸಿದ್ದಾನೆ, ಪೋಲೀಸರು ಅದನ್ನು ನೋಡುತ್ತ ನಿಂತಿದ್ದಾರೆ. ತಾನು 'ರಾಮಭಕ್ತ ಗೋಪಾಲ' ಎನ್ನುವ ಈ ವ್ಯಕ್ತಿ ಆಳುವ ಪಕ್ಷದ ಮತ್ತು ಅದರ ಸಿದ್ಧಾಂತಗಳ ಬೆಂಬಲಿಗ. ಅನುರಾಗ್ ಠಾಕುರ್ ತನ್ನ ಬೆಂಬಲಿಗರಿಗೆ ಬಹಿರಂಗವಾಗಿಯೇ ಕರೆ ಕೊಟ್ಟಂತೆ ಗುಂಡು ಹೊಡೆದಿದ್ದಾನೆ. ಈ ಭಯೋತ್ಪಾದಕ ಕೃತ್ಯಕ್ಕೆ ಈ ಮುಖಂಡರ ಹೇಳಿಕೆಗಳೇ ಹೊಣೆ, ಅವರ ಮೇಲೆ ಕಾನೂನಿನ ಅಡಿಯಲ್ಲಿ ಆರೋಪ ಪಟ್ಟಿ ಹಾಕಬೇಕು ಎಂದು ಅವರು ದಿಲ್ಲಿ ಪೋಲೀಸ್ ಕಮಿಶನರ್‌ಗೆ ಕೊಟ್ಟ ದೂರಿನಲ್ಲಿ ಆಗ್ರಹಿಸಿದ್ದಾರೆ.

ಇದಲ್ಲದೆ, ತನ್ನನ್ನು ಹಿಂದೂ ಸೇನೆ ಎಂದು ಹೇಳಿಕೊಳ್ಳುವ ಒಂದು ಸಂಘಟನೆ ಪೋಸ್ಟರುಗಳು ಇತ್ಯಾದಿಗಳ ಮೂಲಕ ಫೆಬ್ರುವರಿ 2ರಂದು ಶಾಹೀನ್ ಬಾಗನ್ನು ಬಲವಂತವಾಗಿ ತೆರವುಗೊಳಿಸುವುದಾಗಿ ಬೆದರಿಕೆ ಹಾಕಿದೆ. ಈ ಭೀತಿ ಹುಟ್ಟಿಸುವ ಪ್ರಯತ್ನ ಕೂಡ ಈ ಮುಖಂಡರುಗಳ ದ್ವೇಷ ಭಾಷಣಗಳ ಪರಿಣಾಮ. ಪೋಲೀಸರು ಈ ಇಬ್ಬರು ಮುಖಂಡರ ಮೇಲೆ ತಕ್ಷಣವೇ ಎಫ್‌ಐಆರ್ ಹಾಕಬೇಕು, ಈ ಸೇನಾದ ವಿರುದ್ಧ ಮುಂದಾಗಿ ಬಲವಾದ ತಡೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಬೃಂದಾ ಕಾರಟ್ ಹಾಗೂ ಕೆ.ಎಂ.ತಿವಾರಿ ದಿಲ್ಲಿ ಪೋಲೀಸ್ ಕಮಿಶನರ್ ಅವರನ್ನು ಆಗ್ರಹಿಸಿದ್ದಾರೆ.



ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ, ನ್ಯೂಸ್‌ಕ್ಲಿಂಗ್. ಇನ್

ದ್ವೇಷ ಕಾರುತ್ತಿರುವವರನ್ನು ಬಂಧಿಸಿ –ಸಿಪಿಐ(ಎಂ) ಪೊಲಿಟ್ ಬ್ಯುರೊ

ದೇಶದ ರಾಜಧಾನಿಯ ಜಾಮಿಯ ನಗರದಲ್ಲಿ ಪೋಲೀಸ್ ಸಿಬ್ಬಂದಿಯ ಒಂದು ದೊಡ್ಡ ತುಕಡಿಯ ಕಣ್ಣ ಮುಂದೆಯೇ ಒಬ್ಬ ಶಸ್ತ್ರಸಜ್ಜಿತ ವ್ಯಕ್ತಿ, ರಾಜಘಾಟ್‌ನತ್ತ ಶಾಂತಿಯುತವಾಗಿ ಮೆರವಣಿಗೆಯಲ್ಲಿ ಹೋಗುತ್ತಿದ್ದ ಜಾಮಿಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಮೇಲೆ ಗುಂಡು ಹಾರಿಸುವ ಅಭೂತಪೂರ್ವ ಘಟನೆ ನಡೆದಿದೆ. ಇದರಲ್ಲಿ ಒಬ್ಬ ವಿದ್ಯಾರ್ಥಿ ಗಾಯಗೊಂಡಿದ್ದಾನೆ. ಈ ಕ್ರಿಮಿನಲ್ ವ್ಯಕ್ತಿ ಸಂಘ ಪರಿವಾರದೊಂದಿಗೆ ಸಂಯೋಜಿತನಾಗಿದ್ದಾನೆ ಎಂದು ಆ ಮೇಲೆ ದೃಢಪಟ್ಟಿದೆ.

ಆತನ ಭಯೋತ್ಪಾದಕ ಕೃತ್ಯ ಒಬ್ಬ ಬಿಜೆಪಿ ಮುಖಂಡ ಮತ್ತು ಮೋದಿ ಸರಕಾರದಲ್ಲಿನ ಮಂತ್ರಿ ಅನುರಾಗ್ ಠಾಕುರ್ ಪ್ರತಿಭಟನಾಕಾರರನ್ನು ದೇಶದ್ರೋಹಿಗಳೆಂದು ಕರೆದು ಅವರಿಗೆ ಗುಂಡಿಕ್ಕುವಂತೆ ಕರೆ ಕೊಟ್ಟಿರುವುದರ, ಜತೆಗೆ ಬಿಜೆಪಿ ಮುಖಂಡರು ಅಮಿತ್ ಷಾ ನೇತೃತ್ವದಲ್ಲಿ ನೀಡುತ್ತಿರುವ ಕೋಮುವಾದಿ ದ್ವೇಷ ಕಾರುವ ಹಾಗೂ ಹಿಂಸಾಚಾರಕ್ಕೆ ಪ್ರಚೋದಿಸುವ ಭಾಷಣಗಳ ನೇರ ಫಲಿತಾಂಶ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೋ ಕಟುವಾಗಿ ಟೀಕಿಸಿದೆ.

ಹಿಂಸಾಚಾರ ಪ್ರಚೋದಿಸುವವರಿಗೆ ಕೃಪಾಪೋಷಣೆ ದೊರಕುತ್ತಿದೆ ಎಂಬುದು, ಒಂದೆಡೆಯಲ್ಲಿ ಶಾಂತಿಯುತ ಪ್ರತಿಭಟನಾಕಾರರನ್ನು ಬಂಧಿಸುತ್ತಿದ್ದರೂ, ಠಾಕುರ್, ಮತ್ತು ದಿಲ್ಲಿ ಎಂಪಿ ಪರ್ವೇಶ್ ವರ್ಮ ಸೇರಿದಂತೆ ಯಾವ ಬಿಜೆಪಿ ಮುಖಂಡರ ಮೇಲೂ ಒಂದೇ ಒಂದು ಎಫ್‌ಐಆರ್ ಹಾಕಿಲ್ಲವೆಂಬ ಸಂಗತಿಯೇ ಬಿಂಬಿಸುತ್ತದೆ ಎಂದು ಅದು ಹೇಳಿದೆ.

ಹಿಂದೂ ಸೇನೆ ಎಂಬೊಂದು ಸಂಘಟನೆ ಫೆಬ್ರುವರಿ 2ರಂದು ಶಾಹೀನ್ ಬಾಗ್ ಮತ್ತಿತರ ರಾಜಧಾನಿಯಲ್ಲಿನ ಪ್ರತಿಭಟನಾ ಸ್ಥಳಗಳ ಮೇಲೆ ದಾಳಿ ಮಾಡುವುದಾಗಿ ಬಹಿರಂಗ ಕರೆ ಕೊಟ್ಟು, ಪೋಸ್ಟರ್‌ಗಳನ್ನು ಹಚ್ಚಿದ್ದರೂ ಅವರ ವಿರುದ್ಧ ಯಾವ ಕ್ರಮವನ್ನೂ ಕೈಗೊಂಡಿಲ್ಲ ಎಂದು ಪೊಲಿಟ್‌ಬ್ಯುರೊ ಆಘಾತ ವ್ಯಕ್ತಪಡಿಸಿದೆ.

ಮುಂಬರುವ ದಿಲ್ಲಿ ಚುನಾವಣೆಗಳಲ್ಲಿ ಸೋಲು ಎದುರಿಸುತ್ತಿರುವ ಬಿಜೆಪಿ ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ, ಬಹಿರಂಗ, ಪ್ರಚೋದನಕಾರಿ ಕೋಮುವಾದಿ ದ್ವೇಷ ಕಾರುವ ಮಾತುಗಳನ್ನು ಹರಡಿಸುವ ಅತ್ಯಂತ ಅಪಾಯಕಾರಿ ದಾರಿಯನ್ನು ಹಿಡಿದಿದೆ, ಸಿಎಎ, ಎನ್‌ಆರ್‌ಸಿ ಮತ್ತು ಎನ್‌ಪಿಆರ್ ವಿರುದ್ಧ ಪ್ರತಿಭಟಿಸುತ್ತಿರುವವರ ಮೇಲೆ ಅದು ಗುರಿಯಿಟ್ಟಿದೆ ಎಂದಿರುವ ಪೊಲಿಟ್‌ಬ್ಯುರೊ ಅನುರಾಗ್ ಠಾಕುರ್ ಮತ್ತು ಪರ್ವೇಶ್ ವರ್ಮ ವಿರುದ್ಧ ಎಫ್‌ಐಆರ್ ಹಾಕಬೇಕು, ಚುನಾವಣಾ ಆಯೋಗ ಗೃಹಮಂತ್ರಿಗೆ ಅವರ ದ್ವೇಷ ಭಾಷಣಗಳ ವಿರುದ್ಧ ನೋಟೀಸು ಕೊಡಬೇಕು ಮತ್ತು ಹಿಂದು ಸೇನಾದ ಮೇಲೆ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.

ಬಿಜೆಪಿ ಹಗೆಕೋರರಿಂದ ಪ್ರಚೋದಿತರಾಗಬಾರದು, ಚುನಾವಣೆಗಳಲ್ಲಿ ಅವರ ಸೋಲನ್ನು ಖಾತ್ರಿಪಡಿಸಿ ರಾಜಧಾನಿಯಲ್ಲಿ ಕೋಮುಸೌಹಾರ್ದ ಮತ್ತು ಶಾಂತಿ ಕಾಪಾಡಿಕೊಳ್ಳಬೇಕು ಎಂದು ಅದು ದಿಲ್ಲಿಯ ಜನತೆಗೆ ಮನವಿ ಮಾಡಿಕೊಂಡಿದೆ.

ಬೆಳ್ತಂಗಡಿ ದಲಿತ ಕೇರಿಯಲ್ಲಿ ಸಹಪಂಕ್ತಿ ಭೋಜನ

ಭಾರತ ಹಲವು ಧರ್ಮ, ಜಾತಿ, ಭಾಷೆಗಳನ್ನು ಒಳಗೊಂಡ ಅನನ್ಯವಾದ ದೇಶ. ಜಾತ್ಯಾತೀತ ಸಿದ್ಧಾಂತದಡಿಯಲ್ಲಿರುವ ನಮ್ಮ ದೇಶಕ್ಕೆ ಜಾತಿ ಎಂಬ ಮಾರಕ ರೋಗವು ಅಂಟಿಕೊಂಡಿದೆ. ದೇಶಕ್ಕೆ ಸ್ವಾತಂತ್ರ್ಯ ಲಭಿಸಿ 73 ವರ್ಷಗಳಾಗುತ್ತಿದ್ದರೂ ಇನ್ನು ಜಾತಿ ಎಂಬ ಕಾರಣಕ್ಕಾಗಿ ದಲಿತ ಸಮುದಾಯವನ್ನು ಮಲಿನ ಎಂಬಂತೆ ನೋಡಲಾಗುತ್ತಿದೆ. ಕೈಗೆ ವಾಚ್ ಕಟ್ಟಿದ ಕಾರಣಕ್ಕಾಗಿ ಕೈಕಡಿಯುವ, ದೇವಸ್ಥಾನ ಪ್ರವೇಶಿಸಿದ ಕಾರಣಕ್ಕಾಗಿ ಕಾಲು ಕಡಿಯುವ ಅತ್ಯಂತ ಅಮಾನವೀಯ ಜಾತಿ ತಾರತಮ್ಯ ನಮ್ಮಲ್ಲಿ ಕಾಣಸಿಗುತ್ತದೆ. ಜಾತಿ ಕಾರಣಕ್ಕಾಗಿ ಮಹಿಳಾ ಪೋಲಿಸ್ ಪೇದೆಯೊಬ್ಬರನ್ನು ಮೂಡಬಿದ್ರೆ ಸಮೀಪದ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಪ್ರವೇಶ ನಿರಾಕರಿಸಿರುವುದು ಬುದ್ಧಿವಂತರ, ಶಿಕ್ಷಣವಂತರ ಜಿಲ್ಲೆಯ ದುರಂತವಾಗಿ ಇತಿಹಾಸದ ಪುಟ ಸೇರಿದೆ. ಇನ್ನೊಂದೆಡೆ ಮೇಲ್ಜಾತಿಯವರ ಮನೆ ಪ್ರವೇಶದಂತಹ ಅಮಾನವೀಯ ಪದ್ಧತಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇನ್ನೂ ಜಾರಿಯಲ್ಲಿದೆ. ಇಂತಹ ಅಮಾನವೀಯ ಜಾತಿ ಅಸ್ಪೃಶ್ಯತೆಯ ಬಗ್ಗೆ ಜನ ಜಾಗೃತಿಗಾಗಿ ದಲಿತ ಹಕ್ಕುಗಳ ಸಮಿತಿ ಬೆಳ್ತಂಗಡಿ ತಾಲೂಕು ಸಮಿತಿ ವತಿಯಿಂದ ಹಲವಾರು ವರ್ಷಗಳಿಂದ ದಲಿತರ ಮನೆಯಲ್ಲಿ ದಲಿತರೊಂದಿಗೆ ಸಮಾನತೆಗಾಗಿ ಸಹಪಂಕ್ತಿ ಭೋಜನ ಎಂಬ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ನಾಡಿನ ಪ್ರಗತಿಪರ ಸ್ವಾಮೀಜಿಗಳು ಸೇರಿದಂತೆ ಚಿಂತಕರು, ಹೋರಾಟಗಾರರು ಭಾಗವಹಿಸುತ್ತಿದ್ದಾರೆ.

ಈ ವರ್ಷದ ಜನವರಿ 26ರ ಪ್ರಜಾಪ್ರಭುತ್ವ ದಿನದಂದು ಬೆಳ್ತಂಗಡಿ ತಾಲೂಕಿನ ಲ್ಯಾಲ ಗ್ರಾಮದ ಅಂಬೇಡ್ಕರ್ ರಸ್ತೆಯ ಪುತ್ರಬೈಲು ದಲಿತ ಕಾಲೋನಿಯಲ್ಲಿ ತುಮಕೂರು ಜಿಲ್ಲೆಯ ಕುರ್ವೆಕೆರೆ ತಾಲೂಕಿನ ಬಿ. ಕಲ್ಕೇರ ಶ್ರೀ ಅಲ್ಲಮಪ್ರಭು ಮಠದ ಶ್ರೀ ತಿಪ್ಪೇರುದ್ರ ಸ್ವಾಮೀಜಿಯವರ ಉಪಸ್ಥಿತಿಯಲ್ಲಿ ಸಹಪಂಕ್ತಿ ಭೋಜನ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮವನ್ನು ದಲಿತ ಹಕ್ಕುಗಳ ಸಮಿತಿ ಹಾಗೂ ಶ್ರಮಶಕ್ತಿ ಸ್ವಸಹಾಯ ಗುಂಪುಗಳ ಒಕ್ಕೂಟ ಜಂಟಿಯಾಗಿ ಸಂಘಟಿಸಿತ್ತು. ನೂರಾರು ಜನ ಭಾಗವಹಿಸುವ ಮೂಲಕ ಪ್ರಜಾಪ್ರಭುತ್ವ ದಿನದಂದು ಅತ್ಯಂತ ಮಾದರಿ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಶ್ರೀ ತಿಪ್ಪೇರುದ್ರ ಸ್ವಾಮೀಜಿಯವರು ಹಿಂದು ಧರ್ಮದಲ್ಲಿ ಹುಟ್ಟಿದ ದಲಿತ ಸಮುದಾಯವನ್ನು ಸಾಕು ಪ್ರಾಣಿಗಿಂತಲೂ ಕಡೆಯಾಗಿ ನೋಡಿಕೊಳ್ಳುವ ಅಮಾನವೀಯ ಕಾರ್ಯ ನಡೆಯುತ್ತಿದೆ. ಇದು ಬದಲಾಗದೆ ದಲಿತರು ಸಮಾಜದ ಮುಖ್ಯ ವಾಹಿನಿಗೆ ಬರಲು ಸಾಧ್ಯವಿಲ್ಲ ಎಂದರು. ಪ್ರಾಣಿಗಳನ್ನು ಪ್ರೀತಿಸಲು ಕಲಿಸುವ ಧರ್ಮ ಮನುಷ್ಯನನ್ನು ಪ್ರೀತಿಸಲು ಕಲಿಸದಿರುವುದು ದುರಂತ. ಸರ್ಕಾರಗಳು ದಲಿತರಿಗಾಗಿ ಕೇವಲ ಸೌಲಭ್ಯಗಳನ್ನು ನೀಡುವ ಬದಲಾಗಿ ಅವರನ್ನು ಸ್ವಾಭಿಮಾನದಿಂದ ಬದುಕಲು ಅವಕಾಶ ಕಲ್ಪಿಸುವುದು ಇಂದಿನ ತುರ್ತು ಅಗತ್ಯವಾಗಿದೆ. ದಲಿತ ಸಮುದಾಯ ಭಾರತೀಯ ಸಂಸ್ಕೃತಿಯಲ್ಲಿ ಒಂದು ಭಾಗವಾಗಿರುವ ಹಿಂದೂ ಧರ್ಮವನ್ನು ಮನಸಾರೆ ಒಪ್ಪಿಕೊಂಡಿದ್ದರೂ ಅಲ್ಲಿರುವ ಜಾತಿ ಅಸ್ಪೃಶ್ಯತೆ, ಮೂಢನಂಬಿಕೆ, ಅಸಮಾನತೆಗಳಿಂದ ಇಡೀ ಸಮಾಜದ ಅಭಿವೃದ್ಧಿಗೆ ಅಡ್ಡಿಯಾಗಿದೆ. ಸಮಾಜಕ್ಕೆ ಅಂಟಿಕೊಂಡಿರುವ ಕ್ಯಾನ್ಸರ್‌ಗಳಿಗಿಂತಲೂ ಭೀಕರವಾಗಿರುವ ಜಾತಿ ಅಸಮಾನತೆಯ ವಿರುದ್ಧ ಸಮಾನತೆಗಾಗಿ ಎರಡನೇ ಸ್ವಾತಂತ್ರ ಹೋರಾಟದ ಮಾದರಿಯ ಚಳವಳಿ ಅಗತ್ಯವಿದೆ. ದಲಿತ ಸಮುದಾಯವನ್ನು ಇತರರಂತೆ ಸಮಾನವಾಗಿ ಕಂಡು ಪ್ರೀತಿಸುವ ಕಾರ್ಯ ಸಂವಿಧಾನದಡಿಯಲ್ಲಿ ನಡೆಯಬೇಕು. ಭಾರತವು ಸಂವಿಧಾನದ ಆಶಯಗಳಿಗೆ ವಿರುದ್ಧವಾದ ನೀತಿಗಳನ್ನು ಜಾರಿಮಾಡುತ್ತಿರುವ ಈ ಸಂದರ್ಭದಲ್ಲಿ ಜಾತಿ ತಾರತಮ್ಯದ ವಿರುದ್ಧವಾಗಿ, ಪ್ರಜಾಪ್ರಭುತ್ವದ ರಕ್ಷಣೆಗಾಗಿ, ಸಮಾನತೆಯ ಸಮಾಜ ನಿರ್ಮಾಣಕ್ಕಾಗಿ, ಸಂವಿಧಾನದ ರಕ್ಷಣೆಗಾಗಿ 71ನೇ ಗಣರಾಜ್ಯೋತ್ಸವ ಸಂದರ್ಭ ನಡೆದ ಈ ಸಹಪಂಕ್ತಿ ಭೋಜನ ಕಾರ್ಯಕ್ರಮ ಇಡೀ ದೇಶಕ್ಕೆ ಮಾದರಿಯಾಗಿದೆ ಎಂದು ಸ್ವಾಮೀಜಿ ಅಭಿಪ್ರಾಯಪಟ್ಟರು.



ಮುಖ್ಯ ಅತಿಥಿಯಾಗಿ ಭಾಗವಹಿಸಿದ ಬೆಳ್ತಂಗಡಿ ತಹಶೀಲ್ದಾರ್ ಗಣಪತಿ ಶಾಸ್ತ್ರಿ ಮಾತನಾಡಿ ಸಮಾಜದ ಮುಖ್ಯ ವಾಹಿನಿಗೆ ಬರುವ ಹಲವಾರು ಅವಕಾಶಗಳನ್ನು ಸರ್ಕಾರ ಪ್ರತಿಯೊಬ್ಬರಿಗೂ ರೂಪಿಸಿದೆ. ನಾವು ಹಿಂದುಳಿದವರು ಎಂಬ ಭಾವನೆ ಬಿಟ್ಟು ಸಮಾಜದಲ್ಲಿ ಅವಕಾಶಗಳನ್ನು ಬಳಸಿಕೊಂಡು ಮುನ್ನಲೆಗೆ ಬರಬೇಕು. ದಲಿತ ಸಮುದಾಯ ಶಿಕ್ಷಣದ ಮೂಲಕ ತಮ್ಮ ಮೇಲೆ ಆಗುತ್ತಿರುವ ದೌರ್ಜನ್ಯದ ವಿರುದ್ಧ ಸಿಡಿದೆದ್ದು, ದೌರ್ಜನ್ಯದಿಂದ ಹೊರಬರಲು ಪ್ರಯತ್ನಿಸಬೇಕು ಎಂದರು. ಸಂಗಾತಿ ಎ.ಕೆ. ಗೋಪಾಲನ್ ಬೀಡಿ ಕಾರ್ಮಿಕರ ಗೃಹ ನಿರ್ಮಾಣ ಸಹಕಾರಿ ಸಂಘದ ಅಧ್ಯಕ್ಷ ಹರಿದಾಸ್ ಎಸ್.ಎಮ್. ಮಾತನಾಡಿ ಪ್ರಜಾಪ್ರಭುತ್ವ, ಜಾತ್ಯಾತೀತ ಪರಂಪರೆ ಉಳಿಸಲು, ಜಾತಿ ತಾರತಮ್ಯದ ವಿರುದ್ಧವಾಗಿ ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯಲು ನಡೆದಿರುವ ಈ ಅರ್ಥಪೂರ್ಣ ಕಾರ್ಯಕ್ರಮ ಜಾತಿತಾರತಮ್ಯದ ವಿರುದ್ಧದ ಹೋರಾಟಕ್ಕೆ ಮಾದರಿಯಾಗಲಿ ಎಂದರು.

ಪುಂಜಾಲಕಟ್ಟೆ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಸುಜಿತ್ ಉಜಿರೆ ಮಾತನಾಡಿ ಸಂವಿಧಾನ ಅನುಷ್ಠಾನಕ್ಕೆ ಬಂದ ದಿನದಂದು ಆಯೋಜಿಸಿರುವ ಸಹಪಂಕ್ತಿ ಭೋಜನ ಅರ್ಥಪೂರ್ಣ. ಶೋಷಣ ಮುಕ್ತ ಜಾತಿ ರಹಿತ ಸಮಾಜ ನಿರ್ಮಾಣಕ್ಕಾಗಿ ಇಂತಹ ಕಾರ್ಯಕ್ರಮಗಳು ನಡೆಯಬೇಕಾದ ತುರ್ತು ಅನಿವಾರ್ಯತೆಯಿದೆ ಎಂದರು. ದಲಿತ ಹಕ್ಕುಗಳ ಸಮಿತಿ ಅಧ್ಯಕ್ಷ ಶೇಖರ್.ಎಲ್. ಸ್ವಾಗತಿಸಿ ವಂದಿಸಿದರು.

ಕಾರ್ಯಕ್ರಮದ ಬಳಿಕ ದಲಿತ ಸಮುದಾಯಕ್ಕೆ ಸೇರಿದ ಕೊರಗಪ್ಪ ಅವರ ಮನೆಯಲ್ಲಿ ತುರುವೆಕೆರೆ ಬಿ.ಕಲ್ಕೆರೆ ಅಲ್ಲಮಪ್ರಭು ಮಠದ ತಿಪ್ಪೇರುದ್ರ ಸ್ವಾಮೀಜಿ, ತಹಶೀಲ್ದಾರ್ ಗಣಪತಿ ಶಾಸ್ತ್ರಿ ಸೇರಿದಂತೆ ಅತಿಥಿಗಳು ದಲಿತರೇ ತಯಾರಿಸಿದ ಅಡುಗೆಯನ್ನು ಸಹಪಂಕ್ತಿ ಭೋಜನದಲ್ಲಿ ಸವಿಯುವ ಮೂಲಕ ಸಮಾನತೆಯ ಸಂದೇಶ ಸಾರಿದರು.

ಅರ್ಧಕ್ಕೆ ನಿಂತಿರುವ ಕಾಂಕ್ರೀಟೀಕರಣವನ್ನು ಪೂರ್ಣಗೊಳಿಸಲು ಒತ್ತಾಯ– ಡಿವೈಎಫ್ಐ

ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಡುವ ಬಜಾಲ್ ಪಕ್ಕಲಡ್ಕ ಪ್ರದೇಶದ ಮುಖ್ಯರಸ್ತೆಯಲ್ಲಿ ನಗರ ಪಾಲಿಕೆ ಕೈಗೊಂಡಿರುವ ಕಾಂಕ್ರೀಟೀಕರಣ ಕೆಲಸವು ಅರ್ಧಕ್ಕೆ ನಿಂತಿದ್ದು ಇದನ್ನು ಕೂಡಲೇ ನಡೆಸಿ ಪೂರ್ಣಗೊಳಿಸಬೇಕೆಂದು ಡಿವೈಎಫ್ಐ ಬಜಾಲ್ ಪಕ್ಕಲಡ್ಕ ಘಟಕ ಒತ್ತಾಯಿಸಿದೆ.

ಅಳಪೆ ದಕ್ಷಿಣ ವಾರ್ಡ್ ಗೆ ಒಳಗೊಂಡಿರುವ ಪಡೀಲ್ ಬಜಾಲ್ ಮುಖ್ಯರಸ್ತೆಯ ಪಕ್ಕಲಡ್ಕದಿಂದ ಬಜಾಲ್ ಚರ್ಚ್ ವರೆಗಿನ ರಸ್ತೆ ಕಾಂಕ್ರೀಟೀಕರಣಗೊಳಿಸಲು ಕಾಮಗಾರಿ ಕೆಲಸ ಕೈಗೊಂಡು ತಿಂಗಳುಗಳು ಕಳೆದಿದೆ ಈ ವರೆಗೂ ಈ ರಸ್ತೆಯನ್ನು ಪೂರ್ಣಗೊಳಿಸಲು ಸಾಧ್ಯವಾಗಿಲ್ಲ. ಕಾಮಗಾರಿ ಪ್ರಾರಂಭಗೊಂಡ ದಿನದಿಂದ ಈವರೆಗೂ ಆಮೆವೇಗದಲ್ಲಿ ಸಾಗುತ್ತಿದ್ದ ಕೆಲಸ ನಿನ್ನೆಯಿಂದ ಅದೂ ಕೂಡ ನಿಂತಿದೆ. ಕಾಮಗಾರಿ ಕೆಲಸ ಕೈಗೆತ್ತಿಕೊಂಡ ಕಂಪೆನಿ ಯಾವುದೋ ನೆಪವೊಡ್ಡಿ ತನ್ನ ಸಂಪೂರ್ಣಕೆಲಸವನ್ನು ಸ್ಥಗಿತಗೊಳಿಸಿದೆ. ಈಗಾಗಲೇ ಈ ಪ್ರದೇಶದ ನಿವಾಸಿಗಳು, ಸ್ಥಳೀಯ ಶಾಲಾ ಮಕ್ಕಳು ದಿನನಿತ್ಯ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ರಸ್ತೆಯಲ್ಲಿ ಬಸ್ ಓಡಾಟ ನಿಂತುಹೋಗಿದೆ. ಸ್ಥಳೀಯ ಜನಸಾಮಾನ್ಯರು, ವಿದ್ಯಾರ್ಥಿಗಳು ನಡೆದಾಡಲು ಕಷ್ಟಪಡುವಂತಾಗಿದೆ. ದ್ವಿಚಕ್ರ ವಾಹನ ಸವಾರರು ಬಹಳಷ್ಟು ಬಾರಿ ಬಿದ್ದು ಗಾಯಗೊಂಡಿರುತ್ತಾರೆ. ಈ ನಿಧಾನಗತಿಯ ಕಾಮಗಾರಿ ಬಗ್ಗೆ ಹಲವಾರು ಬಾರಿ ಮನಪಾ ಆಡಳಿತದ ಅಧಿಕಾರಿಗಳ ಗಮನಕ್ಕೆ ತರಲಾಯಿತು. ಪ್ರತಿಭಟನೆಯ ಭಾಗವಾಗಿ ಸಾರ್ವಜನಿಕರೇ ಶ್ರಮದಾನದ ಮೂಲಕ ರಸ್ತೆ ರಿಪೇರಿ ಮಾಡಿದರೂ ಮನಪಾ ಆಡಳಿತ ಈ ಬಗ್ಗೆ ಗಮನಹರಿಸಲೇ ಇಲ್ಲ. ಈ ರಸ್ತೆಯ ಅವ್ಯವಸ್ಥೆಯಿಂದ ಸ್ಥಳೀಯ ನಿವಾಸಿಗಳು ಆಕ್ರೋಶಗೊಂಡಿರುತ್ತಾರೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ನಿಂತುಹೋಗಿರುವ ಕಾಮಗಾರಿಯನ್ನು ಪ್ರಾರಂಭಿಸಿ ಆದಷ್ಟು ಬೇಗ ರಸ್ತೆ ನಿರ್ಮಾಣ ಕೆಲಸ ಪೂರ್ಣಗೊಳಿಸಿ ಕೊಡಬೇಕು ಇಲ್ಲದಿದ್ದಲ್ಲಿ ಈ ಬಗ್ಗೆ ಮುಂದಿನ ದಿನ ಪ್ರತಿಭಟನೆಯನ್ನು ನಡೆಸಲಾಗುವುದು ಎಂಬ ಎಚ್ಚರಿಕೆಯನ್ನು ಡಿವೈಎಫ್ಐ ಬಜಾಲ್ ಪಕ್ಕಲಡ್ಕ ಘಟಕದ ಅಧ್ಯಕ್ಷರಾದ ನೂರುದ್ದೀನ್ ಪಕ್ಕಲಡ್ಕ, ಕಾರ್ಯದರ್ಶಿ ಧಿರಾಜ್ ಬಜಾಲ್ ಜಂಟಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

–ನೂರುದ್ದೀನ್ ಪಕ್ಕಲಡ್ಕ



ಜನವರಿ 30, ಹುತಾತ್ಮ ದಿನದಂದು
ಸಿಎಎ, ಎನ್ಆರ್‌ಸಿ, ಎನ್‌ಪಿಆರ್ ವಿರೋಧಿಸಿ ಪ್ರತಿಭಟನಾ ಸಭೆ

ಬೆಂಗಳೂರಿನ ಸಿ.ವಿ.ರಾಮನ್ ನಗರ ನಾಗರಿಕ ವೇದಿಕೆ ವತಿಯಿಂದ, ಜನವರಿ 30, ರಂದು, ಪೌರತ್ವ ತಿದ್ದುಪಡಿ ಕಾಯಿದೆ, ರಾಷ್ಟ್ರೀಯ ಪೌರತ್ವ ನೊಂದಾಣಿ, ಮತ್ತು ರಾಷ್ಟ್ರೀಯ ಜನಸಂಖ್ಯೆ ನೊಂದಾಣಿ ತಿರಸ್ಕರಿಸಿ ಬೃಹತ್ ಪ್ರತಿಭಟನೆ ಸಭೆಯನ್ನು ಏರ್ಪಡಿಸಲಾಗಿತ್ತು. ಈ ಸಭೆಯಲ್ಲಿ, ಮಾಜಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಪ್ರಸಿದ್ಧ ಚಲನಚಿತ್ರದ ಕಲಾವಿದರಾದ, ಮುಖ್ಯ ಮಂತ್ರಿ ಚಂದ್ರು, ಸಿಐಟಿಯು ವಿನ, ರಾಜ್ಯ ಕಾರ್ಯದರ್ಶಿಯಾದ, ಕೆ.ಎನ್. ಉಮೇಶ್, ಅರೇಬಿಕ್ ಕಾಲೇಜಿನ ಪ್ರಾಧ್ಯಾಪಕರಾದ, ಮೌಲಾನ ಆಸಿಂ ಅಬ್ದುಲ್ಲಾ ಸಾಹೇಬರು, ಪ್ರಸಿದ್ಧ ಕನ್ನಡ ಸಾಹಿತಿಗಳಾದ, ಶ್ರೀ. ಮುಕುಂದ್ ರಾಜ್ ಲಕ್ಕೇನಾ ಹಳ್ಳಿ ಯರು, ದಲಿತ ಸಂಘಟನೆಯ ನಾಯಕರಾದ, ಭಾಸ್ಕರ್ ಪ್ರಸಾದ್ ರವರು, ದಲಿತ ಸಂಘಟನೆಯ, ಎ.ಜೆ.ಖಾನ್, ಮುನಿ ಮಾರಪ್ಪ, ಇನ್ನಿತರರು ಭಾಗವಹಿಸಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಸಭೆಯ ಅಧ್ಯಕ್ಷ ತೆಯನ್ನು ಜಮೆತೆ ಉಲೆಮಾ ಎ ಹಿಂದ್ ನ, ಮಹಾ ಕಾರ್ಯದರ್ಶಿ, ಮುಫ್ತಿ ಶಂಷುದ್ದೀನ್ ಸಾಹೇಬ್ ರವರು ವಹಿಸಿದ್ದರು. ಕಾರ್ಯಕ್ರಮದ ನಿರೂಪಣೆ ಮತ್ತು ಪ್ರಸ್ತಾವಿಕ ಭಾಷಣವನ್ನು ಡಿಎಸ್ಎಮ್ ಎಮ್ ನ ರಾಷ್ಟ್ರೀಯ ಸದಸ್ಯರಾದ ನಾಗರಾಜ ನಂಜುಂಡಯ್ಯ ನವರು ನಡೆಸಿಕೊಟ್ಟರು. ಸುಮಾರು 3000 ದಷ್ಟು ಸ್ಥಳೀಯ ಜನತೆ ಈ ಪ್ರತಿಭಟನೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸಿಎಎ, ಎನ್ ಆರ್ ಸಿ ಮತ್ತು ಎನ್.ಪಿಆರ್ ಕಾಯಿದೆಗಳು ಸಂವಿಧಾನ ವಿರೋಧಿ ಯಾಗಿರುವುದರಿಂದ, ಇವುಗಳನ್ನು ವಾಪಸ್ಸು ಪಡೆಯಬೇಕೆಂದು ಭಾಷಣಕಾರರ ಒಮ್ಮತದ ಅಭಿಪ್ರಾಯ ವಾಗಿತ್ತು, ಜ್ಯೋತಿ ನಿವಾಸ್ ಕಾಲೇಜಿನ ವಿದ್ಯಾರ್ಥಿ, ನೂರ್ ರವರು ಅಜಾದಿ ಘೋಷಣೆಗಳನ್ನು ನೀಡಿ, ನೆರೆದಿದ್ದ ಜನರಲ್ಲಿ ರೋಮಾಂಚನದ ಸಂಚಲನ ಮೂಡಿಸಿದರು. ಕೊನೆಯಲ್ಲಿ ಹೆಬ್ಬಾಳ್ ವೆಂಕಟೇಶ್ ರವರಿಂದ, ಯಾರಿಗೆ ಬಂತು ಎಲ್ಲಿಗೆ ಬಂತು ಮೋದಿಯವರ ಸರ್ಕಾರದ ಆಡಳಿತ ಎಂಬ ಕ್ರಾಂತಿಗೀತೆ ಜನರ ಮನಸ್ಸನ್ನು ನಾಟಿತು.

ಆಮ್ ಆದ್ಮಿ ಪಕ್ಷದ ಜಗದೀಶ್, ಮಾಜಿ ಮೇಯರ್ ರವರಾದ, ಸಂಪತ್ ಕುಮಾರ್, ಕಾಂಗ್ರೇಸ್ ಮುಖಂಡರಾದ, ನಾಗರಾಜ ಯಾದವ್, ಜೆಡಿಎಸ್ ಮುಂಖಡರುಗಳು, ಡಿವೈಎಫ್ಐ ರಾಜ್ಯ ಮುಂಖಡರಾದ ಎಂ.ನಂಜೇಗೌಡ, ಡಿಎಚ್ಎಸ್ ನ ರಾಜ್ಯ ಮುಂಖಡರಾದ ಶರಣಪ್ಪಟಿ.ವಾಲಿ, ಹೋರಾಟಗಾರರಾದ, ಸಿ.ರಮೇಶ್, ಮುನಿಕೃಷ್ಣ, ಶ್ರೀನಿವಾಸ್, ಕಾಂಗ್ರೇಸ್ ನ ಹಲವಾರು ಸ್ಥಳಿಯ ಕಾರ್ಪೋರೇಟ್ ರಗಳಾದ, ಆನಂದ್ ಕುಮಾರ್, ಅಭಿರೆಡ್ಡಿ, ಹಾಗೂ ಅನೇಕ ಸ್ಥಳಿಯ ಪ್ರಗತಿಪರರು, ಭಾಗವಹಿಸಿದ್ದರು. ಮೊಟ್ಟ ಮೊದಲ ಬಾರಿಗೆ, ಈ ವೇದಿಕೆಯಿಂದ ನಡೆಸಿದ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ನಡೆಯಿತು.

ವರದಿ :– ಶರಣಪ್ಪಟಿ.ವಾಲಿ
ಮತ್ತು ಎಂ.ನಂಜೇಗೌಡ

ವರದಿ: **ಹೆಚ್.ಜಿ. ನಾಗಣ್ಣ**

ದಲಿತ ಹಕ್ಕುಗಳ ಸಮಿತಿಯಿಂದ ವಿಧಾನ ಸೌಧ ಚಲೋ



ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್.ಸಿ.ಎಸ್.ಪಿ) ಮತ್ತು ಬುಡಕಟ್ಟು ಉಪ ಯೋಜನೆ (ಟಿ.ಎಸ್.ಪಿ) ಕಾಯಿದೆಯ ಅಡಿಯಲ್ಲಿ, ದಲಿತ ಮತ್ತು ಬುಡಕಟ್ಟು ಸಮುದಾಯದ ಜನಸಂಖ್ಯೆಗೆ ಅನುಗುಣವಾಗಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ಪ್ರತಿ ವಾರ್ಷಿಕ ಬಜೆಟ್ ನಲ್ಲಿ, ಹಣವನ್ನು ಒದಗಿಸಬೇಕು. ಕರ್ನಾಟಕ ರಾಜ್ಯದಲ್ಲಿ ಸಿದ್ದರಾಮಯ್ಯ ನವರ ಆಡಳಿತದಲ್ಲಿ, ಈ ಕಾಯಿದೆ 2013 ರಲ್ಲಿ ಅನುಷ್ಠಾನಕ್ಕೆ ಬಂದಿತು.

ಇದರ ಪ್ರಕಾರ, ಕಳೆದ 2015 ರಿಂದ 2019 ರ ವರೆವಿಗೂ, ಸುಮಾರು, 1,00,000 ಕೋಟಿ ರೂಗಳನ್ನು, ಈ ಉಪ ಯೋಜನೆ ಅಡಿಯಲ್ಲಿ ಹಂಚಲಾಗಿದೆ. ಕಳೆದ ಸಾಲಿನ ಬಜೆಟ್ 2019–2020, ರಲ್ಲಿ ಸುಮಾರು, ರೂ.30,000 ಕೋಟಿ ನೀಡಲಾಗಿದೆ. ಸರ್ಕಾರದ 33 ಇಲಾಖೆಗಳಿಗೂ ಈ ಹಣವನ್ನು ಸಮಾಜ ಕಲ್ಯಾಣ ಇಲಾಖೆಯ ಮೂಲಕ ಹಂಚಲಾಗುತ್ತದೆ. ಈ ಹಣ ಸರಿಯಾಗಿ ಸಂಬಂಧ ಪಟ್ಟವರಿಗೆ ತಲುಪುತ್ತಿದೆಯೇ ? ಎಂದು ಪರಿಶೀಲನೆ ನಡೆಸಲು ಮುಖ್ಯ ಮಂತ್ರಿಯವರ ನೇತೃತ್ವದಲ್ಲಿ " ಉಸ್ತುವಾರಿ ಸಮಿತಿ" ಯು ಅಸ್ತಿತ್ವ ದಲ್ಲಿದೆ. ಇದು ಕಾಯಿದೆಯ ನೀತಿ ನಿಯಮಗಳ ಪ್ರಕಾರವೇ ರಚಿಸಲಾಗಿದೆ. ದಲಿತರು ಮತ್ತು ಬುಡಕಟ್ಟು ಸಮುದಾಯಕ್ಕೆ ಈ ಹಣ ಸರಿಯಾಗಿ ಧಕ್ಕುತ್ತಿಲ್ಲ ಎಂಬುದು ಜಗಜ್ಜಾಹಿರವಾದ ಸಂಗತಿ.

ಎಸ್.ಸಿ.ಎಸ್.ಪಿ ಮತ್ತು ಟಿ ಎಸ್ ಪಿ ಅಡಿಯಲ್ಲಿ ಹಂಚಿಕೆಯಾದ ಹಣವನ್ನು ಈ ಎರಡು ಸಮುದಾಯದ ಅಭಿವೃದ್ಧಿ ಗಾಗಿ ಮಾತ್ರವೇ ಬಳಸಬೇಕು. ಬದಲಿಗೆ ಈ ಹಣವನ್ನು ಬೇರೆ ಕೆಲಸ ಕಾಮಗಾರಿ ಗಳಿಗೆ ಬಳಸಿದರೆ, ಅಂತಹ ಅಧಿಕಾರಿಗಳಿಗೆ ಶಿಕ್ಷೆಗೆ ಒಳ ಪಡಿಸಬೇಕು ಎಂದು ಕಾಯಿದೆಯು ಸ್ಪಷ್ಟವಾಗಿ ಸೂಚಿಸಿದೆ. ಈ ನಿಟ್ಟಿನಲ್ಲಿ ಸರ್ಕಾರ ಸರಿಯಾಗಿ ಕೆಲಸ ನಿರ್ವಹಣೆ ಮಾಡುತ್ತಿಲ್ಲ ವೆಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ.

ಈ ಹಿನ್ನೆಲೆಯಲ್ಲಿ, ದಲಿತ ಹಕ್ಕು ಗಳ ರಾಜ್ಯ ಸಮಿತಿ ಕೂಲಂಕಷವಾಗಿ ವಿಮರ್ಶಿಸಿ, ಈ ಕೆಳಕಂಡ ಬೇಡಿಕೆಗಳನ್ನು ಸರ್ಕಾರದ ಮುಂದಿಡಲು ತೀರ್ಮಾನಿಸಿ, ಇದೇ ಜನವರಿ 28 ರಂದು, ರಾಜ್ಯ ಮಟ್ಟದ ಪ್ರತಿಭಟನೆಯನ್ನು ನಡೆಸಿದೆ. ಸುಮಾರು ಸಾವಿರಕ್ಕೂ ಹೆಚ್ಚು ದಲಿತ ಮತ್ತು ಬುಡಕಟ್ಟು ಸಮುದಾಯ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿ ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ.

ಅಂದು ನಡೆದ ವಿಧಾನ ಸೌಧ ಚಲೋ ಕಾರ್ಯಕ್ರಮವು, ಬೆಳಿಗ್ಗೆ 12 ಗಂಟೆಗೆ " ಬೆಂಗಳೂರಿನ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಿಂದ ಆರಂಭಗೊಂಡಿತು. ಸುಮಾರು 1 ಗಂಟೆಗೆ ಸ್ವಾತಂತ್ರ್ಯ ಉದ್ಯಾನದ ಬಳಿ ಬಂದು, ಸುಮಾರು ಮೂರು ಗಂಟೆಯ ವರೆಗೂ ಬಹಿರಂಗ ಸಭೆಯನ್ನು ನಡೆಸಲಾಯಿತು.

ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ನಾಗರಾಜ ನಂಜುಂಡಯ್ಯ ವಹಿಸಿದ್ದರು. ಮುಖ್ಯ ಭಾಷಣಕಾರರಾಗಿ, ಡಿಎಚ್ಎಸ್ ನ ರಾಜ್ಯ ಸಂಚಾಲಕರಾದ, ಗೋಪಾಲಕೃಷ್ಣ ಹರಳಹಳ್ಳಿ ಸಹ ಸಂಚಾಲಕರಾದ, ಮಾರುತಿ ಮಾನ್ಪಡೆ ಯವರು, ದೇವದಾಸಿ ಮಹಿಳಾ ವಿಮೋಚನೆ ಸಂಘದ ರಾಜ್ಯಾಧ್ಯಕ್ಷರಾದ ಮಾಳಮ್ಮನವರು, ರಾಜ್ಯ ಪ್ರಾಂತ್ಯ ರೈತ ಸಂಘದ ರಾಜ್ಯದ ಪ್ರಧಾನ ಕಾರ್ಯ ದರ್ಶಿಯವರಾದ ಯು.ಬಸವರಾಜು ರವರು, ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಡಿಎಚ್ಎಸ್ ನ ರಾಜ್ಯದ ಮುಖಂಡರುಗಳಾದ, ಜಂಬಯ್ಯ ನಾಯಕರು, ಎನ್.ರಾಜಣ್ಣ, ಮಂಡ್ಯದ ಕೃಷ್ಣ, ಹಾಸನದ ಪೃಥ್ವಿ, ಬೆಂಗಳೂರಿನ ನಾಯಕರಾದ, ಶರಣಪ್ಪ.ಟಿ.ವಾಲಿ, ನಂಜೇಗೌಡ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಆರಂಭದಲ್ಲಿ, ಬೆಂಗಳೂರಿನ ಉತ್ತರ ಜಿಲ್ಲಾ ಸಂಚಾಲಕರಾದ ಹೆಚ್.ಜಿ.ನಾಗಣ್ಣ ಸ್ವಾಗತ ಕೋರಿದರು. ಕೊನೆಯಲ್ಲಿ ರಾಜ್ಯದ ಸಹ ಸಂಚಾಲಕರಾದ ಬಿ. ರಾಜಶೇಖರ ಮೂರ್ತಿ ವಂದನೆ ಸಲ್ಲಿಸಿದರು.

ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ, ಪರುಶುರಾಮ ರವರು ಬಹಿರಂಗ ಸಭೆ ನಡೆಯುವ ಸ್ಥಳಕ್ಕೆ ಆಗಮಿಸಿದ್ದರು. ಸರ್ಕಾರದ ಪರವಾಗಿ ಅವರಿಗೆ ನಮ್ಮ ಬೇಡಿಕೆಗಳ ಪಟ್ಟಿಯನ್ನು ಸಲ್ಲಿಸಲಾಯಿತು. ರಾಜ್ಯದ ಮುಖ್ಯ ಮಂತ್ರಿಗಳಿಗೆ ಹಾಗೂ ಸಮಾಜ ಕಲ್ಯಾಣ ಸಚಿವರಿಗೂ ಮನವಿ ಪತ್ರವನ್ನು ಇವರ ಮೂಲಕವೇ ಸಲ್ಲಿಸಲಾಯಿತು. ಡಿಎಚ್ಎಸ್ ನ ರಾಜ್ಯದ ಮುಖಂಡರೊಂದಿಗೆ ಬೇಡಿಕೆಗಳ ಕುರಿತಂತೆ ಚರ್ಚಿಸಲು ಅಧಿಕಾರಿಗಳು ಭರವಸೆ ನೀಡಿದರು.

ನಮ್ಮ ಬೇಡಿಕೆಗಳಲ್ಲಿ, ಪ್ರಮುಖ ವಾಗಿ, ಗಂಗಾ ಕಲ್ಯಾಣ ಕೊಳವೆಬಾವಿ ಯೋಜನೆಯ ಅಡಿಯಲ್ಲಿ, ಒಂದೆರೆಡು ಎಕರೆ ಭೂಮಿ ಹೊಂದಿರುವ ಸುಮಾರು, 42,000 ಹೆಚ್ಚು ದಲಿತರು, ಕೊಳವೆಬಾವಿ ಒದಗಿಸ ಬೇಕೆಂದು ಈಗಾಗಲೇ ಅರ್ಜಿಗಳನ್ನು ಸಲ್ಲಿಸಿದ್ದಾರೆ. ಇವರೆಲ್ಲರಿಗೂ, ಬಜೆಟ್ ನಲ್ಲಿ ಹಂಚಿಕೆಯಾದ ಹಣದಲ್ಲಿ, ಕೊಳವೆ ಬಾವಿ ಕೊರೆಯಲು ಅನುಮೋದನೆ ನೀಡಬೇಕು. ಎಲ್ಲರಿಗೂ ಅನುಮೋದನೆ ನೀಡಲು ಅಂದಾಜು ಸುಮಾರು ರೂ. 2000 ಕೋಟಿ ರೂ ಬೇಕಾಗುತ್ತದೆ. ಆದ್ದರಿಂದ, ಎಲ್ಲಾ ಅರ್ಜಿದಾರರಿಗೂ ಮಂಜೂರು ಮಾಡ ಬೇಕೆಂದು ಈ ಪ್ರತಿಭಟನೆಯ ಮೂಲಕ ಒತ್ತಯಿಸಲಾಗಿದೆ.

ನಮ್ಮ ಎರಡನೆಯ ಬೇಡಿಕೆ "ಭೂ ಒಡೆತನ" ಯೋಜನೆಯ ಅಡಿಯಲ್ಲಿ ಈಗಾಗಲೇ, ಅರ್ಜಿ ಸಲ್ಲಿಸಿರುವ ಸುಮಾರು 11,723 ಭೂ ರಹಿತ ದಲಿತರಿಗೆ ಭೂಮಿ ನೀಡಬೇಕು. ಇದಕ್ಕೆ ಸುಮಾರು ರೂ. 1,76,560 ಕೋಟಿ ಬೇಕಾಗುತ್ತದೆ. ಹಂತ ಹಂತವಾಗಿ ಭೂಮಿನ್ನು ಹಂಚಲು ಸೂಕ್ತ ವ್ಯವಸ್ಥೆ ಮಾಡಬೇಕು. ಏಕೆಂದರೆ, ನಮ್ಮ ರಾಜ್ಯ ದಲ್ಲಿ' ಒಂದು ಅಂದಾಜಿನಂತೆ, ಶೇ.38 ರಷ್ಟು ದಲಿತರಿಗೆ ಒಂದಿಂಚು ಭೂಮಿ ಇಲ್ಲವೆಂಬುದು ವಾಸ್ತವಿಕ ಸತ್ಯ. ಇವರೆಲ್ಲರೂ, ಬಹುತೇಕರು ಬೇರೆಯವರ ಜಮೀನಿನಲ್ಲಿ ಕೃಷಿ ಕೂಲಿ ಮಾಡಿ ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಆದ್ದರಿಂದ ಅರ್ಜಿ ಸಲ್ಲಿಸಿರುವ ಪ್ರತಿಯೊಬ್ಬರಿಗೂ ಭೂಮಿ ನೀಡಲು ಸೂಕ್ತ ಕ್ರಮ ತೆಗೆದು ಕೊಳ್ಳಬೇಕು.

ನಮ್ಮ ಮೂರನೆ ಬೇಡಿಕೆ, ವಸತಿ ಮತ್ತು ನಿವೇಶನ ರಹಿತ ದಲಿತರಿಗೆ, ವಸತಿ ಮತ್ತು ಹಿತ್ತಲು ಸಹಿತ ನಿವೇಶನ ಸೌಲಭ್ಯಗಳನ್ನು ನೀಡಲೇ ಬೇಕು. ದಲಿತರಿಗೆ ಪ್ರತ್ಯೇಕವಾಗಿ ಸ್ಮಶಾನ ಕ್ಕಾಗಿ ಪ್ರತಿ ಗ್ರಾಮದಲ್ಲೂ ಭೂಮಿಯನ್ನು ಒದಗಿಸಬೇಕು ಮತ್ತು ಪಂಚಾಯತಿಗೆ ಒಬ್ಬ ಸಶ್ಮಾನ ಕಾರ್ಮಿಕರನ್ನು ನೇಮಿಸಲು ಕ್ರಮ ತೆಗೆದುಕೊಳ್ಳಬೇಕು.

ಹಾಗೆಯೇ, ದೇವದಾಸಿ ಮಹಿಳೆಯರಿಗೆ ಮತ್ತು ಅವರ ಮಕ್ಕಳಿಗೆ ಪುನರ್ವಸತಿ ಒದಗಿಸಬೇಕು. ಪ್ರತಿಯೊಬ್ಬ ದೇವದಾಸಿ ಮಹಿಳೆಯರಿಗೆ ತಿಂಗಳಿಗೆ ರೂ. 5,000 ನೀಡಬೇಕು. 45 ವಯಸ್ಸಿನ ಎಲ್ಲಾ ದೇವದಾಸಿ ಮಹಿಳೆಯರಿಗೆ ಮಾಸಿಕ ರೂ.3,000 ಪಿಂಚಣಿಯನ್ನು ನೀಡಬೇಕು.



ಉದ್ಯೋಗ ಖಾತ್ರಿ ಯೋಜನೆಗೆ ಹಣ ಇಲ್ವಂತೆ !

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಜಾರಿಗಾಗಿ ಕೇಂದ್ರ ಸರ್ಕಾರದ ಬಳಿ ಗಂಭೀರವಾದ ಹಣದ ಕೊರತೆ ಉಂಟಾಗಿದೆಯಂತೆ ! ನಿಗಧಿತ ಮೊತ್ತದಲ್ಲಿ 96 % ಕ್ಕೂ ಹೆಚ್ಚು ಹಣ ಈಗಾಗಲೇ ಖರ್ಚಾಗಿದ್ದು ಮುಂದಿನ ಎರಡು ತಿಂಗಳ ಅವಧಿಗೆ ಯೋಜನೆಯನ್ನು ಮುಂದುವರೆಸಲು ಕೇವಲ 2,500 ಕೋಟಿ ರೂ. ಮಾತ್ರ ಲಭ್ಯವಿದೆಯಂತೆ !

15 ರಾಜ್ಯಗಳು ಈಗಾಗಲೇ ತೀವ್ರ ಹಣದ ಕೊರತೆಯನ್ನು ಎದುರಿಸುತ್ತಿವೆ. 2020 ಜನವರಿ ತಿಂಗಳಲ್ಲಿ ರಾಜ್ಯಸ್ತಾನ ಅತಿಹೆಚ್ಚು ಅಂದರೆ 620 ಕೋಟಿ ರೂ. ಕೊರತೆ ಎದುರಿಸುತ್ತಿದ್ದರೆ, ಉತ್ತರ ಪ್ರದೇಶ 323 ಕೋಟಿ ರೂ. ಮತ್ತು ಮಹಾರಾಷ್ಟ್ರ 309 ಕೋಟಿ ರೂ. ಕೊರತೆಯನ್ನು ಎದುರಿಸುತ್ತಿವೆ. ಕೆಳಸ್ತರದಲ್ಲಿ ಪರಿಸ್ಥಿತಿ ಇನ್ನೂ ಗಂಭೀರ ಇರಬಹುದು. ಏಕೆಂದರೆ ರಾಜ್ಯಗಳ ಬಾಕಿಗಳ ವಿವರಗಳನ್ನು ಸಾಮಾನ್ಯವಾಗಿ ಬಹಿರಂಗ ಪಡಿಸುವುದಿಲ್ಲ. ಜನವರಿ, ಫೆಬ್ರವರಿ ಮತ್ತು ಮಾರ್ಚ್ ತಿಂಗಳುಗಳಲ್ಲಿ ಕೃಷಿ ಚಟುವಟಿಕೆಗಳು ಗಣನೀಯವಾಗಿ ಇಳಿಮುಖವಾಗಿರುತ್ತವೆ. ಗ್ರಾಮೀಣ ಕೆಲಸಗಾರರಿಗೆ ತುರ್ತಾಗಿ ಕೆಲಸ ಬೇಕಾಗಿರುತ್ತದೆ. ಆದರೆ ಯೋಜನೆಯ ಅನುಷ್ಠಾನಕ್ಕೆ ಸಾಕಷ್ಟು ಹಣ ಲಭ್ಯವಾಗದಿದ್ದರೆ ಬಾಕಿಗಳೊಂದಿಗೆ ಹೊಸ ಆರ್ಥಿಕ ವರ್ಷಕ್ಕೆ ಕಾಲಿಡುವಂತಾಗಲಿದೆ.

ಅನೇಕ ಅರ್ಥಶಾಸ್ತ್ರಜ್ಞರ ಪ್ರಕಾರ, ಗ್ರಾಮೀಣ ಬಳಕೆದಾರರ ಕೈಗಳಿಗೆ ಹಣ ದೊರೆಯುವಂತೆ ಮಾಡಿದರೆ ಆರ್ಥಿಕತೆಗೊಂದು ಚಾಲನೆ ದೊರೆಯುತ್ತದೆ. ಆದರೆ ಈ ವರ್ಷ ಯೋಜನೆಗಾಗಿ ಒದಗಿಸಿದ 60, 000 ಕೋಟಿ ರೂ. ಹಿಂದಿನ ವರ್ಷ ಖರ್ಚು ಮಾಡಿದ ಒಟ್ಟು ಮೊತ್ತಕ್ಕಿಂತ ಕಡಿಮೆ.

ಇತ್ತೀಚೆಗೆ ರಾಜಸ್ತಾನ ಮುಖ್ಯಮಂತ್ರಿ ಅಶೋಕ್ ಗೆಲೋಟ್ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರವೊಂದನ್ನು ಬರೆದು ರಾಜ್ಯಕ್ಕೆ ಬಾಕಿ ಇರುವ 1,950 ಕೋಟಿ ರೂ. ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಕೋರಿದರು. ರಾಜಸ್ತಾನದಲ್ಲಿ 848 ಕೋಟಿ ರೂ. ಕೆಲಸಗಾರರ ಕೂಲಿ ಹಣ ಬಾಕಿ ಇದ್ದರೆ 1,102 ಕೋಟಿ ರೂ. ಸಾಮಾಗ್ರಿಗಳ ಬಾಬತ್ತು ಬಾಕಿ ಇದೆ. ರಾಜಸ್ತಾನದಲ್ಲಿ ಅಕ್ಟೋಬರ್ 11. 2019 ರಿಂದ ಕೆಲಸಗಾರರಿಗೆ ಕೂಲಿ ಹಣ ಪಾವತಿಮಾಡಿಲ್ಲ. ಕೇಂದ್ರ ಸರ್ಕಾರ ಅನುದಾನವನ್ನು ಬಿಡುಗಡೆ ಮಾಡುವಲ್ಲಿ ವಿಫಲವಾಗಿರುವುದೇ ಇದಕ್ಕೆ ಕಾರಣವಾಗಿದೆ. ಇದು ಎಂಜಿಎನ್ಆರ್ ಇಜಿಎ ಕಾಯ್ದೆ ಕೆಲಸಗಾರರಿಗೆ ನೀಡಿದ ಹಕ್ಕುಗಳ ನಗ್ನ ಉಲ್ಲಂಘನೆಯಾಗಿದೆ.


ಇದು ರಾಜಸ್ತಾನದ ಪರಿಸ್ಥಿತಿ ಮಾತ್ರವಲ್ಲ. ಬಹುತೇಕ ಎಲ್ಲ ರಾಜ್ಯಗಳ ಪರಿಸ್ಥಿತಿ ಹೀಗೇ ಇದೆ. ಈ ವರ್ಷ ಕೆಲಸಕ್ಕೆ ಬೇಡಿಕೆ ಹೆಚ್ಚಾಗಿದೆ.ಗ್ರಾಮೀಣ ಅರ್ಥ ವ್ಯವಸ್ಥೆ ಬಿಕ್ಕಟಿಗೆ ಸಿಕ್ಕಿಹಾಕಿಕೊಂಡಿದೆ. ಮೂಲತಃ 23 ಕೋಟಿ ಮಾನವ ದಿನಗಳಿಗೆ ಗುರಿ ಇಟ್ಟುಕೊಳ್ಳಲಾಗಿತ್ತು, ಈಗ ಅದು ಇನ್ನೂ ಹೆಚ್ಚಾಗಲಿದೆ. ಬಾಕಿ ವೇತನ ಸಂದಾಯ ಮಾಡಲು ಮಾತ್ರವಲ್ಲ, ಹೆಚ್ಚುತ್ತಿರುವ ಬೇಡಿಕೆಯನ್ನು ಈಡೇರಿಸಿಕೊಳ್ಳಲು ಅನುದಾನವನ್ನು ಗಣನೀಯ ಪ್ರಮಾಣದಲ್ಲಿ ಏರಿಸಬೇಕಾಗಿದೆ. ಈ ಯೋಜನೆಯನ್ನು ಉಳಿಸಿ, ವಿಸ್ತರಿಸಿ ಬಲಪಡಿಸಿಕೊಳ್ಳಲು ಜನರ ಆಗ್ರಹ ಹೆಚ್ಚಾಗಬೇಕಾಗಿದೆ.

(ಮೂಲ : ದಿ ಹಿಂದು. ಇಂಗ್ಲಿಷ್ ದಿನಪತ್ರಿಕೆ)

ನನ್ನ ಕಾರ್ಮಿಕ ಚಳುವಳಿ ಬದುಕಿನಲ್ಲಿ ಅತ್ಯಂತ ಅಮೂಲ್ಯವಾದ ಕ್ಷಣ

ಇದು ನನ್ನ ಕಾರ್ಮಿಕ ಚಳುವಳಿ ಬದುಕಿನಲ್ಲಿ ಅತ್ಯಂತ ಅಮೂಲ್ಯವಾದ ಕ್ಷಣವಾಗಿತ್ತು

ಕಾಮ್ರೇಡ್ ಲೀಲಾವತಿ 1966ರಲ್ಲಿ ತಮಿಳುನಾಡಿನ ಮದುರೈನ ವಿಲ್ಲಾಪುರಂ ನ ಮಹಾನಗರ ಪಾಲಿಕೆಯ ಸದಸ್ಯರಾಗಿ CPI(M)ನ ಅಭ್ಯರ್ಥಿ ಯಾಗಿ ಗೆದ್ದಿದ್ದರು. ಇವರು ಅಲ್ಲಿಯ ಪ್ರಮುಖ ನಾಗರಿಕ ಸಮಸ್ಯೆ



ಗಳಿಗಾಗಿ ಹೋರಾಟ ನಡೆಸುತ್ತಿದ್ದರು. ಅದರಲ್ಲಿ ಪ್ರಮುಖವಾಗಿ ಮಹಾನಗರ ಪಾಲಿಕೆಯಿಂದ ಉಚಿತವಾಗಿ ಕುಡಿಯುವ ನೀರು ಎಲ್ಲರಿಗೂ ಸರಬರಾಜು ಮಾಡುತ್ತಿದ್ದರು. ಆದರೆ AIADMKಯವರು ಒಂದು ಕೊಡಕ್ಕೆ 5 ರೂಗಳನ್ನು ಲಂಚ ಪಡೆಯುತ್ತಿದ್ದರು, ಮಾತ್ರವಲ್ಲದೆ ಜನರಿಗೆ ಹಂಚಿಗೆಯಾಗಬೇಕಿದ್ದ ಃಕಐ ಪಡಿತರ ಸಾಮಗ್ರಿಗಳನ್ನು ಜನರಿಗೆ ಕೊಡದೆ ಕಳ್ಳಸಂತೆಯಲ್ಲಿ ಮಾರಾಟ ಮಾಡಿ ಕೊಳ್ಳುತ್ತಿದ್ದರು. ಇಂತಹ ಸಂಧರ್ಭದಲ್ಲಿ ಅಲ್ಲಿಯ ಸ್ಥಳೀಯ ಜನಪ್ರತಿನಿಧಿಯಾದ ಕಾಮ್ರೇಡ್ ಲೀಲಾವತಿ ಯವರು ಜನರನ್ನು ಸಂಘಟಿಸಿ ಹೋರಾಟ ನಡೆಸಿ ಈ ಆಕ್ರಮಗಳನ್ನು ತಡೆದಿದ್ದರು

ಒಂದು ಬೆಳಗ್ಗೆ ಸಹಜವಾಗಿ ದೋಸೆಮಾಡಲು ಎಣ್ಣೆ ತರಲು ಅವರ ಮನೆಯ ಬೀದಿಯಲ್ಲಿರುವ ಅಂಗಡಿಗೆ ಹೋಗುತ್ತಿದ್ದಾಗ ಹೆಣವಾದರು. ಅದು ಯಾವ ರೀತಿ? ಬಹುಶಃ ಅದೊಂದು ಘೋರವಾದ ಹತ್ಯೆಯಾಗಿತ್ತು. ಚಾಕುವಿನಿಂದ ದೇಹದ ಮೇಲೆ ಸೀರೆಯನ್ನು ಹರಿಯುವ ರೀತಿ ಹರಿದು ಲೀಲಾವತಿಯವರನ್ನು ಕ್ಷಣಮಾತ್ರದಲ್ಲಿ ಹೆಣವಾಗಿಸಿದ್ದರು

4ಹೆಣ್ಣು ಮಕ್ಕಳ ತಾಯಿ ಲೀಲಾವತಿ ಅಂದು ತನ್ನ ಮಕ್ಕಳನ್ನು ಮುಂದಿನ ಭವಿಷ್ಯವನ್ನು ಲೆಕ್ಕಿಸದೆ ನಿಜವಾದ ಜನಪ್ರತಿನಿಧಿಯಾಗಿ ಕರ್ತವ್ಯ ನಿರ್ವಹಿಸಿದ್ದಕ್ಕೆ ಜೀವವನ್ನೆ ತೆರಬೇಕಾಯಿತು. ನಂತರದಲ್ಲಿ ಕೊಲೆಗೊಡಕರನ್ನು ಬಂಧಿಸಿದರು ಆದರೆ ಒಬ್ಬರಿಗೂ ಶಿಕ್ಷೆಯಾಗಲಿಲ್ಲ. ಇಂತಹ ಮಹಾನ್ ತ್ಯಾಗಮಯಿ, ಮತ್ತು ಇಂತಹ ಬೇರೆ ಬೇರೆ ಚಳುವಳಿಗಳಲ್ಲಿ ಹುತಾತ್ಮಾರ ಸ್ಮರಣಾರ್ಥವಾಗಿ CITU 16 ನೇ ಸಮ್ಮೇಳನದ ಉದ್ಘಾಟನಾ ಸಮಾರಂಭಕ್ಕಿಂತ ಮುಂಚೆ ಜ್ಯೋತಿಗಳನ್ನು ತರಲಾಗಿತ್ತು. ಅಂತಹ ಒಂದು ಜ್ಯೋತಿಯನ್ನು ಸ್ವೀಕರಿಸಲು ನನ್ನನ್ನು ಆಯ್ಕೆ ಮಾಡಲಾಗಿತ್ತು. ಇದು ನನ್ನ ರಾಜ್ಯದ ಚಳುವಳಿಗೆ ಕೊಟ್ಟ ಗೌರವ ಎನ್ನುವುದು ಬಹಳ ಹೆಮ್ಮೆಯ ವಿಚಾರ.

– ಎಸ್. ವರಲಕ್ಷ್ಮಿ, ಸಿಐಟಿಯು ಕರ್ನಾಟಕ ರಾಜ್ಯ ಅಧ್ಯಕ್ಷರು

ಬಾಪೂ ನೀವು ಅಮರ

ಅಹಿಂಸೆ ಪ್ರಿಯ
ಶಾಂತಿದೂತ
ಒಂದು ಕೆನ್ನೆ ಬಾರಿಸಿದರೇ
ಮತ್ತೊಂದು ಕೆನ್ನೆ ನೀಡಿದಾತ

ಜಾತ್ಯತೀತತೆ ಎತ್ತಿ ಹಿಡಿದಾತ
ಅಸ್ಪೃಶ್ಯತೆ ವಿರುದ್ಧ, ಸಾಮಾಜಿಕ ನ್ಯಾಯಕ್ಕಾಗಿ
ಹೋರಾಡಿದಾತ
ಅರೆ ಬಟ್ಟೆ ತೊಟ್ಟಾತ
ಸ್ತ್ರೀಯನ್ನು ಗೌರವಿಸಿದಾತ

ಸ್ವದೇಶಿ ಮಂತ್ರ ಬಳಸಿದಾತ
ವಿದೇಶಿ ವಸ್ತುಗಳನ್ನು ವಿರೋಧಿಸಿದಾತ
ನೆರೆ ಹೊರೆಯ ನೂಲುಗಾರರ, ನೇಕಾರ
ತಯಾರಿಸಿದ ಬಟ್ಟೆ ಕೊಂಡು ತೊಟ್ಟಾತ
ಅವರ ಹೊಟ್ಟೆ ಬಟ್ಟೆಯ ಅವಶ್ಯಕತೆ
ಪೂರೈಸಿದಾತ

ನಾಲಿಗೆ ನಂಬಿದಾತ
ಉಪವಾಸ ಮಾಡಿದಾತ
ಸತ್ಯ ಶೋಧಕ
ನಿನಗೆ ಗೊತಿಲ್ಲದಂತೆ ನೀನಾದೆ ಮಹಾತ್ಮ

ಬಾಪೂ ನಿನ್ನನ್ನು ಕೊಂದಿರಬಹುದು ಅವರು
ನಿನ್ನ ವಿಚಾರಗಳಿಗೆ ಯಾವಾಗಲೂ ಸಾವಿಲ್ಲ
ಇತಿಹಾಸದ ಪುಟಗಳನ್ನು ತಿರುಚಿತ್ತಿರುವರು
ಅವರು
ಗೊತ್ತಿಲ್ಲ ಅವರಿಗೆ ಅಳಿಸಿಹಾಕಲಾರದ
ಇತಿಹಾಸ ನೀನು
ಸಾವಿಲ್ಲ ನಿನಗೆ ನೀನು ಎಂದಿಗೂ ಅಮರ

– ಲಕ್ಷ್ಮೀದೇವಿ ಪಿಟ್ನಾಳ

ಯುವತಿಯ ಮೇಲೆ ಆಸಿಡ್ ಹಾಕಿದ ಕ್ರೂರಿ ದುಷ್ಕರ್ಮಿಗಳನ್ನು ಕೂಡಲೇ ಬಂಧಿಸಿ

ನೊಂದ ಯುವತಿಗೆ ನೆರವು ನೀಡಲು ಒತ್ತಾಯಿಸಿ ಪ್ರತಿಭಟನೆ

ಹಾವೇರಿಯಲ್ಲಿ ಯುವತಿಯ ಮೇಲೆ ಆಸಿಡ್ ಹಾಕಿದ ಕ್ರೂರಿ ದುಷ್ಕರ್ಮಿಗಳನ್ನು ಕೂಡಲೇ ಬಂಧಿಸಿ ಕಠಿಣ ಶಿಕ್ಷೆಗೊಳಪಡಿಸಲು ಹಾಗೂ ಧಾಳಿಗೊಳಗಾದ ಯುವತಿಗೆ ನೆರವು ನೀಡಲು ಒತ್ತಾಯಿಸಿ, ಇಂದು ನಗರದ ಹೊಸಮನಿ ಸಿದ್ದಪ್ಪ ವೃತ್ತದಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ), ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ), ಕರ್ನಾಟಕ ಲೈಂಗಿಕ ಅಲ್ಪಸಂಖ್ಯಾತರ ಒಕ್ಕೂಟ (ಕೆಎಸ್.ಎಂಎಫ್), ದಲಿತ ಸಂಘರ್ಷ ಸಮಿತಿ (ಡಿಎಸ್‌ಎಸ್) ಸಂಘಟನೆಗಳ ಕಾರ್ಯಕರ್ತರು ಹಾಗೂ ಹಾವೇರಿ ನಾಗರಿಕರು ಪ್ರತಿಭಟನೆ ನಡೆಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ ಮಾತನಾಡಿ, ಹಾವೇರಿಯಲ್ಲಿ ನಿನ್ನೆ 28 ಜನವರಿ 2020 ರಂದು ಸಂಜೆ ಯುವತಿಯ ಮೇಲೆ ಅಸಿಡ್ ಧಾಳಿಯು ನಗರದ ಹಾಗೂ ಜಿಲ್ಲೆಯ ಜನತೆಯಲ್ಲಿ ತೀವ್ರ ಆತಂಕವನ್ನುಂಟು ಮಾಡಿದೆ. ಯುವತಿಯ ಕುಟುಂಬ ಆಘಾತಕ್ಕೊಳಗಾಗಿದೆ. ಧಾಳಿಗೈದ ಕ್ರೂರಿಗಳ ಬಂಧನ ಹಾಗೂ ಕಠಿಣ ಶಿಕ್ಷೆಯಾಗಲೇಬೇಕು ಎಂದು ಸರಕಾರವನ್ನು ಒತ್ತಾಯಿಸಿದರು.

ರಾಜ್ಯ ಹಾಗೂ ದೇಶದ ವಿವಿಧ ಭಾಗದಲ್ಲಿ ಆಗಾಗ ಇಂಥಹ ಧಾಳಿಗಳು ನಡೆಯುತ್ತಲೇ ಇವೆ. ಅದೇ ಸಂದರ್ಭದಲ್ಲಿ ಘಟನೆಯ ವಿರುದ್ಧ ದೊಡ್ಡ ಹೋರಾಟಗಳೂ ನಡೆದಿವೆ. ಒಮ್ಮೆ ಆಸಿಡ್ ಧಾಳಿಗೆ ಒಳಗಾದವರು ತಮ್ಮ ಜೀವಮಾನವಿಡೀ ನರಳುತ್ತಾರೆ. ಕೇವಲ ದೈಹಿಕವಷ್ಟೇ ಅಲ್ಲ ಮಾನಸಿಕ, ಜೊತೆಗೆ ವಿರೂಪವಾದ ದೇಹ ರೂಪಗಳಿಂದ ಜೀವ ಸವೆಸಬೇಕಾಗುತ್ತದೆ ಎನ್ನುವುದು ಕಟು ವಾಸ್ತವ. ಇಂತಹ ಭಯಾನಕ ಹಾಗೂ ಕ್ರೂರ ಸ್ಥಿತಿಗೆ ಅವರನ್ನು ತಂದವರು ಅಕಸ್ಮಾತ್ ಶಿಕ್ಷೆಗೆ ಒಳಗಾದರೂ ಕೆಲವು ವರ್ಷಗಳಲ್ಲಿ ಹೊರಬಂದು ಸಹಜ ಜೀವನ ನಡೆಸುತ್ತಾರೆ. ಆಸಿಡ್ ಧಾಳಿಗೈದ ಕಿರಾತಕರಿಗೆ



ಜಾಮೀನು ಸಿಗಲಾರದಂತೆ ಕಠಿಣ ಶಿಕ್ಷೆ ನೀಡಬೇಕು. ಅದು ಎಲ್ಲರಿಗೂ ಎಚ್ಚರಿಕೆಯ ಗಂಟೆಯಾಗಬೇಕು ಎಂದರು.

ಲೈಂಗಿಕ ಅಲ್ಪ ಸಂಖ್ಯಾತ ಸಂಘಟನೆ ರಾಜ್ಯ ಕಾರ್ಯದರ್ಶಿ ಅಕ್ಷತಾ ಕೆ.ಸಿ. ಮಾತನಾಡಿ, ಸುಪ್ರಿಂ ಕೋರ್ಟ್ 2013ರಲ್ಲಿಯೇ ಆಸಿಡ್ ಮಾರಾಟಕ್ಕೆ ಕೆಲವು ನಿರ್ಬಂಧಗಳನ್ನು ಹೇರಿದೆ. ಆದರೂ ಅನಿಯಂತ್ರಿತವಾಗಿ ಆ್ಯಸಿಡ್ ಸಿಗುತ್ತದೆ ಎಂಬುದು ನಮಗೆಲ್ಲರಿಗೂ ತಿಳಿದಿರುವ ಸಂಗತಿಯೆ. ಹಾವೇರಿಯಲ್ಲಿ ನಡೆದ ಈ ಘಟನೆಯನ್ನು ರಾಜ್ಯದ ಗೃಹಮಂತ್ರಿಗಳು ಗಂಭೀರವಾಗಿ ಪರಿಗಣಿಸಬೇಕು. ಆಸಿಡ್ ಧಾಳಿಯ ಸಂತ್ರಸ್ತೆ ಲಕ್ಷ್ಮಿ ಅಗರವಾಲ್ ಜೀವನವನ್ನಾದರಿಸಿದ ದೀಪಿಕಾ ಪಡುಕೋಣೆ ನಟಿಸಿದ ಛಪಾಕ್ ಸಿನಿಮಾ ಬಿಡುಗಡೆಯಾದ ಹೊತ್ತಿನಲ್ಲೇ ಈ ಘಟನೆ ನಡೆದಿರುವುದು ಕರುಳಿರದ, ಹೃದಯ ಶೂನ್ಯ ಸಮಾಜ ಕ್ಕೆ ಹಿಡಿದ ಕನ್ನಡಿಯಾಗಿದೆ ಎಂದರು.

ಆದುದರಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರ ಇತ್ತ ಗಂಭೀರವಾಗಿ ಗಮನ ಹರಿಸಬೇಕು. ಆಸಿಡ್ ಮಾರಾಟಕ್ಕೆ ಸುಪ್ರಿಂ ಕೋರ್ಟಿನ ಆದೇಶವನ್ನು ಪಾಲಿಸಬೇಕು. ಹಾವೇರಿಯಲ್ಲಿ ಆ್ಯಸಿಡ್ ಧಾಳಿಯ ಸಂತ್ರಸ್ತೆಗೆ ಎಲ್ಲ ನೆರವು ನೀಡಬೇಕು. ಹಾಗೂ ಈ ಘಟನೆಗೆ ಕಾರಣರಾದವರನ್ನು ಪತ್ತೆ ಮಾಡಿ ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಎಸ್‌ಎಫ್‌ಐ ಜಿಲ್ಲಾ ಸಹ ಕಾರ್ಯದರ್ಶಿ ಬಸವರಾಜ ಭೋವಿ, ಜ್ಯೋತಿ ದೊಡಮನಿ, ಡಿವೈಎಫ್‌ಐ ಜಿಲ್ಲಾ ಸಂಚಾಲಕ ಮುಕ್ತಾನಂದ ಹಿರೇಮನಿ, ಬಿರೇಶ ಹೀಲದಹಳ್ಳಿ, ಸಿಐಟಿಯು ಜಿಲ್ಲಾ ಸಂಚಾಲಕ ವಿನಾಯಕ ಕುರುಬರ, ಡಿಎಸ್ ಎಸ್ ಮುಖಂಡರಾದ ಉಡಚಪ್ಪ ಮಾಳಗಿ, ಬಸವರಾಜ ಹೆಡಿಗೊಂಡ, ವಕೀಲರಾದ ನಾರಾಯಣ ಕಾಳೇ, ಲಾಲಸಾಬ್ ಛೋಪದಾರ, ಶಹೀದ್ ದೇವಿಹೊಸೂರು, ಜಯಕರ್ನಾಟಕ ಸಂಘದ ಸಂಜಯಗಾಂಧಿ ಸಂಜೀವಣ್ಣವರ, ರೈತ ಸಂಘದ ಸುರೇಶ ಛಲವಾದಿ ಮುಂತಾದವರು ಪಾಲ್ಗೊಂಡಿದ್ದರು.

ನಂತರ ತಹಶೀಲ್ದಾರವರ ಮೂಲಕ ಗೃಹ ಮಂತ್ರಿಗಳಿಗೆ, ಜಿಲ್ಲಾಧಿಕಾರಿಗಳಿಗೆ ಹಾಗೂ ಜಿಲ್ಲಾ ಪೋಲಿಸ್ ವರಿಷ್ಠಧಿಕಾರಿಗಳಿಗೆ ಮನವಿ ಸಲ್ಲಿಸಲಾಯ್ತು.

–ಬಸವರಾಜ ಭೋವಿ

ದಿಲ್ಲಿಯಲ್ಲಿ ಬಿಜೆಪಿಯ ದ್ವೇಷ ಪ್ರಚಾರ

ಪ್ರಕಾಶ ಕಾರಟ್

ಬಿಜೆಪಿಯ ವಿಷಭರಿತ ಅಪಪ್ರಚಾರ ಜನಗಳ ಅತ್ಯಂತ ಹೊಲಸು ಪ್ರವೃತ್ತಿಗಳನ್ನು ಬಡಿದೆಬ್ಬಿಸಲು ಪ್ರಯತ್ನಿಸುತ್ತಿದೆ. ಇಂತಹ ಪ್ರಚಾರಕ್ಕೆ ನಾಂದಿ ಹಾಕಿದ್ದು ಗೃಹಮಂತ್ರಿ ಅಮಿತ್ ಷಾ ರವರೇ. ಲೋಕಸಭಾ ಚುನಾವಣೆಯ ವೇಳೆಯಲ್ಲಿ ನರೇಂದ್ರ ಮೋದಿ ಮತ್ತು ಅಮಿತ್ ಷಾ ರಿಂದ ಉನ್ನತ ಸ್ಥಾನಗಳಿಂದಲೇ ಆರಂಭವಾಗಿದ್ದ ಕೋಮುವಾದಿ ಅಪೀಲುಗಳು ಮತ್ತು ದ್ವೇಷ ಭಾಷಣಗಳನ್ನು ತಡೆಯುವಲ್ಲಿ ನಿಷ್ಪ್ರಯೋಜಕವಾಗಿದ್ದ ಚುನಾವಣಾ ಆಯೋಗ ಈಗಲೂ ಬಲವಾದ ಕ್ರಮ ಕೈಗೊಳ್ಳುತ್ತಿಲ್ಲ. ಆದರೆ ಬಿಜೆಪಿ, ಝಾರ್ಖಂಡ್‌ನಲ್ಲಿ ಅನುಭವಿಸಿದಂತೆ, ದಿಲ್ಲಿಯಲ್ಲಿಯೂ ತನ್ನ ಕೋಮುವಾದಿ ತಂತ್ರಕ್ಕೆ ಭಾರೀ ಬೆಲೆ ತೆರಬೇಕಾಗಿ ಬರುತ್ತದೆ.



ದಿಲ್ಲಿ ವಿಧಾನಸಭೆಯ ಚುನಾವಣಾ ಪ್ರಚಾರದಲ್ಲಿ ಬಿಜೆಪಿಯ ಒಂದು ಕೀಳುಪ್ರವೃತ್ತಿಯ ಪ್ರಚಾರ ಕಾಣ ಬರುತ್ತಿದೆ. ಅದು ಹುಚ್ಚು ಕೋಮುವಾದ ಮತ್ತು ಹಿಂಸಾಚಾರವನ್ನು ಪ್ರಚೋದಿಸುವ ದ್ವೇಷ ಭಾಷಣಗಳ ಮೇಲೆ ನಿಂತಿರುವ ಪ್ರಚಾರ. ಮೋದಿ ಸರಕಾರ ಮತ್ತು ಬಿಜೆಪಿ ಸಿಎಎ–ಎನ್‌ಪಿಆರ್–ಎನ್‌ಆರ್‌ಸಿ ವಿರುದ್ಧ ವ್ಯಾಪಕವಾಗಿರುವ ಶಾಂತಿಯುತ ಪ್ರತಿಭಟನೆಗಳೊಡನೆ ವ್ಯವಹರಿಸುವಲ್ಲಿಯೂ ಸರ್ವಾಧಿಕಾರಶಾಹೀ ಮನೋಭಾವವನ್ನು ಪ್ರದರ್ಶಿಸುತ್ತಿದೆ.

ಇಂತಹ ಪ್ರಚಾರಕ್ಕೆ ನಾಂದಿ ಹಾಕಿದ್ದು ಗೃಹಮಂತ್ರಿ ಅಮಿತ್ ಷಾ ರವರೇ. ಶಾಹೀನ್ ಬಾಗ್‌ನ ಮಹಿಳೆಯರ ಪ್ರತಿಭಟನೆಯ ಮೇಲೆ ಗುರಿಯಿಡುತ್ತ, ಅದೊಂದು ರಾಷ್ಟ್ರ–ವಿರೋಧಿ ಚಟುವಟಿಕೆ ಎಂದರು, ಮತದಾನ ಯಂತ್ರದ ಬಟನನ್ನು ಜೋರಾಗಿ ಒತ್ತಿ ಶಾಹೀನ್ ಬಾಗ್‌ನಲ್ಲಿ ಕರೆಂಟ್ ಹರಿಯುವಂತೆ ಮಾಡಿ ಎಂದು ಜನಗಳಿಗೆ ಅವರು ಕರೆ ನೀಡಿದರು.

ಕೇಂದ್ರ ಹಣಕಾಸು ಇಲಾಖೆಯ ರಾಜ್ಯಮಂತ್ರಿ ಅನುರಾಗ್ ಠಾಕುರ್ ಒಂದು ಚುನಾವಣಾ ಸಭೆಯಲ್ಲಿ 'ದೇಶ್ ಕೇ ಗದ್ದಾರೋಂಕೊ, ಗೋಲೀ ಮಾರೋ ಸಾಲೋಂಕೊ' (ದೇಶದ್ರೋಹಿ..ಗಳಿಗೆ ಗುಂಡಿಕ್ಕಿ) ಎಂಬ ಹೊಲಸು ಭಾಷೆಯ ಘೋಷಣೆ ಎತ್ತಿದರು. ಬಿಜೆಪಿ 'ದೆಶದ್ರೋಹಿಗಳು' ಎಂದು ಹೇಳುವವರ ಮೇಲೆ ಗುಂಡಿಕ್ಕಿ ಎನ್ನುವುದು ಹಿಂಸಾಚಾರಕ್ಕೆ ಬಹಿರಂಗ ಪ್ರಚೋದನೆಯಲ್ಲದೆ ಬೇರೇನೂ ಅಲ್ಲ. ಇದು ಒಬ್ಬ ಕೇಂದ್ರ ಮಂತ್ರಿಯಿಂದ, ಸಾರ್ವಜನಿಕ ಸಭೆಯಲ್ಲಿ ಬಂದಿದೆ ಎಂಬುದು ಇನ್ನಷ್ಟು ಗಂಭೀರವಾದ ವಿಷಯ.

ಮರುದಿನ, ದಿಲ್ಲಿಯ ಒಬ್ಬ ಬಿಜೆಪಿ ಸಂಸತ್ ಸದಸ್ಯ, ಪರ್ವೇಶ್ ಶರ್ಮ ಶಾಹೀನ್ ಬಾಗ್ ಪ್ರತಿಭಟನೆಯ ಬಗ್ಗೆ ಹೇಳುತ್ತ "ಅಲ್ಲಿ ನೆರೆದಿರುವ ಲಕ್ಷಾಂತರ ಮಂದಿ .. ಅವರು ನಿಮ್ಮ ಮನೆಗೆ ನುಗ್ಗಬಹುದು, ನಿಮ್ಮ ಸೋದರಿಯರನ್ನು, ಹೆಣ್ಣುಮಕ್ಕಳನ್ನು ರೇಪ್ ಮಾಡಬಹುದು ಮತ್ತು ಅವರನ್ನು ಸಾಯಿಸಬಹುದು" ಎಂದರು.

ಚುನಾವಣಾ ಆಯೋಗ ಈ ಭಾಷಣಗಳು ಮತ್ತು ಹೇಳಿಕೆಗಳ ವಿರುದ್ಧ ಅತ್ಯಂತ ಕಠಿಣ ಕ್ರಮ ಕೈಗೊಳ್ಳಬೇಕಾಗಿತ್ತು. ಚುನಾವಣೆ ಎಂಬುದು ದಿಲ್ಲಿಯ ಬೀದಿಗಳಲ್ಲಿ ನಡೆಯುವ ಭಾರತ ಮತ್ತು ಪಾಕಿಸ್ತಾನದ ನಡುವಿನ ಒಂದು ಮ್ಯಾಚ್, ಶಾಹೀನ್ ಬಾಗ್ ಒಂದು 'ಮಿನಿ ಪಾಕಿಸ್ತಾನ' ಎಂದ ಒಬ್ಬ ಬಿಜೆಪಿ ಅಭ್ಯರ್ಥಿ ಕಪಿಲ್ ಮಿಶ್ರಾಗೆ 48 ಗಂಟೆಗಳ ಪ್ರಚಾರ ನಿಷೇಧದಂತಹ ಹಗುರವಾದ ಶಿಕ್ಷೆ ವಿಧಿಸಿದರೆ ಏನೂ ಸಾಲದು.

ಲೋಕಸಭಾ ಚುನಾವಣೆಗಳ ವೇಳೆಯಲ್ಲೂ ಚುನಾವಣಾ ಆಯೋಗ ನರೇಂದ್ರ ಮೋದಿ ಮತ್ತು ಅಮಿತ್ ..ಷಾ ರಿಂದ ಉನ್ನತ ಸ್ಥಾನಗಳಿಂದಲೇ ಆರಂಭವಾಗಿದ್ದ ಕೋಮುವಾದಿ ಅಪೀಲುಗಳು ಮತ್ತು ದ್ವೇಷ ಭಾಷಣಗಳನ್ನು ತಡೆಯುವಲ್ಲಿ ನಿಷ್ಪ್ರಯೋಜಕವಾಗಿತ್ತು. ಈಗಲೂ ಅದು ಈ ಇಬ್ಬರು ತಪ್ಪಿತಸ್ಥರ ವಿರುದ್ಧ ಸಾಕಷ್ಟು ಬಲವಾದ ನಿಲುವು ತಳೆದಿಲ್ಲ, ಅವರಲ್ಲೊಬ್ಬರು ಕೇಂದ್ರ ಮಂತ್ರಿಗಳೂ ಆಗಿದ್ದಾರೆ. ಅವರನ್ನು 'ಸ್ಟಾರ್ ಪ್ರಚಾರಕರು' ಎಂಬ ಸ್ಥಾನದಿಂದ ಕೈಬಿಡಬೇಕು ಎಂದು ಬಿಜೆಪಿಗೆ ಹೇಳಿದೆ ಯಷ್ಟೇ. ಇದರ ಅರ್ಥ ಅವರು ಈಗಲೂ ಪ್ರಚಾರ ನಡೆಸಬಹುದು. ಆಯೋಗ ಕೈಗೊಳ್ಳಬಹುದಾದ ಕನಿಷ್ಟ ಕ್ರಮವೆಂದರೆ ಅವರು ಪ್ರಚಾರ ಮಾಡದಂತೆ ನಿಷೇಧ ಹಾಕುವುದು. ಅವರ ವಿರುದ್ಧ ಕ್ರಿಮಿನಲ್ ಕೇಸುಗಳನ್ನು ಹಾಕಬೇಕು ಎಂದೂ ಆಯೋಗ ಆಡಳಿತಕ್ಕೆ ಸೂಚನೆ ನೀಡಬೇಕು.

ಈ ಚುನಾವಣಾ ಪ್ರಚಾರದಲ್ಲಿ ಸಿಎಎ–ಎನ್‌ಪಿಆರ್–ಎನ್‌ಆರ್‌ಸಿ ಪ್ರತಿಭಟನೆಗಳ ಬಗ್ಗೆ ಅಮಿತ್ ಷಾ ಮತ್ತು ಇತರ ಬಿಜೆಪಿ ಮುಖಂಡರ ನಿಲುವೆಂದರೆ, ಅವನ್ನು ರಾಷ್ಟ್ರ–ವಿರೋದಿ, ಪಾಕಿಸ್ತಾನ–ಪರ ಮತ್ತು ದೇಶವನ್ನು ಮುರಿಯುವ ಪಿತೂರಿ ಎಂದು ಖಂಡಿಸುವುದು. ಇಂತಹ ನಿಲುವಿನಿಂದಾಗಿಯೇ ಕರ್ನಾಟಕದಲ್ಲಿ ಒಂದು ಶಾಲೆಯ ವಿರುದ್ಧವೂ ರಾಜದ್ರೋಹದ ಕೇಸು ಹಾಕಲಾಗಿದೆ, ಆ ಶಾಲೆಯ ಮಕ್ಕಳು ಸಿಎಎ ವಿರುದ್ಧ ಒಂದು ನಾಟಕ ಅಭಿನಯಿಸಿದ್ದಕ್ಕೆ.

ಬಿಜೆಪಿಯ ವಿಷಭರಿತ ಅಪಪ್ರಚಾರ ಜನಗಳ ಅತ್ಯಂತ ಹೊಲಸು ಪ್ರವೃತ್ತಿಗಳನ್ನು ಬಡಿದೆಬ್ಬಿಸಲು ಪ್ರಯತ್ನಿಸುತ್ತಿದೆ. ಆದರೆ ದಿಲ್ಲಿಯ ಜನತೆ ನಗರದ ಮೂಲ ಪ್ರಶ್ನೆಗಳ ಬಗ್ಗೆ– ಉದ್ಯೋಗ, ಶಿಕ್ಷಣ, ಆರೋಗ್ಯ, ಸಾರ್ವಜನಿಕ ಸಾರಿಗೆ , ವಿದ್ಯುತ್, ನೀರು ಪೂರೈಕೆ, ಮಹಿಳೆಯರ ಸುರಕ್ಷಿತತೆ ಮತ್ತು ಪರಿಸರ ಮಾಲಿನ್ಯದ ಬಗ್ಗೆ– ಚಿಂತಿತರಾಗಿದ್ದಾರೆ. ಬಿಜೆಪಿ, ಝಾರ್ಖಂಡ್‌ನಲ್ಲಿ ಅನುಭವಿಸಿದಂತೆ, ದಿಲ್ಲಿಯಲ್ಲಿಯೂ ತನ್ನ ಕೋಮುವಾದಿ ತಂತ್ರಕ್ಕೆ ಭಾರೀ ಬೆಲೆ ತೆರಬೇಕಾಗಿ ಬರುತ್ತದೆ.





ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ ಸತೀಶ್ ಕುಮಾರ್, ಡೆಕ್ಕನ್ ಹೆರಾಲ್ಡ್

ಹುತಾತ್ಮ ದಿನದಂದು ಹಿಂದುತ್ವ ಭಯೋತ್ಪಾದಕ ಕೃತ್ಯ, ಒಬ್ಬ ವಿದ್ಯಾರ್ಥಿಗೆ ಗಾಯ –ವಿದ್ಯಾರ್ಥಿ ಸಂಘಟನೆಗಳ ಖಂಡನೆ



ಮಹಾತ್ಮ ಗಾಂಧಿ ಹುತಾತ್ಮ ದಿನದಂದು ಇಡೀ ದೇಶ ಸಂಘ ಪರಿವಾರದ ಹಿಡಿತದಿಂದ ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ರಕ್ಷಿಸಲು ಹೋರಾಡುತ್ತಿರುವಾಗ, ಜಾಮಿಯಾದಲ್ಲಿ ಪ್ರತಿಭಟನೆಯ ಮೇಲೆ ಒಬ್ಬ ಹಿಂದುತ್ವ ಭಯೋತ್ಪಾದಕ ದಾಳಿ ಮಾಡಿದ್ದಾನೆ. ಜಾಮಿಯ ಮಿಲಿಯ ವಿದ್ಯಾರ್ಥಿಗಳ ಮೇಲೆ ಹಾರಿಸಿದ ಗುಂಡಿನಿಂದ ಒಬ್ಬ ವಿದ್ಯಾರ್ಥಿ ಗಾಯಗೊಂಡಿದ್ದಾನೆ. ಇದು ಸ್ವತಃ ಗೋಡ್ಸೆಯ ಹೇಡಿತನದ ಹಲ್ಲೆಯನ್ನು ನೆನಪಿಸಿದೆ, ಯಾರ ಪದಚಿಹ್ನೆಗಳಲ್ಲಿ ಬಿಜೆಪಿ–ಆರೆಸ್ಸೆಸ್ ಮತ್ತು ಅವರ ಬಂಟರುಗಳು ಹೆಜ್ಜೆಯಿಡುತ್ತಿದ್ದಾರೋ ಆ ಗೋಡ್ಸೆಯ ಹೇಡಿ ಹಲ್ಲೆಯ ನೆನಪು–ಎಂದು ಎಸ್‌ಎಫ್‌ಐ, ಎಐಎಸ್‌ಎಫ್, ಎಐಎಸ್‌ಎ, ಮತ್ತಿತರ ಹಲವಾರು ವಿದ್ಯಾರ್ಥಿ ಸಂಘಟನೆಗಳು ನೀಡಿರುವ ಜಂಟಿ ಹೇಳಿಕೆ ಹೇಳಿದೆ.

ಗಮನಿಸಬೇಕಾದ ಸಂಗತಿಯೆಂದರೆ ಈ ಭಯೋತ್ಪಾದಕ ಪೋಲೀಸರೇ ಎದುರೇ ರಿವಾಲ್ವರನ್ನು ಝಳಪಿಸುತ್ತಿದ್ದಾಗ ಅವರು ಏನೂ ಮಾಡಲಿಲ್ಲ. ಆದರೆ ಅದೇ ಪೋಲೀಸರು ಮಹಾತ್ಮರ ಬಲಿದಾನವನನು ಸ್ಮರಿಸಲು ಸೇರಿದ್ದ ಪ್ರತಿಭಟನಾಕಾರರನ್ನು ಓಡಾಡಿ ಬಂಧಿಸುತ್ತಿದ್ದರು. ಮಹಾತ್ಮ ಗಾಂಧಿಯವರ ಬಲಿದಾನದ ದಿನದಂದು ಅವರ ಸಮಾಧಿ ಸ್ಥಳವಾದ ರಾಜಘಾಟ್ ಬಳಿ ಯಾರೂ ಸುಳಿಯದಂತೆ ಮಾಡಿರುವ ವಿಶಿಷ್ಟ ಘಟನೆಯೂ ಜನವರಿ 30, 2020ರಂದು ಸಂಭವಿಸಿದೆ ಎಂಬ ಸಂಗತಿಯತ್ತ ಗಮನ ಸೆಳೆದಿರುವ ವಿದ್ಯಾರ್ಥಿ ಸಂಘಟನೆಗಳು ಭಯೋತ್ಪಾದಕ ಕೃತ್ಯಗಳನ್ನು, ಅದರಲ್ಲಿ ಪೋಲೀಸಿನ ಶಾಮೀಲು ಇದೆ ಎಂದು ಖಂಡಿಸಿವೆ, ಜನವರಿ 31ರಂದು ಪ್ರತಿಭಟನೆಗೆ ಈ ಸಂಘಟನೆಗಳು ಕರೆ ನೀಡಿದವು.







ಜನವರಿ 30: ಶಾಂತಿ ಸೌಹಾರ್ದತೆಗಾಗಿ ಮಾನವ ಸರಪಳಿ

'ಸೌಹಾರ್ದತೆಗಾಗಿ ಕರ್ನಾಟಕ' ಮತ್ತು ಇನ್ನಿತರ ಸಮಾನ ಮನಸ್ಕರ ಸಂಘಟನೆಗಳು ಒಂದಾಗಿ ಬೆಂಗಳೂರಿನಲ್ಲಿ ಮತ್ತು ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮಹಾತ್ಮ ಗಾಂಧಿ ಹುತಾತ್ಮರಾದ ಜನವರಿ 30 ರಂದು 'ದ್ವೇಷ ತೊಲಗಲಿ, ಸಹಬಾಳ್ವೆ ಬಲಗೊಳ್ಳಲಿ' ಎಂಬ ಘೋಷಣೆಯೊಂದಿಗೆ ಮಾನವ ಸರಪಳಿಗಳನ್ನು ನಿರ್ಮಿಸಿ ಸಾವಿರಾರು ಜನ ಕೋಮು ಸೌಹಾರ್ದತೆಯನ್ನು ಕಾಪಾಡುವ ವೀರ ಪ್ರತಿಜ್ಞೆಗೈದರು.

ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಮಾನವ ಸರಪಳಿಗಳನ್ನು ರಚಿಸಿ ಸಂವಿಧಾನದ ಪೀಠಿಕೆಯನ್ನು ಪಠಿಸಿ ಸಂವಿಧಾನದ ಆಶಯಗಳನ್ನು ಕಾಪಾಡುವುದಾಗಿ ಪ್ರತಿಜ್ಞೆ ಮಾಡಿದರು. ಸಂಜೆ 5.17 ಕ್ಕೆ ಸರಿಯಾಗಿ ಮಹಾತ್ಮ ಹುತಾತ್ಮನಾದ ಆ ಗಳಿಗೆಯಲ್ಲಿ ಸಾವಿರಾರು ಜನ ಮಹಿಳೆಯರು ಮತ್ತು ಪುರುಷರು ಹಾಗೂ ಮಕ್ಕಳು ಸೇರಿ 2 ನಿಮಿಷಗಳ ಮೌನ ಆಚರಿಸಿ ಎಲ್ಲ ಹುತಾತ್ಮರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

ನಗರದ ಪುರಭವನದಿಂದ ಎಂ.ಜಿ. ರಸ್ತೆಯಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆಯ ವರೆಗೆ ಕೈ ಕೈ ಹಿಡಿದ ಸಾವಿರಾರು ಜನ ಮಾನವ ಸರಪಳಿ ನಿರ್ಮಿಸಿ ಶಾಂತಿಯ ಸಂದೇಶವನ್ನು ಸಾರಿದರು. ಅನಂತರ ಪುರಭವನ ಎದುರು ಸಭೆ ಸೇರಿದ ಸಾವಿರಾರು ಜನ ದೇಶ ಪ್ರೇಮಿ ಗೀತೆಗಳನ್ನು ಹಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ, ಮಹಾತ್ಮ ಗಾಂಧಿಯವರ ಮೊಮ್ಮಗ ತುಷಾರ್ ಗಾಂಧಿ, ನಿವೃತ್ತ ಐಎಎಸ್ ಅಧಿಕಾರಿ ಸೈಯ್ಯದ್ ಝುಮೀರ್ ಪಾಷಾ, ಸಾಹಿತಿ ಡಾ. ಕೆ. ಮರುಳುಸಿದ್ಧಪ್ಪ, ಜನಶಕ್ತಿ ವಾರಪತ್ರಿಕೆಯ ಸಂಪಾದಕ ನಿತ್ಯಾನಂದಸ್ವಾಮಿ, ಡಾ. ಕೆ. ಪ್ರಕಾಶ್, ಕವಯತ್ರಿ ಕೆ. ಷರೀಫಾ ಮೊದಲಾದವರು ಮಾತನಾಡಿ ಮಹಾತ್ಮ ಗಾಂಧಿಯವರ ಮಾನವತಾವಾದಿ ಸಂದೇಶವನ್ನು ಸ್ಮರಿಸಿದರು. ಸೌಹಾರ್ದ ಕರ್ನಾಟಕ ಸಂಚಾಲಕ ಎಸ್.ವೈ. ಗುರುಶಾಂತ ಕಾರ್ಯಕ್ರಮವನ್ನು ನಿರೂಪಿಸಿದರು. ಕೊನೆಯಲ್ಲಿ ರಾಷ್ಟ್ರಗೀತೆಯನ್ನು ಹಾಡಲಾಯಿತು.

ಕುಂದಾಪುರದಲ್ಲಿ ಮಾನವ ಸರಪಳಿ

ಕುಂದಾಪುರ: ಜನವರಿ 30 ಸೌಹಾರ್ದತೆಗಾಗಿ ಕರ್ನಾಟಕದ ಆಶಯವಾಗಿರುವ ದ್ವೇಷ ತೊಲಗಲಿ, ಸಹಬಾಳ್ವೆ ಬಲಗೊಳ್ಳಲಿ ಎಂಬ ಘೋಷಣೆಯೊಂದಿಗೆ ಇಂದು ರಾಜ್ಯದಾದ್ಯಂತ ನಡೆದ ಮಾನವ ಸರಪಳಿ ಕಾರ್ಯಕ್ರಮ ಕುಂದಾಪುರ ಶಾಸ್ತ್ರಿ ವೃತ್ತದಲ್ಲಿ ಜರುಗಿತು. ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಸಿಪಿಎಂ ಮುಖಂಡ ಸುರೇಶ್ ಕಲ್ಲಾಗರ 1948 ಜನವರಿ 30 ರಂದು ಗಾಂಧೀಜಿಯವರನ್ನು ಹತ್ಯೆ ಮಾಡುವುದರ ಮೂಲಕ ಭಯೋತ್ಪಾದನೆ ಆರಂಭವಾಯಿತು. ಅಂದು ಭಯೋತ್ಪಾದಕ ಗೋಡ್ಸೆ ಕೊಂದಿರುವುದು ಮಹಾತ್ಮನನ್ನು ಮಾತ್ರವಲ್ಲ ಬದಲಾಗಿ ಈ ದೇಶದ ಸೌಹಾರ್ದತೆ, ಸಹಬಾಳ್ವೆಗೆ ಒಡ್ಡಿದ ಆತಂಕವಾಗಿದೆ.ಇಂದು ದೇಶದ ಸಂವಿಧಾನವನ್ನ ಬದಲಿಸಿ ಮೇಲ್ ಜಾತಿಯ ಪರವಾದ ಮನು ಸಿದ್ಧಾಂತ ತರಲು ಪ್ರಯತ್ನಿಸಲಾಗುತ್ತಿದೆ. ಸಂವಿಧಾನ ಉಳಿಸಲು ನಮ್ಮ ಹೋರಾಟ ತೀವ್ರಗೊಳಿಸಬೇಕು ಎಂದು ಅವರು ಹೇಳಿದರು.ಸಿಪಿಎಂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ. ಶಂಕರ್ ಮಾತನಾಡಿ; ಸ್ವಾತಂತ್ರ್ಯ ಹೋರಾಟದಲ್ಲಿ ಎಲ್ಲಾ ಧರ್ಮದವರೂ ಒಂದಾಗಿ ಹೋರಾಟ ಮಾಡಿದರು. ಈಗ ದೇಶ ಒಂದಾಗಿ ಉಳಿಯಬೇಕಾಗಿದೆ. ಆದರೆ ಸರಕಾರ ತನ್ನ ಆಡಳಿತ ವೈಫಲ್ಯ ಮುಚ್ಚಿಕೊಳ್ಳಲು ಯಾರಿಗೂ ಉಪಯೋಗವಿಲ್ಲದ ಸಿಎಎ, ಎನ್ಆರ್‌ಸಿ, ಎನ್‌ಪಿಆರ್ ನ್ನು ತಂದು ಜನ ಅದರ ಕುರಿತು ಚರ್ಚಿಸುವಂತೆ ಮಾಡುತ್ತಿದೆ. ಇದು ಜನರನ್ನು ವಿಭಜಿಸಿ ದ್ವೇಷ ಬೆಳೆಸಿ ಆಳುವ ಸಂವಿಧಾನ ವಿರೋಧಿ ಕೃತ್ಯವಾಗಿದೆ ಎಂದು ಹೇಳಿದರು.

ಬೈಂದೂರು ಸಿಪಿಎಂ ಮುಖಂಡರಾದ ವೆಂಕಟೇಶ್ ಕೋಣಿ ಮಾತನಾಡಿ; ಮಾರ್ಟಿನ್ ಲೂಥರ್ ಕಿಂಗ್ ಅವರು ಹೇಳಿದಂತೆ ರಾಜಕೀಯ ಅಧಿಕಾರ ವೆಂಬುವುದ ಒಂದು ವೇಳೆ ಧಾರ್ಮಿಕ ಅಸಹನೆಗೆ ಕಾರಣವಾದರೆ ಅದು ತಪ್ಪು ಜನರಿಂದ ಆಡಳಿತ ನಡೆಯುತ್ತಿದೆ ಎಂದರ್ಥ, ಅದೇ ಧಾರ್ಮಿಕ ಸಮಸ್ಯೆಗಳು ದೇಶದಲ್ಲಿ ಎದುರಾದಾಗ ರಾಜಕೀಯವಾಗಿ ಪರಿಹಾರ ಮಾಡಲು ಸಾದ್ಯವಾದರೆ ಅದೇ ಶ್ರೇಷ್ಠ ಕೆಲಸವಾಗುತ್ತದೆ ಎಂದು ಹೇಳಿದರು.

ಸಿಪಿಎಂ ಮುಖಂಡ ಎಚ್ ನರಸಿಂಹ ಮಾತನಾಡಿ; ಪೌರತ್ವ ಕಾಯ್ದೆಯ ಅಪಾಯ ಮುಂದೆ ಜನರಿಗೆ ಬಾರಿ ಸಂಕಷ್ಟ ತರಲಿದೆ. ಆಧಾರ್ ಕಾರ್ಡ್ ನ್ನು ಜಾರಿ ಮಾಡುವಾಗಲೂ ಸರಕಾರ ಸಮಸ್ಯೆಗಳನ್ನು ಹೇಳಿರಲಿಲ್ಲ ಇಂದೂ ಕೂಡ ಆಧಾರ್ ಸಮಸ್ಯೆ ಪರಿಹರಿಸಲು ಜನರು ದುಡಿಮೆ ಬಿಟ್ಟು ಅಲೆಯುತ್ತಿದ್ದಾರೆ. ಬಿಜೆಪಿ ಪರ ಇರುವ ಹಲವಾರು ಜನ ಇಂದು ಪೌರತ್ವ ಕಾಯ್ದೆಯಿಂದ ಎಲ್ಲಾ ಸಮಸ್ಯೆಗಳು ಪರಿಹಾರವಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದಾರೆ. ಪೌರತ್ವ ಕಾಯ್ದೆಯ ವಿರುದ್ಧ ದೇಶದ ಭವಿಷ್ಯವಾಗಿರುವ ಯುವಜನರು, ವಿದ್ಯಾರ್ಥಿಗಳು ದಿನನಿತ್ಯ ಹೋರಾಟ ಮಾಡುತ್ತಿದ್ದಾರೆ. ಇದು ಈ ದೇಶದ ಮುಸ್ಲಿಂರ ಪ್ರಶ್ನೆ ಮಾತ್ರವಲ್ಲ ಹಿಂದುಳಿದ ವರ್ಗದ ನಮ್ಮೆಲ್ಲರ ಸಮಸ್ಯೆ ನಾವು ಈ ಹೋರಾಟವನ್ನು ಮುಂದುವರಿಸಬೇಕಾಗಿದೆ ಎಂದರು. ಸೌಹಾರ್ದತೆಗಾಗಿ ಎಲ್ಲರೂ ಪ್ರತಿಜ್ಞಾವಿಧಿ ಸ್ವೀಕರಿಸಿದರು. ದಾಸ ಭಂಡಾರಿ, ಮಹಾಬಲ ವಡೇರ ಹೋಬಳಿ, ರಾಜೀವ ಪಡುಕೋಣೆ, ನಾಗರತ್ನ ನಾಡ, ರೊನಾಲ್ಡ್ ರಾಜೇಶ್, ಶೀಲಾವತಿ, ರವಿ ವಿಎಂ ಇದ್ದರು.

–ವೆಂಕಟೇಶ್ ಕೋಣಿ

ಪೊಲೀಸರಿಂದ ಭಯದ ವಾತಾವರಣ – ಸಾರಾ ಅಬೂಬಕರ್

ಗಾಂಧಿ ಹುತಾತ್ಮ ದಿನ ಆಚರಣೆಗೆ ಅನುಮತಿ ನೀಡಲು ಪೊಲೀಸರು ಹಿಂದೇಟು ಹಾಕುತ್ತಿದ್ದಾರೆ. ಸಂವಿಧಾನ ನೀಡಿದ ಹಕ್ಕನ್ನು ಪೊಲೀಸರು ಕಸಿದುಕೊಳ್ಳುತ್ತಿದ್ದಾರೆ. ಮಂಗಳೂರಿನಲ್ಲಿ ಶೋಚನೀಯ ಸ್ಥಿತಿ ತಲೆದೋರಿದ್ದು ಭಯದ ವಾತಾವರಣ ಇದೆ ಎಂದು ಹಿರಿಯ ಸಾಹಿತಿ ಸಾರಾ ಅಬೂಬಾಕರ್ ಆತಂಕ ವ್ಯಕ್ತಪಡಿಸಿದ್ದಾರೆ.

ಮಂಗಳೂರಿನ ಪುರಭವನದ ಆವರಣದಲ್ಲಿ ಜನವರಿ 30ರ ಸಂಜೆ ನಡೆದ 'ಗಾಂಧಿ ಹುತಾತ್ಮ ದಿನ–ವಿಭಜನೆಯ ರಾಜಕಾರಣ ಸಾಕು; ಗಾಂಧಿಯ ಭಾರತ ಬೇಕು' ಎನ್ನುವ ಪರಿಕಲ್ಪನೆಯಲ್ಲಿ ಕವಿ, ಸಾಹಿತಿ, ಬರಹಗಾರರು, ಹಾಡುಗಾರರು, ಕಲಾವಿದರು, ಹೋರಾಟಗಾರರು ಸಹಿತ ವಿವಿಧ ಕ್ಷೇತ್ರದ ಗಣ್ಯರು ಪಾಲ್ಗೊಂಡು ದೇಶದಲ್ಲಿ ನಡೆಯುತ್ತಿರುವ ಘಟನಾವಳಿಗಳ ಬಗ್ಗೆ ಸಂವಾದ ನಡೆಸಿದರು. ಈ ಸಂದರ್ಭ ಮಾತನಾಡಿದ ಸಾರಾ ಅಬೂಬಾಕರ್ ತಮ್ಮ ಆತಂಕವನ್ನು ಹೊರಹಾಕಿದರು.



ಸ್ವಾತಂತ್ರ್ಯ ಹೋರಾಟಕ್ಕೆ ಇಂಬುಕೊಟ್ಟ ಮಂಗಳೂರಿನ ಪುರಭವನದ ಮೆಟ್ಟಿಲುಗಳ ಮೇಲೆ ಮಹಾತ್ಮಾ ಗಾಂಧೀಜಿಯವರ ಹುತಾತ್ಮ ದಿನ ಆಚರಿಸಲು ಸಮಾನ ಮನಸ್ಕರು ಅನುಮತಿಗಾಗಿ ಪೊಲೀಸರಲ್ಲಿ ಮನವಿ ಮಾಡಿದ್ದರು. ಮೊದಲು ಅನುಮತಿ ನಿರಾಕರಿಸಿ ಕೊನೆಗೂ ನೀಡಿದ್ದಾರೆ. ದೇಶಕ್ಕಾಗಿ ಸರ್ವಸ್ವವನ್ನೂ ತ್ಯಾಗ ಮಾಡಿದ್ದ ಗಾಂಧಿಯ ಹುತಾತ್ಮ ದಿನ ಆಚರಣೆಗೆ ನಗರದಲ್ಲಿ ಇಂತಹ ಪರಿಸ್ಥಿತಿ ಉದ್ಭವಿಸಿರುವುದು ಎಲ್ಲವೂ ಸರಿಯಿಲ್ಲ ಎನ್ನುವುದನ್ನು ಖಾತ್ರಿ ಪಡಿಸುತ್ತದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ರಂಗಕರ್ಮಿ ಚಂದ್ರಹಾಸ್ ಉಳ್ಳಾಲ್, ಪ್ರಭಾಕರ್ ಕಾಪಿಕಾಡ್ ನೇತೃತ್ವದ ತಂಡವು ಕುವೆಂಪುರವರ 'ಓ ನನ್ನ ಚೇತನ' ಹಾಡನ್ನು ಪ್ರಸ್ತುತ ಪಡಿಸಿದರು. ಹಾಡಿಗೆ ಸಭಿಕರೂ ಧ್ವನಿಗೂಡಿಸಿದರು. ಹಾಡು ಹಲವುಪಟ್ಟು ಪ್ರತಿಧ್ವನಿಸಿತು. ರಸ್ತೆಯಲ್ಲಿ ಸಂಚರಿಸುತ್ತಿದ್ದ ವಾಹನಗಳಲ್ಲಿನ ಪ್ರಯಾಣಿಕರೂ ಇತ್ತ ಕಣ್ಣು ಹಾಯಿಸುವಂತಿತ್ತು.

ಬರಹಗಾರ ವಿಲ್ಸನ್ ಕಟೀಲ್ ದಾಖಲೆ ಕುರಿತ ಮೂರು ಕವನಗಳನ್ನು ವಾಚಿಸಿದರು. ಮುನೀರ್ ಕಾಟಿಪಳ್ಳ, ಸಚಿನ್ ಅಂಕೋಲ, ಜಲೀಲ್ ಮುಕ್ರಿ ಮತ್ತಿತರ ಯುವ ಕವಿಗಳೂ ತಮ್ಮ ಕವಿತೆಗಳಲ್ಲಿ ಸದ್ಯದ ಆತಂಕವನ್ನು ವ್ಯಕ್ತಪಡಿಸಿದರು. ಲೇಖಕಿ ಚಂದ್ರಕಲಾ ನಂದಾವರ ಅವರು ಗಾಂಧಿ ಕುರಿತಾದ ಮಂಜೇಶ್ವರ ಗೋವಿಂದ ಪೈ ಹಾಗೂ ಗೋಪಾಲಕೃಷ್ಣ ಅಡಿಗರ ಕವಿತೆಗಳನ್ನು ವಾಚಿಸಿದರು.

ಚಿತ್ರ ಕಲಾವಿದ ವಿಲ್ಸನ್ ಕಯ್ಯಾರ್, ಗಾಂಧೀಜಿ ಹಣೆಗೆ ಗುರಿ ಇಟ್ಟ ಬಂದೂಕಿನ ದೃಶ್ಯವನ್ನು ಕುಂಚಗಳಲ್ಲಿ ಬಿಡಿಸಿದರು.ಇನ್ನೊಬ್ಬ ಚಿತ್ರಕಲಾವಿದ ಚೇತನ್‌ಕೊಪ್ಪ ಗಾಂಧೀಜಿ ಹಾಗೂ ಶಾಂತಿಯ ಸಂಕೇತ ಪಾರಿವಾಳದ ಚಿತ್ರ ಬಿಡಿಸಿದರು. ಮತ್ತೋರ್ವ ಚಿತ್ರ ಕಲಾವಿದ ಚೇತನ್ ಪುತ್ತೂರ್ 1948ರ ಗಾಂಧಿ ಹಾಗೂ ಇಂದಿನ ಗಾಂಧಿ ಮೆರವಣಿಗೆ ಕುರಿತು ಕುಂಚದ ಬಣ್ಣಗಳಲ್ಲಿ ವಿವರಿಸಿದರು.

ಕಾರ್ಯಕ್ರಮದಲ್ಲಿ ನ್ಯಾಯವಾದಿ ಯಶವಂತ ಮರೋಳಿ, ಸಿಎಸ್‌ಐ ಚರ್ಚ್‌ನ ಫಾದರ್ ವಾಟ್ಸನ್, ರಾಜ್ಯ ರೈತ ಸಂಘದ ಪ್ರಧಾನ ಕಾರ್ಯದರ್ಶಿ ರವಿಕಿರಣ ಪುಣಚ, ಸಮುದಾಯದ ಹಿರಿಯ ಸಂಘಟಕ ವಾಸುದೇವ ಉಚ್ಚಿಲ್, ಕಾರ್ಟೂನಿಸ್ಟ್ ಪಿ.ಮಹಮ್ಮದ್, ಯಾದವ ಶೆಟ್ಟಿ, ಜಯಂತಿ ಶೆಟ್ಟಿ, ಪ್ರೊ.ಪಟ್ಟಾಭಿರಾಮ ಸೋಮಯಾಜಿ, ಡಾ.ಕೃಷ್ಣಪ್ಪ ಕೊಂಚಾಡಿ, ಕೃಷ್ಣಪ್ಪ ಸಾಲ್ಯಾನ್, ದಲಿತ ಚಳುವಳಿಗಾರ ಎಂ.ದೇವದಾಸ್, ಡಿವೈಎಫ್‌ಐ ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಕಾರ್ಯದರ್ಶಿ

ಸಂತೋಷ್ ಬಜಾಲ್, ಸಾಹಿತಿ ಡಾ.ಎನ್.ಇಸ್ಮಾಯಿಲ್, ಸಿಪಿಐ(ಎಂ) ಮುಖಂಡ ವಸಂತ ಆಚಾರಿ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಹುಸೈನ್ ಕಾಟಿಪಳ್ಳ ಗಾಂಧೀಜಿ ಕುರಿತ ಹಾಡನ್ನು ಹಾಡಿದರು. ನ್ಯಾಯವಾದಿ ಚರಣ್ ಶೆಟ್ಟಿ, ಸಂವಿಧಾನದ ಪೀಠಿಕೆ ಬೋಧಿಸಿದರು. ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು.

–ವಾ.ಉ.

ಬಳ್ಳಾರಿಯಲ್ಲಿ ಸೌಹಾರ್ದ ದಿನ

ಜನವರಿ 30 (1948) ಗಾಂಧೀಜಿಯವರನ್ನು ಗುಂಡಿಕ್ಕಿ ಹತ್ಯೆಗೈದ ದಿನ. ಇಡೀ ದೇಶವೇ ದುಃಖದ ಕಡಲಲ್ಲಿ ಮುಳುಗಿದ ಆ ದಿನ. ಅದರ ನೆನಪಿನಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಬಲಿದಾನ ಮಾಡಿದ ಎಲ್ಲಾ ಹುತಾತ್ಮರ ದಿನವಾಗಿ ದೇಶಾದ್ಯಂತ ಆಚರಿಸಲಾಗುತ್ತಿದೆ. ಗಾಂಧೀಜಿಯವರನ್ನು ಕೊಲ್ಲಲು ಅಂದು ನಾಲ್ಕು ಪ್ರಯತ್ನಗಳು ನಡೆದಿದ್ದವು. ಇಂದು ದಿನ ದಿನವೂ ಅವರ ಸತ್ಯಾಗ್ರಹದ ಆಶಯಗಳನ್ನು ಹತ್ಯೆ ಮಾಡುವ ಪ್ರಯತ್ನಗಳು ನಡೆಯುತ್ತಲೇ ಇವೆ. ಹಿಂಸೆ ತಾಂಡವವಾಡುತ್ತಿದೆ. ಮಹಿಳೆಯರ ಮೇಲೆ ಹಿಂಸೆ, ದಲಿತರು–ಬುಡಕಟ್ಟು ಸಮುದಾಯಗಳ ಮೇಲೆ ಧಾಳಿ, ರೈತರು ಕೂಲಿಕಾರರ ಮೇಲೆ ಹಿಂಸೆ, ಅಲ್ಪ ಸಂಖ್ಯಾತರ ಮೇಲೆ ಹಿಂಸೆ, ವಿವಿಧ ಸ್ವರೂಪದ ದೌರ್ಜನ್ಯ, ಕೊಲೆಗಳು, ನಮ್ಮ ನಾಡಿನ ಭವಿಷ್ಯವಾಗಿರುವ ವಿದ್ಯಾರ್ಥಿ–ಯುವಜನರ ಧ್ವನಿಯನ್ನು ದಮನಿಸಲಾಗುತ್ತಿದೆ. ಈ ಯುವ ಚೇತನಗಳ ಮೇಲೆ ಹಿಂಸಾಕಾಂಡ ಹರಿಯ ಬಿಡಲಾಗಿದೆ. ಇತ್ತೀಚೆಗೆ ದೇಶಾದ್ಯಂತ ನಡೆದ ಚಳುವಳಿಗಳಲ್ಲಿ ಸರ್ಕಾರಗಳ ಗುಂಡೇಟಿನಿಂದ ಮೂವತ್ತು ಹತ್ಯೆಗಳು! ಸಮಾಜ ದೊಳಗೆ ವಿವಿಧ ನೆಪವೊಡ್ಡಿ ಹಲವು ಗೂಂಡಾ ಗುಂಪುಗಳ ಧಾಳಿಗಳು, ಕಗ್ಗೊಲೆಗಳು. ಇಂತಹ ಅಟ್ಟಹಾಸ, ಹಿಂಸೆ, ದೌರ್ಜನ್ಯಗಳ ಈ ತಾಂಡವದ ವಿರುದ್ಧ ಜನರು ಬೃಹತ್ ಪ್ರಮಾಣದಲ್ಲಿ ಒಗ್ಗೂಡಿ ಸೆಣಸಬೇಕಿದೆ. ಅಂದು ಸ್ವಾತಂತ್ರ್ಯಕ್ಕಾಗಿ ಪ್ರಾಣ ತೆತ್ತ ಸಾವಿರಾರು ಯೋಧರ ಆಶಯಗಳನ್ನು ಮಣ್ಣುಗೂಡಿಸುವ ಕುತಂತ್ರಗಳು ನಡೆಯುತ್ತಿವೆ. ಈ ಸ್ವಾತಂತ್ರ್ಯ ಹೋರಾಟದ ಆಶಯಗಳ ಸಾಕಾರವಾದ, ಡಾ.ಅಂಬೇಡ್ಕರ್‌ರವರ ನೇತೃತ್ವದಲ್ಲಿ ರಚಿಸಿದ ಸಂವಿಧಾನದ ಮೇಲೆ, ವರ್ತಮಾನಕ್ಕೂ ಮತ್ತು ಭವಿಷ್ಯತ್ತಿಗೂ ಬೆಳಕಾಗಿರುವ ಅದರ ಮೂಲ ಉನ್ನತ ಆಶಯಗಳ ಮೇಲೆ ಧಾಳಿಗಳೂ ನಡೆದಿವೆ. ದೇಶದ ಪ್ರಜಾಪ್ರಭುತ್ವದ ಖಾತರಿಯಾದ ಸಂವಿಧಾನಕ್ಕೆ ವಿರುದ್ಧವಾಗಿ ಇಂದು ಹಲವಾರು ಕಾನೂನುಗಳನ್ನು ರಚಿಸಲಾಗಿದೆ. ಸಮಾನತೆ, ಸೋದರತ್ವ, ಸೆಕ್ಯುಲರ್(ಮತ ನಿರಪೇಕ್ಷತೆಯ) ತತ್ವಗಳನ್ನು ಗಾಳಿಗೆ ತೂರುವ 'ಪೌರತ್ವ ತಿದ್ದುಪಡಿ ಕಾಯ್ದೆ' ಮೂಲಕ ಅತ್ಯಂತ ಅಪಾಯಕಾರಿ ಕ್ರಮಗಳನ್ನು ಜಾರಿಗೊಳಿಸುವ ಪ್ರಯತ್ನ ಸಾಗಿದೆ. ಇದು ಹಿಂದೂ, ಮುಸ್ಲಿಂ ಮುಂತಾದ ಎಲ್ಲಾ ಧರ್ಮೀಯರು, ಒಟ್ಟಾರೆ ಭಾರತೀಯರನ್ನು ತೀವ್ರವಾಗಿ ಭಾಧಿಸಲಿದೆ, ಯಾತನಾಮಯ ಸ್ಥಿತಿಗೆ ತಳ್ಳಲಿದೆ. ಈ ಹಿಂಸೆ, ದೌರ್ಜನ್ಯ, ಸಂವಿಧಾನದ ತತ್ವಗಳ ಉಲ್ಲಂಘನೆಯ ವಿರುದ್ಧ ಇಡೀ ದೇಶವೇ ಸಿಡಿದೆದ್ದಿದೆ. ಆದರೂ ದೇಶವನ್ನು ಆಳುವವರು ಜನರ ಈ ಭಾವನೆಗಳಿಗೆ ಬೆಲೆ ಕೊಡದೆ ಗಾಂಧೀಜಿಯ ಆಶಯಗಳನ್ನು ಮಣ್ಣುಗೂಡಿಸುವ ದುಷ್ಟ ಯೋಜನೆಯನ್ನು ಮುಂದುವರೆಸುತ್ತಿದ್ದಾರೆ. ಗಾಂಧೀಜಿ ಹೇಳಿದ್ದರು 'ಭಾರತೀಯರಿಗೆ ನಾನು ತೋರಿದ ದಾರಿ ಪ್ರೀತಿಯ ದಾರಿ, ದ್ವೇಷದ ದಾರಿಯಲ್ಲ' ಎಂದು.

ಇದರ ಭಾಗವಾಗಿ ಬಳ್ಳಾರಿ ನಗರದಲ್ಲಿರುವ ಪ್ರಗತಿಪರ ಸಂಘಟನೆಗಳು, ಮಹಿಳಾ ಸಂಘಟನೆಗಳು, ಕಾರ್ಮಿಕ ಸಂಘಟನೆಗಳು ಸಭೆಯನ್ನು ಸೇರಿದ್ದು, ಈ ಸಭೆಯಲ್ಲಿ ಮುಖಂಡರಾದ ಟಿ.ಜಿ.ವಿಠಲ್ ಗಾಂಧೀಭವನ ಕಾರ್ಯದರ್ಶಿ, ಜೆ.ಸತ್ಯಬಾಬು ಸಿಐಟಿಯು ಪ್ರಧಾನ ಕಾರ್ಯದರ್ಶಿ, ಹಬೀಬುಲ್ಲಾ ನಿವೃತ್ತ ಅಧಿಕಾರಿ ಮತ್ತು ಸಯ್ಯದ್ ಅಮ್ಜದ್ ಹುಸೇನ್ ಮುಂತಾದವರು ಕಾರ್ಯಕ್ರಮ ಕುರಿತು ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಮಹ್ಮದ್ ಉಸ್ಮಾನ್ ಕೌಲ್‌ಬಜಾರ್ ಮುಸ್ಲೀಂ ಪ್ರಗತಿಪರ ಸಂಘಟನೆ, ಮೆಹಬೂಬ್ ಮತ್ತು ಕಲೀಲ್, ಎಪಿಸಿಆರ್ ಸಂಘಟನೆ, ಮುನೀರ್ ಅಹ್ಮದ್ ಖಾನ್, ಜಮಾತೆ ಇಸ್ಲಾಂ, ಸಯ್ಯದ್ ಅಮ್ಜದ್ ಹುಸೇನ್, ಸಯ್ಯದ್ ನಿಜಾಮುದ್ದೀನ್, ಮುಂಡ್ಲೂರು ಹನುಮಕಿಶೋರ್ ಅಧ್ಯಕ್ಷರು, ಯೂತ್ ಕಾಂಗ್ರೆಸ್, ಪರ್ವೀನ್‌ಬಾಬು ಪಾಲಿಕೆ ಸದಸ್ಯರು ಮತ್ತು ಪಾಂಡುರಂಗ, ಪ್ರಭಾವತಿ ಜೆ.ಎಂ.ಎಸ್., ಮಲ್ಲಮ್ಮ ಅಂಗನವಾಡಿ ನೌಕರರ ಸಂಘಟನೆ, ಮೇರಿ ಸುನೀತಾ ಅಕ್ಷರದಾಸೋಹ ನೌಕರ ಸಂಘಟನೆ ಮುಂತಾದವರು ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲೀಂ ಸಂಘಟನೆಯ ಮಹಿಳೆಯರು ಭಾಗವಹಿಸಿದ್ದು, ಸಭೆಯ ನಂತರ ಗಾಂಧಿಭವನದಿಂದ ರಾಯಲ್ ವೃತ್ತದವರೆಗೆ ಮಾನವ ಸರಪಳಿ ರಚಿಸಿ ಕೋಮು ಸೌಹಾರ್ದತೆಗಾಗಿ ಒಗ್ಗಟ್ಟನ್ನು ಪ್ರದರ್ಶಿಸಿದ್ದಾರೆ.

–ಜೆ. ಸತ್ಯಬಾಬು

ಗಾಂಧಿ ಕಂಡ ಬಹುತ್ವ ಭಾರತ

ಗಾಂಧಿ ಪ್ರತಿಪಾಧಿಸಿದ ಶಾಂತಿ ಅಹಿಂಸೆ ಮತ್ತು ಸಹಬಾಳ್ವೆಯ ಇಂದು ಜನ ಸಾಮಾನ್ಯರಿಂದ ಮರೆಯಾಗುವಂತೆ ಆಳುವ ಸರ್ಕಾರಗಳು ನಡೆದುಕೊಳ್ಳುತ್ತಿವೆ ಇದು ರಾಷ್ಟ್ರಪಿತ ಮಹಾತ್ಮ ಗಾಂಧಿಯವರಿಗೆ ಮಾಡುವ ಅವಮಾನ ಎಂದು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಎಚ್. ಎಂ.ಶಿವಣ್ಣನವರು ಹೇಳಿದರು. ಹಾಸನ ನಗರದ ಮಹಾರಾಜ ಪಾರ್ಕ್‌ನಲ್ಲಿ ಗಾಂಧಿ ಹುತಾತ್ಮ ದಿನದ ಅಂಗವಾಗಿ ಸೌಹಾರ್ದ ಕರ್ನಾಟಕ ಮತ್ತು ಜನಪರ ಸಂಘಟನೆಗಳ ನೇತೃತ್ವದಲ್ಲಿ ನಡೆದ "ಗಾಂಧಿ ಕಂಡ ಬಹುತ್ವ ಭಾರತ" ಎಂಬ ವೈವಿದ್ಯಮಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸ್ವತಂತ್ರ್ಯ ಪೂರ್ವದಲ್ಲಿ ಬ್ರಿಟೀಶರ ಶೋಷಣೆಯ ವಿರುದ್ಧ ಜಾತಿ, ಧರ್ಮ, ಭಾಷೆಯ ಭೇದಭಾವವನ್ನು ಮರೆತು ಒಗ್ಗಟ್ಟಿನಿಂದ ದೇಶಕ್ಕಾಗಿ ಗಾಂಧಿಯ ನೇತೃತ್ವದಲ್ಲಿ ಹೋರಾಟದರು, ಆದರೆ ಇಂದು ನಮ್ಮ ಮನಸ್ಸುಗಳನ್ನು ಜಾತಿ, ಧರ್ಮ, ಭಾಷೆಯ ಆಧಾರದಲ್ಲಿ ಒಡೆದು ಆಳಲಾಗುತ್ತಿದೆ ಇಂದು ದೇಶದ ಮುಂದಿರುವ ಬಡತನ, ನಿರುದ್ಯೋಗ, ಅಸ್ಪೃಷ್ಯತೆ, ಕೋಮುವಾದ ಮತ್ತು ಆರ್ಥಿಕ ಹಿಂಜರಿತದಂತಹ ಸವಾಲುಗಳನ್ನು ಒಟ್ಟಿಗೆ ಭಾರತೀಯರಾಗಿ ಎದುರಿಸಬೇಕಾಗಿದೆ ಎಂದರು.

ಗಾಂಧಿ ಕಂಡ ಬಹುತ್ವ ಭಾರತದ ಕುರಿತು ವಿಚಾರ ಮಂಡಿಸಿದ ಉಪನ್ಯಾಸಕರಾದ ರೋಹಿತ್ ಅಸಗರಹಳ್ಳಿ ಮಾತನಾಡಿ ನಾವಿನ್ನು ಗಾಂಧಿಯನ್ನು ಅರ್ಥಮಾಡಿಕೊಳ್ಳುವುದರಲ್ಲೆ ಕಾಲ ಕಳೆಯುತ್ತಿದ್ದೇವೆ. ಗಾಂಧಿಯನ್ನು ಬಿಡಿ ಬಿಡಿಯಾಗಿ ನೊಡದೆ ಇಡಿಯಾಗಿ ನೋಡಿದರೆ ಮಾತ್ರ ಅರ್ಥವಾಗುತ್ತದೆ. ಗಾಂಧಿಯಲ್ಲಿ ಅನೇಕ ತಕರಾರು ಇದ್ದರು. ನಿರಾಕರಿಸಲು ಸಾದ್ಯವಿಲ್ಲ. ಸ್ವರಾಜ್ ಬಗ್ಗೆ ಗಾಂಧಿಗಿದ್ದ ಕಲ್ಪನೆ ವಿಭಿನ್ನವಾಗಿತ್ತು ಬ್ರಿಟೀಷರನ್ನು ದೇಶದಿಂದ ಒಡಿಸುವುದಾಗಿರಲಿಲ್ಲ ನಮ್ಮನ್ನು ನಾವು ಆಳುವುದಾಗಿತ್ತು. ಗಾಂಧಿಯ ಬಹುತ್ವದಲ್ಲಿ ಜಗತ್ತಿನ ಸರ್ವ ಜನರು ಸಮನಾಗಿದ್ದರು. ಗಾಂಧಿ ಸಂವಾದಕ್ಕೆ ಮುಂದಾಗುತ್ತಿದ್ದರು. ಸಂವಿಧಾನದಲ್ಲಿ ಗಾಂಧಿ ತತ್ವಗಳನ್ನು ಕಾನೂನಿನ ಚೌಕಟ್ಟಿನಿಂದ ಹೊರ ಉಳಿದಿದೆ. ಗಾಂಧಿ ಯಂತ್ರ ನಾಗರಿಕತೆಯನ್ನು ವಿರೋಧಿಸಿದ್ದರು. ತಮ್ಮ ವಿಚಾರವನ್ನು ಯಾರ ಮೇಲು ಹೇರುತ್ತಿರಲಿಲ್ಲ. ದೇಶವನ್ನು ಬೇಗ ಅರಿತು ಕೊಂಡಿದ್ದರು. ಗಾಂಧಿ ಮತ್ತೆ ಮತ್ತೆ ಪ್ರಯೋಗಕ್ಕೆ ಒಳಗಾಗುತ್ತಿದ್ದರು. ಯಾವುದೇ ಭಾಷೆಯನ್ನು ಯಾರ ಮೇಲು ಹೇರುತ್ತಿರಲಿಲ್ಲ. ತಮ್ಮ ಅನೇಕ ಕೃತಿಗಳನ್ನು ಮರಾಠಿಯಲ್ಲೆ ಬರೆದು ನಂತರ ಇಂಗ್ಲಿಷ್‌ಗೆ ಭಾಷಾಂತರ ಮಾಡಿದ್ದರು. ಗಾಂಧಿಯನ್ನು ಅನೇಕ ವಿಚಾರಗಳಿಗೆ ಪುನಶ್ಚೇತನ ಮಾಡಿಕೊಳ್ಳಬೇಕಾಗುತ್ತದೆ. ಗಾಂಧಿ ಕಂಡಂತೆ ನಾವು ಬಹುತ್ವದ ಭಾರತವನ್ನು ಕಟ್ಟಬೇಕಾಗಿದೆ ಎಂದರು.

ಕಾರ್ಯಕ್ರದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ದರ್ಮೇಶ್ ಈ ದೇಶ ಬಹುತ್ವದ ಭಾರತವಾಗಿದ್ದು ಏಕ ಭಾರತದ ಅಪಾಯವನ್ನು ನಾವು ಅರಿತು ಕೊಳ್ಳಬೇಕಾಗಿದೆ. ಎಲ್ಲರ ಹೋರಾಟದಿಂದ ಅಂದರೆ ಸರ್ವಜನರ ವಿಮೋಚನಾ ಚಳವಳಿ ಹೋರಾಟದಿಂದ ಪಡೆದ ಭಾರತವನ್ನು ಉಳಿಸಿಕೊಳ್ಳಬೇಕಾಗಿದೆ. ದೇಶದ ಸಂವಿಧಾನ ಉಳಿಯ ಬೇಕಾದರೆ. ಗಾಂಧಿ, ಅಂಬೇಡ್ಕರ್, ಭಗತ್ ಸಿಂಗ್ ಕಂಡ ಬಹುತ್ವದ ಭಾರತವನ್ನು ಉಳಿಸಿಕೊಳ್ಳಬೇಕಾದರೆ ಪೌರತ್ವ ಕಾಯಿದೆ ಹಿಂದಕ್ಕೆ ಪಡೆಯಬೇಕು ಎಂದರು. ದೇಶ ಭಕ್ತಿಯ ಹೆಸರಿನಲ್ಲಿ ದೇಶವನ್ನು ಮಾರಾಟ ಮಾಡುತ್ತಿರುವವರ ವಿರುದ್ಧ ಹೋರಾಟ ನಡೆಸಬೇಕಾಗಿದೆ. ದ್ವಿರಾಷ್ಟ ಸಿದ್ಧಾಂತದ ಮೂಲಕ ಹಿಂದೆ ದೇಶ ಒಡೆಯಲಾಯಿತು. ಈಗ ಪೌರತ್ವ ಕಾಯಿದೆ ಮೂಲಕ ಮತ್ತೊಮ್ಮೆ ದೇಶ ಒಡೆಯಲು ಮುಂದಾಗಲಾಗುತ್ತಿದೆ. ಬಹುತ್ವದ ಭಾರತ ಉಳಿಸುವ ಪ್ರತಿಜ್ಞೆ ಮಾಡಬೇಕಾಗಿದೆ ಎಂದರು.



ವೇದಿಕೆಯಲ್ಲಿ ಅಂತರಾಷ್ಟ್ರೀಯ ಖ್ಯಾತಿಯ ಕಲಾವಿದರಾದ ಕೆ.ಟಿ.ಶಿವಪ್ರಸಾದ್, ಹಿಂದು ಧರ್ಮ ಗುರು ಕಿರಣ್, ಇಸ್ಲಾಂ ಧರ್ಮ ಗುರು ಮೌಲಾನ ಅನ್ವರ್ ಹಸನ್, ಕ್ರೈಸ್ತ ಧರ್ಮ ಗುರು ಶಂತ್ ಕುಮಾರ್, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಬಿ.ಪುಷ್ಪ, ಅಬ್ದುಲ್ ಸಮದ್ ಉಪಸ್ತಿತರಿದ್ದರು. ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷ ನವೀನ್ ಪ್ರಾಸ್ತಾವಿಕ ನುಡಿಗಳನ್ನಾಡಿದರು ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಪೃಥ್ವಿ ಎಂ.ಜಿ. ಸ್ವಾಗತಿಸಿ ನಿರೂಪಿಸಿದರು ಕಾರ್ಯಕ್ರಮದಲ್ಲಿ ಭಜನೆ ಹಾಗೂ ಸೌಹಾರ್ದ ಗೀತೆ ಹಾಡಲಾಯಿತು.



ಮಕ್ಕಳಿಂದ ವೇಶ ಭೂಷಣ ಪ್ರದರ್ಶನದಲ್ಲಿ ಮಕ್ಕಳು ಭಗತ್ ಸಿಂಗ್. ಒನಕೆ ಒಬವ್ವ. ಅಂಬೇಡ್ಕರ್. ಕಿತ್ತೂರು ಚನ್ನಮ್ಮ, ವೇಶ ಧರಿಸಿದ್ದರು. ಪ್ರೌಢಶಾಲಾ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು.

ಎಚ್. ಆರ್. ನವೀನ್‌ಕುಮಾರ್

ಹುತಾತ್ಮ ದಿನದಂದು ಗಾಂಧೀ ಪುತ್ಥಳಿಗೆ ಅಗೌರವ ತೋರಿದ ನಗರಾಡಳಿತದ ನಡೆ ಖಂಡನೀಯ: ಬಸವರಾಜ ಪೂಜಾರ

ಹಾವೇರಿ: ನಗರದಲ್ಲಿರುವ ಮಹಾತ್ಮ ಗಾಂಧೀಜಿಯವರ ಪುತ್ಥಳಿ ಹಾಗೂ ಜಾಗವನ್ನು ಸ್ವಚ್ಚಗೊಳಿಸಿ, ಮಾಲಾರ್ಪಣೆ ಮಾಡಿ ಗೌರವ ಸ್ಮರಣೆ ಮಾಡಿ ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ ಮಾತನಾಡಿದರು.

ಜನವರಿ 30 ಗಾಂಧಿಜಿಯವರನ್ನು ಗುಂಡಿಕ್ಕಿ ಹತ್ಯೆಗೈದ ದಿನ. ಇಡೀ ದೇಶವೇ ದುಃಖದ ಕಡಲಲ್ಲಿ ಮುಳಗಿದ ಆ ದಿನವನ್ನು ಹುತಾತ್ಮ ದಿನವಾಗಿ ಆಚರಿಸಲ್ಪಡುತ್ತಿದೆ. ಇಂತಹ ಮಹಾನ್ ವ್ಯಕ್ತಿತ್ವ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರನ್ನು ಪ್ರತಿಯೊಬ್ಬರೂ ಸ್ಮರಿಸಬೇಕಾದ ಈ ದಿನದಂದು ಹಾವೇರಿ ನಗರದ ಹೃದಯ ಭಾಗದಲ್ಲಿರುವ ಮಹಾತ್ಮ ಗಾಂಧೀಜಿಯವರ ಪುತ್ಥಳಿಗೆ ಕನಿಷ್ಠ ಗೌರವವನ್ನೂ ಕೂಡ ಆಡಳಿತದಲ್ಲಿರುವವರು ತೋರದಿರುವುದು ಸಹಿಸಲು ಅಸಾಧ್ಯವಾದುದು.

ಆಡಳಿತ ನಡೆಸುತ್ತಿರುವ ನಗರಾಡಳಿತ ಹಾಗೂ ಜಿಲ್ಲಾಡಳಿತ ಈ ವೈಫಲ್ಯದ ನೇರ ಹೊಣೆಯನ್ನು ಹೊರಬೇಕಿದೆ ಎಂದು ಆಗ್ರಹಿಸಿದರು.

ಲೈಂಗಿಕ ಅಲ್ಪಸಂಖ್ಯಾತರ ಸಂಘಟನೆ ರಾಜ್ಯ ಕಾರ್ಯದರ್ಶಿ ಅಕ್ಷತಾ ಕೆ.ಸಿ ಮಾತನಾಡಿ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಹುತಾತ್ಮ ದಿನವನ್ನು ಅರ್ಥಪೂರ್ಣವಾಗಿ ಆಚರಿಸಿ, ಇಂದಿನ ವಿದ್ಯಾರ್ಥಿ–ಯುವಜನರಿಗೆ ಗಾಂಧೀಜಿಯವರ ಕುರಿತು ಅರಿವು ಮೂಡಿಸಬೇಕಾದ ಆಡಲಕಿತ ವರ್ಗವು ತನ್ನ ಆಡಳಿತ ವ್ಯಾಪ್ತಿಯಲ್ಲಿರುವ ಗಾಂಧೀಜಿ ಪುತ್ಥಳಿ ಹಾಗೂ ಜಾಗೆಯನ್ನು ಸ್ವಚ್ಛಗೊಳಿಸದೆ ಅಗೌರವ ತೋರಿರುವುದು ಉದ್ಧಟತನವೆಂದರು.

ಎಸ್‌ಎಫ್‌ಐ ಜಿಲ್ಲಾ ಸಹಕಾರ್ಯದರ್ಶಿ ಬಸವರಾಜ ಭೋವಿ ಮಾತನಾಡಿ, ಸಾರ್ವಜನಿಕ ಸ್ಥಳದಲ್ಲಿರುವ ಮಹನೀಯರ ಸ್ಮಾರಕಗಳ ರಕ್ಷಣೆ, ಗೌರವ ವನ್ನು ಸಲ್ಲಿಸಬೇಕಾದದ್ದು ಆಡಳಿತ ವರ್ಗದ ಜವಾಬ್ದಾರಿ. ಹಾಗೆಯೇ ಜನರಿಂದ ಆಯ್ಕೆಯಾದ ಜನಪ್ರತಿನಿಧಿಗಳು, ವಿರೋಧ ಪಕ್ಷವಾಗಿರುವವರು ಈ ಜವಾಬ್ದಾರಿಯಿಂದ ನುಣುಚಿಕೊಂಡು ಸಣ್ಣತನ ತೋರುವುದು ಸರಿಯಲ್ಲ ಎಂದರು.

ಸಂವಿಧಾನ ಸಂರಕ್ಷಣಾ ಸಮಿತಿ ಸದಸ್ಯರಿಂದ ಮೈದಾನ ಸ್ವಚ್ಛತೆ

ಹಾವೇರಿ: ಸಂವಿಧಾನ ವಿರೋಧಿ ಪೌರತ್ವ ತಿದ್ದುಪಡಿ ಕಾಯಿದೆ ವಿರೋಧಿಸಿ 29 ಜನವರಿ 2020 ಬುಧವಾರ ರಂದು ಸಂವಿಧಾನ ಸಂರಕ್ಷಣಾ ಸಮಿತಿ ವತಿಯಿಂದ ಬೃಹತ್ ಬಹಿರಂಗ ಪ್ರತಿಭಟನಾ ಸಮಾವೇಶ ಕಾರ್ಯಕ್ರಮವನ್ನು ಹಾವೇರಿಯ ಮುನಿಸಿಪಲ್ ಮೈದಾನದಲ್ಲಿ ಆಯೋಜಿಸಲಾಗಿತ್ತು. ಸಮಾವೇಶಕ್ಕೆ ಪಾಲ್ಗೊಂಡ ಜನರಿಗೆ ಹಣ್ಣು, ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿತ್ತು. ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಮೈದಾನದಲ್ಲಿ ಬಿದ್ದ ಕಸ, ಕಡ್ಡಿಯನ್ನು ಸಂವಿಧಾನ ಸಂರಕ್ಷಣಾ ಸಮಿತಿಯ ಸದಸ್ಯರು ಇಂದು ಸ್ವಚ್ಛಗೊಳಿಸಿದರು.

ಈ ಸಂದರ್ಭದಲ್ಲಿ ಬಸವರಾಜ ಪೂಜಾರ, ಅಕ್ಷತಾ ಕೆ ಸಿ, ಬಸವರಾಜ ಭೋವಿ, ಶೊಯೆಬ್ ಬಡಿಗೇರ್, ರಫೀಕ್ ಹತ್ತಿಕಾಳ್, ಮೆಹಬೂಬ್ ಅಲಿ ದೇವಿಹೊಸುರ, ಎಮ್ ಎನ್ ನಾಯಕ್, ನಾಗರಾಜ್ ಎಚ್ ಎಸ್, ಹಜರತ ಅಲಿ, ಮೆಹಬೂಬ್ ವಾಲಿಕಾರ್, ಹುಸೇನ್ ಸಾಬ್, ಸಾಬ್, ಮಹಮ್ಮದ್, ಗರೀಬ್ ಕಳ್ಳಿಹಾಳ ಸೇರಿದಂತೆ ಅನೇಕರು ಸ್ವಚ್ಛತಾ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

ಸಿಐಟಿಯು 16ನೇ ಸಮ್ಮೇಳನ 23, 27 –2020 ಚೆನ್ನೈ

ಅಧ್ಯಕ್ಷೀಯ ಭಾಷಣ – ಒಂದು ಭಾಗ

ಮೋದಿ ನೇತೃತ್ವದ ಬಿಜೆಪಿ ಮರಳಿ ಅಧಿಕಾರಕ್ಕೆ

ಕೆ. ಹೇಮಲತಾ
ಅಧ್ಯಕ್ಷರು

ವಿಶ್ವದಾದ್ಯಂತ ಬಲ ಪಂಥೀಯ ರಾಷ್ಟ್ರಗಳು ಹೊಂದಿರುವ ಧೋರಣೆಗೂ 2019 ರ ಲೋಕಸಭಾ ಚುನಾವಣೆಯಲ್ಲಿ ಮರಳಿ ಅಧಿಕಾರಕ್ಕೆ ಬಂದ ಮೋದಿ ನೇತೃತ್ವದ ಸರ್ಕಾರದ ದೋರಣೆಗೂ ವ್ಯತ್ಯಾಸಗಳೇನಿಲ್ಲ.

ಹೆಚ್ಚಾದ ತನ್ನ ವೋಟುಗಳು ಮತ್ತು ಸೀಟುಗಳ ಮೂಲಕ ಬಿಜೆಪಿ ಸರ್ಕಾರವು ನವ ಉದಾರವಾದ ನೀತಿಗಳ ವೇಗ ಹೆಚ್ಚಿಸುತ್ತಿದೆ, ಜೊತೆಯಲ್ಲಿಯೇ ತನ್ನ 'ಹಿಂದುತ್ವ' ಅಜೆಂಡಾವನ್ನು ಇನ್ನಷ್ಟು ಜೋರಾಗಿ ಜಾರಿ ಮಾಡುತ್ತಿದೆ. ಕಾರ್ಮಿಕ ಕಾನೂನು ತಿದ್ದುಪಡಿಗಳಲ್ಲಿ ಖಾಸಗೀಕರಣ ಮತ್ತು ಕಾರ್ಪೊರೇಟ್ ಗಳಿಗೆ ಲ್ಯಾಂಡ್ ಬ್ಯಾಂಕ್ ಸ್ಥಾಪಿಸಿ ಒಪ್ಪಿಸುವುದು ಮುಂತಾದ ಏರಿ ಛಚಿಟಿರ ಸುಧಾರಣಾ ಕ್ರಮಗಳನ್ನು ತಕ್ಷಣವೇ ಗೋಷಿಸಿದೆ. ಜಾರಿ ಮಾಡಲು ಮುಂದಾಗಿದೆ.

ಸಂವಿಧಾನ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಧಾಳಿ

ಬಿಜೆಪಿ ಸರ್ಕಾರವು ಯುಎಪಿಎ ಕಾಯಿದೆಯನ್ನು ತಿದ್ದುಪಡಿಗೊಳಿಸಿ ಅದನ್ನು ಇನ್ನಷ್ಟು ಭೀಕರಗೊಳಿಸಿದೆ. ಆರ್‌ಟಿಐ ಕಾಯಿದೆಗೆ ತಿದ್ದುಪಡಿ ತಂದು ಅದನ್ನು ದುರ್ಬಲಗಿಳಿಸಿದೆ.

ಸಂವಿಧಾನ ದ್ರೋಹ ಬಗೆದು ಇದು ಜಮ್ಮು ಮತ್ತು ಕಾಶ್ಮೀರಕ್ಕಿದ್ದ ವಿಧಿ 370 ಅನ್ನು ಹಿಂಪಡೆದಿದೆ. ರಾಜ್ಯ ಚುನಾಯಿತ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಅದು ರಾಜ್ಯವನ್ನು ಎರಡು ಯೂನಿಯನ್ ಟೆರಿಟೆರಿಗಳನ್ನಾಗಿ ವಿಭಾಜಿಸಿದೆ. ಎಲ್ಲಾ ರಾಜ್ಯ ನಾಯಕರುಗಳನ್ನು ಗೃಹ ಬಂಧನದಲ್ಲಿರಿಸಿದೆ. ಜನರನ್ನು ಹೊರ ಪ್ರಪಂಚದಿಂದ ಅಣಾಣ ಠಜಿಜಿ ಮಾಡಿದೆ. ಸಾವಿರಾರು ಸಂಖ್ಯೆಯ ಮಿಲಿಟರಿ ಮತ್ತು ಅರೆ ಮಿಲಿಟರಿ ಪಡೆಯನ್ನು ಹಾಕಿ ಇಡೀ ರಾಜ್ಯವನ್ನು ಆವರಿಸಿದೆ. ನಮ್ಮ ದೇಶದಲ್ಲಿ ಇದು ಕೇಳರಿಯದ ಘಟನೆ.

ಆರ್‌ಎಸ್‌ಎಸ್ ಮತ್ತು ಹಿಂದುತ್ವ ಸಂಘಟನೆಗಳು ಮೊದಲಿನಿಂದಲೂ ಧರ್ಮದ ಆಧಾರದಲ್ಲಿ ಜಮ್ಮು & ಕಾಶ್ಮೀರ ವನ್ನು ಮೂರು ಭಾಗಗಳಾಗಿ ಮಾಡಬೇಕು ಎಂದು ಬಯಸುತ್ತಿದ್ದವು. ಒಂದೆಡೆ ತನ್ನ "ಅಖಂಡ ಭಾರತ" ಪರಿಕಲ್ಪನೆಯ ಸರ್ಕಾರವಿದ್ದರೆ ಇನ್ನೊಂದೆಡೆ ಅವು ಮುಸ್ಲಿಂ ರನ್ನು ಪರಕೀಯಗೊಳಿಸಲು ಕಾತುರವಾಗಿದ್ದು. ಹಿಂದಿನ ಬಿಜೆಪಿ ಸರ್ಕಾರವು ಎಲ್ಲ ವಿಧದ ಪ್ರತಿಭಟನೆಗಳನ್ನು ಹತ್ತಿಕ್ಕುತ್ತಿತ್ತು, ರಾಜಕೀಯ ಮಾತುಕತೆ ನಿಲ್ಲಿಸಿತ್ತು. ಇದು ಅಲ್ಲಿನ ಜನರ ಪರಕೀಯತೆಯ ಭಾವನೆಯನ್ನು ಇನ್ನಷ್ಟು ಮೊನಚುಗೊಳಿಸಿತು, ಸ್ಥಳೀಯ ಯುವ ಪೀಳಿಗೆ ಮಿಲಿಟೆಂಟ್ ಗಳನ್ನು ಸೇರುವ ಪರಿಸ್ಥಿತಿ ನೋಡುತ್ತಿದ್ದೇವೆ.

ಪೌರತ್ವ ತಿದ್ದುಪಡಿ ಕಾಯಿದೆ (ಸಿಎಎ)

ಈ ಮಸೂದೆ ಲೋಕಸಭೆಯಲ್ಲಿ ಮಂಜೂರಾಗಿ ರಾಷ್ಟ್ರಪತಿಗಳ ಅಂಕಿತವನ್ನು ಪಡೆದಿದೇ ನಮ್ಮ ಸಂವಿಧಾನದ ಧರ್ಮನಿರಪೇಕ್ಷ ಪರಿ–

ಇದು ಹಿಂದೂ, ಸಿಖ್ಖರು, ಬುದ್ಧಿಸ್ಟ್‌ಗಳು, ಜೈನರು, ಪಾರ್ಸಿ ಮತ್ತು ಕ್ರಿಶ್ಚಿಯನ್‌ಗಳಲ್ಲಿ (ಆಫ್ಘಾನಿಸ್ತಾನ, ಬಾಂಗ್ಲಾದೇಶ ಮತ್ತು ಪಾಕಿಸ್ತಾನ ದಿಂದ ಬಂದ) ಹಾಗೂ ಮುಸ್ಲಿಂ ರನ್ನು ಪ್ರತ್ಯೇಕಿಸುತ್ತಿದೆ. ಮಿಕ್ಕವರಿಗೆ ಪೌರತ್ವದ ಅರ್ಹತೆ ಇದ್ದರೆ ಮುಸ್ಲಿಂ ರನ್ನು ಅನಧಿಕೃತ ವಲಸಿಗರು ಎಂದು ಪರಿಗಣಿಸಲಾಗುತ್ತಿದೆ.

ಅಸ್ಸಾಂ ನಲ್ಲಿ ಎನ್.ಆರ್.ಸಿ. ಪ್ರಕ್ರಿಯೆಯಲ್ಲಿ ಬಹುತೇಕ ಹಿಂದುಗಳನ್ನು ಒಳಗೊಂಡಂತೆ 19 ಲಕ್ಷ ಜನ ಎನ್.ಆರ್.ಸಿ. ಯಿಂದ ಹೊರ ಉಳಿದಿದ್ದು ಅಲ್ಲಿ ಅತೀವ ಪ್ರಕ್ಷೋಭ ಉಂಟಾಗಿದೆ. ಕೊನೆಗೆ ರಾಜ್ಯ ಬಿಜೆಪಿ ಸರ್ಕಾರ ಮತ್ತು ಕೇಂದ್ರ ಸರ್ಕಾರ ಈ ಪಟ್ಟಿಯನ್ನು ತಿರಸ್ಕರಿಸಬೇಕಾಯಿತು. ಪಶ್ಚಿಮ ಬಂಗಾಳದಲ್ಲಿ ಚುನಾವಣಾ ರ‍್ಯಾಲಿಯೊಂದರಲ್ಲಿ ಗೃಹ ಸಚಿವ ಅಮಿತ್ ಶಾ ಹೇಳಿದ್ದು ಹೇಗೆ "ಮೊದಲು ನಾವು ಸಿಎಎ ತಂದು ನೆರೆ ರಾಷ್ಟ್ರಗಳಿಂದ ಬಂದಿರುವ ಹಿಂದು, ಬುದಿಸ್ಟ್, ಸಿಖ್ಖರು, ಜೈನರು ಮತ್ತು ಕ್ರಿಶ್ಚಿಯನ್ ವಲಸಿಗರಿಗೆ ಪೌರತ್ವ ನೀಡುತ್ತೇವೆ. ನಂತರ ಎನ್.ಆರ್.ಸಿ. ಜಾರಿ ಮಾಡಿ ನಮ್ಮ ದೇಶದಿಂದ ನುಸುಳುಕೋರರನ್ನು ಹೊರ ದಬ್ಬುತ್ತೇವೆ" ಅಸ್ಸಾಂ ನಲ್ಲಿಯೂ ಉಳಿದ ರಾಜ್ಯಗಳ ಜೊತೆ ಎನ್.ಆರ್.ಸಿ. ಯನ್ನು ಮತ್ತೆ ಮಾಡುತ್ತೇವೆ ಎಂದೂ ಸಹ ಅವರು ಹೇಳಿದರು. ಇದು ಆರ್‌ಎಸ್‌ಎಸ್ ನ "ಹಿಂದೂ ರಾಷ್ಟ್ರ ಸ್ಥಾಪನೆ ಮತ್ತು ಮುಸ್ಲಿಂರನ್ನು ಎರಡನೇ ದರ್ಜೆ ನಾಗರಿಕರನ್ನಾಗಿ ಮಾಡುವ ಪರಿಕಲ್ಪನೆಯ ಸಾಕಾರದತ್ತ ಇಟ್ಟ ಹೆಜ್ಜೆ ಎಂಬುದು ಸ್ಪಷ್ಟ (ಸಾವರ್ಕರ್ ರವರ ಎರಡು ರಾಷ್ಟ್ರಗಳ ಥಿಯರಿಗಳ ಜಾರಿ)

ದೇಶದಾದ್ಯಂತ ಎನ್.ಆರ್.ಸಿ. ಜಾರಿ ಪ್ರಕ್ರಿಯೆ ಶುರುವಾಗಿದೆ. ಮೊದಲ ಹಂತವಾಗಿ ಪೌರತ್ವ ವಿಧಿ ನಿಯಮದಡಿ ರಾಷ್ಟ್ರೀಯ ಜನಸಂಖ್ಯೆ ರಿಜಿಸ್ಟರ್ (ಎನ್‌ಪಿಆರ್) ಸ್ಥಾಪಿಸುವ ಪ್ರಯತ್ನವಾಗುತ್ತಿದೆ. ಆಗಸ್ಟ್ ನಲ್ಲಿ ಎನ್‌ಪಿಆರ್ ತಯಾರಿಸುವ ಠಿಟಚಿಣ ಯೋಜನೆಗಳು ನಡೆದು ರಾಜ್ಯಗಳ ಸರ್ಕಾರಿ ನೌಕರರನ್ನು ತರಬೇತಿಗೊಳಿಸಲಾಗುತ್ತದೆ ಎಂದು ವರದಿಗಳು ತಿಳಿಸುತ್ತಿವೆ. ಈ ದಾಖಲೆಗಳಿಂದ ಅನುಮಾನಾಸ್ಪದ ನಾಗರಿಕರನ್ನು ಗುರುತಿಸಲಾಗುತ್ತದೆ. ಈ ವ್ಯಕ್ತಿಗಳು ಸರ್ಕಾರವಲ್ಲ ಅನಧಿಕೃತ ವಲಸಿಗರಲ್ಲ ಎಂದು ಸಾಭೀತು ಪಡಿಸಬೇಕು. ಬಡವರಿಗೆ ಮತ್ತು ಅಶಿಕ್ಷಕರಿಗೆ ದಾಖಲೆಗಳನ್ನು ಒದಗಿಸಿಕೊಂಡು ಇದನ್ನು ಸಾಭೀತು ಮಾಡುವುದು ಬಹಳ ಕಷ್ಟ.

ಸಹಜವಾಗಿಯೇ ಇದು ಮುಸ್ಲಿಂ ರಲ್ಲಿ ತಲ್ಲಣ ಉಂಟು ಮಾಡಿದೆ. ಆದರೆ ಕೇವಲ ಮುಸ್ಲಿಂ ರಲ್ಲಿ ಇಡೀ ದೇಶ ಸಿಎಎ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದೆ. ಸಂವಿಧಾನದ ಮೌಲ್ಯಗಳನ್ನು ಕಾಪಾಡಲು ಬಯಸುವ ಎಲ್ಲ ಜನ ವಿಭಾಗಗಳು ಪ್ರತಿಭಟನೆ ನಡೆಸುತ್ತಿವೆ.

ದೇಶದಾದ್ಯಂತ ವಿ.ವಿಗಳ ವಿದ್ಯಾರ್ಥಿಗಳು ಬಲವಾಗಿ ಸಿಎಎ ಯನ್ನು ವಿರೋಧಿಸುತ್ತಿದ್ದಾರೆ. ಅಮೆರಿಕಾ, ಬ್ರಿಟನ್, ಫ್ರಾನ್ಸ್, ಜಪಾನ್, ಜರ್ಮನಿ, ಆಸ್ಟ್ರೇಲಿಯಾ ಮತ್ತಿತರ ರಾಷ್ಟ್ರಗಳ ಪ್ರತಿಷ್ಠಿತ ವಿ.ವಿಗಳ ವಿದ್ಯಾರ್ಥಿಗಳು ಸಹ ಬೆಂಬಲ ವ್ಯಕ್ತಪಡಿಸಿದ್ದಾರೆ. ಭಾರತದಲ್ಲಿರುವ ವಿದೇಶಿ ವಿದ್ಯಾರ್ಥಿಗಳು ಪ್ರತಿಭಟಿಸುತ್ತಿದ್ದಾರೆ. ಮತ್ತು ಅವರನ್ನು ಅವರ ದೇಶಗಳಿಗೆ ವಾಪಸ್ಸು ಕಳಿಸಲಾಗಿದೆ. ರಾಜ್ಯ ಬಿಜೆಪಿ ಸರ್ಕಾರಗಳು ಮತ್ತು ಕೆಲವು ಸರ್ಕಾರ ಪ್ರತಿಭಟನಾಕಾರರ ವಿರುದ್ಧ ತೀವ್ರ "ಬಲ ಪ್ರಯೋಗ ನಡೆಸಿದೆ. ಅರೆಸ್ಟ್ ಗಳಾಗಿದೆ, ಪೋಲಿಸರು ವಿ.ವಿ ಗಳೊಳಗೆ ಅನಧಿಕೃತವಾಗಿ ನುಗ್ಗಿ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿದ್ದಾರೆ. ಉತ್ತರ ಪ್ರದೇಶ ದಲ್ಲಿ 16 ಜನ ಒಳಗೊಂಡಂತೆ ಒಟ್ಟು ಬಿಜೆಪಿ ಇರುವ ರಾಜ್ಯಗಳಲ್ಲಿ 25 ಜನ ಪೋಲಿಸ್ ಫೈರಿಂಗನಲ್ಲಿ ಜೀವ ಕಳೆದುಕೊಂಡಿದ್ದಾರೆ.

10 ಕ್ಕೂ ಮೀರಿದ ಮುಖ್ಯ ಮಂತ್ರಿಗಳು ತಮ್ಮ ರಾಜ್ಯಗಳಲ್ಲಿ ಇದನ್ನು ಜಾರಿ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಕೇರಳ ವಿಧಾನ ಸಭೆ ಮುಖ್ಯ ಮಂತ್ರಿಗಳ ಪ್ರಯತ್ನದಿಂದಾಗಿ ಸಿಎಎ ಯನ್ನು ಹಿಂಪಡೆಯುವ ನಿರ್ಣಯವನ್ನು ಅಂಗೀಕರಿಸಿದೆ ಬಿಹಾರ ಮತ್ತು ಓಡಿಶಾ ಮುಖ್ಯ ಮಂತ್ರಿ ತನ್ನ ಪಕ್ಷ ಸಂಸತ್ ನಲ್ಲಿ ಈ ಮಸೂದೆಗೆ ಬೆಂಬಲ ನೀಡಿದ್ದರೂ ಸಹ ತಮ್ಮ ರಾಜ್ಯಗಳಲ್ಲಿ ಇದನ್ನು ಜಾರಿ ಮಾಡಲಾಗದು ಎಂದಿದ್ದಾರೆ.



ಅಧ್ಯಕ್ಷರು : ಕೆ. ಹೇಮಲತಾ



ಪ್ರಧಾನ ಕಾರ್ಯದರ್ಶಿ : : ತಪನ್ ಸೇನ್

ಈ ಪ್ರತಿಭಟನೆಗಳ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ಈ ಪ್ರತಿಭಟನೆಗಳನ್ನು "ಪಾಕಿಸ್ತಾನಿ ಪರ" ಇರುವವರನ್ನು "ಅರ್ಬನ್ ನಕ್ಸಲರು" ಇತ್ಯಾದಿಗಳು ನಡೆಸುತ್ತಿದ್ದಾರೆ ಎಂದು ಅಪಪ್ರಚಾರ ಮಾಡುತ್ತೇವೆ. ಎಂದು ಅಮಿತ್ ಶಾ ಮುಂತಾದ ನಾಯಕರು ಹೇಳಿದ್ದರೂ ಈಗ ಅವರು ಯಾವುದೇ ಧರ್ಮದವರನ್ನು ಹೊರಗಿಡಲು ನಾವು ಪ್ರಯತ್ನಿಸುತ್ತಿಲ್ಲ ಎಂದು ಜನರನ್ನು ನಂಬಿಸಲು ಮುಂದಾಗುತ್ತಿದ್ದಾರೆ.

ಅಯೋಧ್ಯೆ

ಅಯೋಧ್ಯೆ ಯಲ್ಲಿ ರಾಮ ಮಂದಿರ ನಿರ್ಮಾಣ ಮಾಡುವ ವಿಷಯ ಇಟ್ಟುಕೊಂಡು ಜನರ ಭಾವನೆಗಳನ್ನು ಕೆರಳಿದ, ಧೃವೀಕರಣ ಮಾಡಿ, ದೈನಂದಿನ ಸಮಸ್ಯೆಗಳಿಂದ ಜನರ ಗಮನವನ್ನು ಬೇರಡೆ ಬಿಜೆಪಿ ಸೆಳೆದಿತ್ತು. ಬಾಬಾರಿ ಮಸೀದಿಯ ಧ್ವಂಸದ 17 ವರ್ಷಗಳ ನಂತರ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಇದು ಹೇಗಿದೆಯೆಂದರೆ ಕಳ್ಳನೊಬ್ಬ ಇದು ತನ್ನ ಆಸ್ತಿ ಎಂದದಕ್ಕೆ ಅವನಿಗೆ ಮನೆಯ ಕೀ ಕೊಟ್ಟಂತಾಗಿದೆ.

ಹಲವು ಪ್ರಶಂಸಾರ್ಹ ಹೇಳಿಕೆಗಳನ್ನು ನೀಡಿದ್ದ ಉಚ್ಚ ನ್ಯಾಯಾಲಯವು ಈ ನಿಲುವುಗಳಿಗೆ ವಿರುದ್ಧವಾದ ತೀರ್ಪು ನೀಡಿದೆ ಸಾಕ್ಷ್ಯ ಆಧಾರದ ಮೇಲೆ ತೀರ್ಪು ನೀಡದೆ ಬಹು ಸಂಖ್ಯಾತ ಕೋಮು ನಂಬಿಕೆ ಮತ್ತು ವಿಶ್ವಾಸದ ಆಧಾರದ ಮೇಲೆ ನೀಡಲಾಗಿದೆ. ತೀರ್ಪಿನಲ್ಲಿ ಹಿಂದೂ ಪ್ರತಿಮೆಗಳನ್ನು ತಂದಿಟ್ಟವರ ಮತ್ತು ಸಾರ್ವಜನಿಕರ ಪೂಜಾ ಸ್ಥಳವನ್ನು ಕೆಡುವಿದವರ ವಿರುದ್ಧ ಉಲ್ಲೇಖಿಸಿರುವವರಿಗೆಯೇ ಜಾಗವನ್ನು ಒಪ್ಪಿಸಲಾಗಿದೆ. ಒಂದು ಬಲವಾದ ಪಾರ್ಟಿಯನ್ನು ಓಲೈಸುವ ಮೂಲಕ ಶಾಂತಿ ಸ್ಥಾಪನೆ ಕೋರ್ಟ್ ನ ಆದ್ಯತೆಯಾಯಿತೇ ವಿನಃ ಸಾಕ್ಷಿ ಆಧಾರಿತ ತೀರ್ಪು ನೀಡುವುದಲ್ಲ.

ಎಲ್ಲಿಯವರೆಗೆ ಶಾಂತಿ ಸಾರ್ಥಯವಾಗುವುದಾದರೆ – ಸ್ಥಾಪಿಸಬಹುದು ಎಂಬುದು ಒಂದು ಮುಕ್ತ ಪ್ರಶ್ನೆಯಾಗಿದೆ. ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ "ಸಧ್ಯ ಕ್ಕೆ ಕಾಶಿ ಮತ್ತು ಮಥುರಾ ನಮ್ಮ ಅಜೆಂಡಾದಲ್ಲಿತ್ತು" ಎಂದು ಹೇಳಿದ್ದಾರೆ.

ಡಬ್ಲ್ಯೂಹೆಚ್‌ಪಿ ಯ ಮುಖಂಡರು "ಈ ತೀರ್ಪು ಕಥೆಯ ಕೊನೆಯಲ್ಲ ಪ್ರಾರಂಭ" ಎಂದು ಪತ್ರಿಕಾ ಗೋಷ್ಠಿಯಲ್ಲಿ ಹೇಳಿದ್ದಾರೆ.

ಐಕ್ಯತೆ ಬಲಪಡಿಸಲು ದುಡಿಯುವ ವರ್ಗ ಮುಂದಾಗಬೇಕು

ದುಡಿಯುವ ವರ್ಗದ ಐಕ್ಯತೆ ಮುರಿಯಲು ಮತ್ತು ತನ್ನ ಕಾರ್ಮಿಕ ವಿರೋಧಿ ಜನ ವಿರೋಧಿ ನೀತಿಗಳ ವಿರುದ್ಧದ ಹೋರಾಟವನ್ನು ದುರ್ಬಲಗೊಳಿಸಲು ಮೋದಿ ನೇತೃತ್ವದ ಬಿಜೆಪಿ ಸರ್ಕಾರ ರಚಿಸಿರುವ ಅಪಾಯಕಾರಿ ರೂಪರೇಷೆಗಳನ್ನು ದುಡಿಯುವ ವರ್ಗ ಅರಿಯಬೇಕು. ಆರ್ಥಿಕ ನೀತಿಗಳು ಬೃಹತ್ ಕಾರ್ಪೊರೇಟ್‌ಗಳು ಪರವಾಗಿವೆ. ಅವರ ಧರ್ಮ ಬೆಳಕಿಗೆ ಬರುವುದಿಲ್ಲ. ಕಾರ್ಮಿಕ ಕಾನೂನು ತಿದ್ದುಪಡಿಗಳು ಎಲ್ಲಾ ಕಾರ್ಮಿಕರ ಮೇಲೆ ಸಮನಾಗಿ ಹೊರೆ ಹೇರುತ್ತದೆ. ಅದು ಕಾರ್ಮಿಕರ ಧರ್ಮ ಯಾವುದೇ ಇರಲಿ, ಅವರ ಮೂಲಾತಿತ ಕಾರ್ಮಿಕ ಸಂಘಟನಾ ಹಕ್ಕುಗಳನ್ನು ಕಸಿಯುತ್ತದೆ. ಅದು ಕೇವಲ ಹಿಂದು ಕಾರ್ಮಿಕರ ಪರವಾಗಿರುವುದಾಗಲಿ ಮತ್ತು ಮುಸ್ಲಿಂ ಕಾರ್ಮಿಕರ ಹಕ್ಕುಗಳನ್ನು ಮಾತ್ರ ಕಸಿಯುವುದಾಗಲಿ ಮಾಡುವುದಿಲ್ಲ. ದುಡಿಯುವ ವರ್ಗವು ಕಾರ್ಮಿಕರ ಜಾತಿ, ಧರ್ಮ, ಪ್ರದೇಶ, ಲಿಂಗ, ಭಾಷೆ, ಯಾವುದೇ ಇದ್ದರೂ ಅದೆಲ್ಲವನ್ನೂ ಬದಿಗೊತ್ತಿ ನಡೆಸಿದ ಐಕ್ಯ ಹೋರಾಟಗಳ ಮೂಲಕ ತನ್ನ ಹಕ್ಕುಗಳನ್ನು ಗಳಿಸಿಕೊಂಡಿದೆ. ತ್ಯಾಗದಿಂದ ಬಂದಿರುವಂತಹುದು ಯಾವೂದೂ ಸಹ ದಾನವಾಗಿ ಬಂದಿಲ್ಲ. ಈಗ ಬಂದಿರುವ ದಾಳಿಯನ್ನು ಒಂದಾಗಿಯೇ ಎದುರಿಸಬೇಕು.

ಬೆಲೆ ಏರಿಕೆ, ನಿರುದ್ಯೋಗ, ಬಡತನ ಇತ್ಯಾದಿಗಳಿಂದ ಕಾರ್ಮಿಕರಿಗೆ ಪರಿಹಾರ ನೀಡಲು ಸರ್ಕಾರದ ಬಳಿ ಏನೂ ಇಲ್ಲದಿರುವುದರಿಂದ ಅದು ಈ ಜ್ವಲಂತ ಸಮಸ್ಯೆಗಳಿಂದ ಅವರ ಗಮನವನ್ನೂ ಬೇರೆಡೆ ಸೆಳೆಯುತ್ತದೆ. ಸಿಎಎ ಈ ತರಹದ ಒಂದು ಕ್ರಮ. ಜನವರಿ 8, 2020 ರ ಮುಷ್ಕರವನ್ನು ದುರ್ಬಲಗೊಳಿಸಲು ಈ ರೀತಿಕ್ರಮ ಆದರೆ ಐತಿಹಾಸಿಕ ಮುಷ್ಕರ, ಭಾರತ ಬಂದ್ ಆಗಿ ಪರಿವರ್ತನೆಗೊಂಡಿರುವ ಮೂಲಕ ದುಡಿಯುವ ವರ್ಗ ಮತ್ತು ಜನತೆ ಈ ರೀತಿಯ ವಿಭಾಜಕ ಕ್ರಮಗಳಿಂದ ತಾವು ಮೂರ್ಖರಾಗುವುದಿಲ್ಲ ಎಂಬ ಸಂದೇಶ ಸಾರಿದ್ದಾರೆ ಈ ಐಕ್ಯತೆ, ಸಖ್ಯತೆ ಇನ್ನಷ್ಟು ಬಲವಾಗಬೇಕು, ಸಿಐಟಿಯು ಈ ನಿಟ್ಟನಲ್ಲಿ ಇನ್ನಷ್ಟು ಮುತುವರ್ಜಿವಹಿಸಬೇಕು.

ಮಹಿಳೆಯರ ಮೇಲಿನ ಅಪರಾಧ ಕೃತ್ಯಗಳು:

ಮಹಿಳೆಯರು ಮತ್ತು ಮಕ್ಕಳ ಮೇಲಿನ ಹಿಂಸೆ ಬಹಳ ಹೆಚ್ಚಿದೆ. ಹೈದರಾಬಾದ್‌ನ ಪಶುವೈದ್ಯೆಯ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ದೇಶದಾದ್ಯಂತ ಆಕ್ರೋಶ ಹೆಚ್ಚಿಸಿತು. ಉನ್ನಾವೋ ಅತ್ಯಾಚಾರ ಸಂತಸ್ತೆಯನ್ನು ಆಕೆ ಸಾಕ್ಷಿ ಹೇಳಲು ಹೋಗುವಾಗ ಜೀವಂತ ಸುಡಲಾಯಿತು. ರಾಂಚಿಯ ಕಾಲೇಜು ವಿದ್ಯಾರ್ಥಿಯ ಮೇಲೆ ಸಾಮೂಹಿಕ ಅತ್ಯಾಚಾರವಾಯಿತು. ಆರು ವರ್ಷದ ಹುಡುಗಿಯನ್ನು ಅಪಹರಿಸಿ ಲೈಂಗಿಕ ಹಿಂಸೆ ನೀಡಿ ಆಕೆಯ ಶಾಲಾ ಸಮವಸ್ತ್ರದ ಬೆಲ್ಟ್ ನಿಂದ ಸಾಯಿಸಲಾಯಿತು. ಯುವ ಮಹಿಳೆಯರು, ಸಣ್ಣ ಮಕ್ಕಳು, ಹಸುಗೂಸು ಹೆಣ್ಣು ಮಗು, ಹಿರಿಯ ಮಹಿಳೆಯರೂ ಯಾರು ಸುರಕ್ಷಿತವಾಗಿಲ್ಲ. ಮನೆ, ಸಾರ್ವಜನಿಕ ಸ್ಥಳಗಳೂ ಕಛೇರಿಗಳು–ಯಾವುವೂ ಸುರಕ್ಷಿತವಾಗಿಲ್ಲ.

ಹೈದರಾಬಾದ್ ಕೇಸ್‌ನಲ್ಲಿ ನಾಲ್ಕು ಆಪಾದಿತ ಮೇಲೆ ಪೋಲಿಸರು ನಡೆಸಿದ ಎನ್ಕೌಂಟರ್ ಅನ್ನು ಬಹುತೇಕ ಜನ ಶ್ಲಾಘಿಸಿರುವುದು ಅಪಾಯಕಾರಿ ಸೂಚನೆ, ಈ ಕ್ಲಿಪ್ತ ನ್ಯಾಯಕ್ಕೆ ಬೆಂಬಲ ಸೂಚಿಸುತ್ತಿರುವುದು ಪ್ರಾಯಶ: ಸಂತಸ್ತ್ರೆಯರ ಕೇಸುಗಳು ವಿನಾಕಾರಣ ಕಾನೂನು ವಿಳಂಬದಿಂದ ಮತ್ತು ಶಿಕ್ಷೆಯ ಪ್ರಮಾಣ ಅತಿ ನ್ಯಾಯವಾಗಿರುವುದರಿಂದ ಬಂದಿರುವುದು.

2017 ರ ರಾಷ್ಟ್ರೀಯ ಕ್ರೈ ಒಬ್ಬರೋ ತನ್ನ ವರದಿಯಲ್ಲಿ ಸುಮಾರು 1.17 ಲಕ್ಷ ಕೇಸ್‌ಗಳು –ಅತ್ಯಾಚಾರಕ್ಕೆ ಸಂಬಂಧಪಟ್ಟವು– ಇತ್ಯರ್ಥವಾಗದೆ

ಪುಟ 12 ಕ್ಕೆ



ಕೆಲವು ಸೈದ್ಧಾಂತಿಕ ಪ್ರಶ್ನೆಗಳ ಪರಿಹಾರಕ್ಕಾಗಿ ಪ್ರಯತ್ನ 1928-1935

ವಸಾಹತುಶಾಹಿ ಆಳ್ವಿಕೆಗೆ ಒಳಗಾಗಿದ್ದ ದೇಶಗಳಲ್ಲಿ ರಾಷ್ಟ್ರೀಯ ವಿಮೋಚನಾ ಚಳುವಳಿಯಲ್ಲಿ ಬಂಡವಾಳಶಾಹಿಗಳ ಪಾತ್ರದ ಪ್ರಶ್ನೆಯನ್ನು ಕುರಿತಂತೆ ಕಮ್ಯುನಿಸ್ಟರ 'ಕಮ್ಯುನಿಸ್ಟ್ ಅಂತರ್‍ರಾಷ್ಟ್ರೀಯ'ದ ಆರನೇ ಮತ್ತು ಏಳನೇ ಮಹಾಧಿವೇಶನಗಳ ನಡುವೆ ಬಹಳಷ್ಟು ಚರ್ಚೆಗಳು ನಡೆದವು. ಇವುಗಳ ಅನುಷ್ಠಾನದಲ್ಲಿ ಭಾರತೀಯ ಕಮ್ಯುನಿಸ್ಟರಿಗೆ ಕೆಲವು ಗಂಭೀರವಾದ ಸಂಘಟನಾತ್ಮಕ ಹಾಗೂ ರಾಜಕೀಯ ಸಂದಿಗ್ಧತೆಗಳೂ ಎದುರಾದವು. 1930-32ರಲ್ಲಿ ಪಂಥೀಯವಾದಕ್ಕೂ ಎಡೆ ಮಾಡಿಕೊಟ್ಟಿತು. ಅದು ಪಕ್ಷದ ವರ್ಚಸ್ಸಿಗೆ ದೊಡ್ಡ ಹಾನಿ ಉಂಟುಮಾಡಿತು. ಆ ನಂತರದಲ್ಲಿ ಅಂತರ್‍ರಾಷ್ಟ್ರೀಯ ಸನ್ನಿವೇಶದಲ್ಲಿನ ಬದಲಾವಣೆ ಮತ್ತು ಅದನ್ನನುಸರಿಸಿ ಕಾಮಿಂಟರ್ನ್‌ನ ನೀತಿಗಳಲ್ಲಿ ಆದ ಬದಲಾವಣೆಗಳು ನಿಲುವುಗಳಲ್ಲಿನ ದೋಷಗಳನ್ನು ಸರಿಪಡಿಸುವ ದಿಕ್ಕಿನಲ್ಲಿ ಸಹಾಯಕವಾದವು.

ಕನ್ನಡಕ್ಕೆ: ಟಿ.ಸುರೇಂದ್ರ ರಾವ್

ಕಮ್ಯುನಿಸ್ಟ್ ಅಂತರ್‍ರಾಷ್ಟ್ರೀಯ(ಕಾಮಿಂಟರ್ನ್)ದ ಆರನೇ ಮಹಾಧಿವೇಶನ(1928)ವು ಭಾರತದ ಕಮ್ಯುನಿಸ್ಟ್ ಚಳುವಳಿಯ ಮೇಲೆ ಗಾಢ ಪರಿಣಾಮ ಬೀರಿತು. ಕಾಮಿಂಟರ್ನ್‌ನ ಎರಡನೇ ಮಹಾಧಿವೇಶನ(1920)ದಲ್ಲಿ ಲೆನಿನ್ ಅವರ ಮಾರ್ಗದರ್ಶನದಲ್ಲಿ ಅಂಗೀಕರಿಸಿದ್ದ ವಸಾಹತುಗಳ ಕುರಿತ ತಾತ್ವಿಕ ತಿಳುವಳಿಕೆಯನ್ನು ಈ ಆರನೇ ಮಹಾಧಿವೇಶನವು ಪರಿಷ್ಕರಿಸಿತು. ಐದನೇ ಮತ್ತು ಆರನೇ ಮಹಾಧಿವೇಶನದ ಮಧ್ಯಂತರದಲ್ಲಿ, ಹಲವಾರು ದೇಶಗಳ ಕಮ್ಯುನಿಸ್ಟ್ ಪಕ್ಷಗಳಿಂದ ಬಲ-ಸಮಯಸಾಧಕ ಗುಂಪುಗಳನ್ನು ಉಚ್ಛಾಟಿಸಲಾಯಿತು ಮತ್ತು ಕಾಮಿಂಟರ್ನ್‌ನಿಂದ ಕೂಡ. ಕಾಮಿಂಟರ್ನ್ ಟ್ರಾಟ್ಸ್ಕಿವಾದದ ವಿರುದ್ಧದ ಹೋರಾಟಕ್ಕೂ ವಿಶೇಷ ಮಹತ್ವ ನೀಡಬೇಕಾಗಿ ಬಂತು. ಅದಲ್ಲದೇ, ಚೈನಾದಲ್ಲಿನ ಘಟನೆಗಳು ಆರನೇ ಮಹಾಧಿವೇಶನದ "ವಸಾಹತುಶಾಹಿ ಕುರಿತ ಪ್ರತಿಪಾದನೆಗಳು" (ಕೊಲೊನಿಯಲ್ ತೀಸೀಸ್) ಮೇಲೆ ತೀವ್ರ ಪ್ರಭಾವ ಬೀರಿದವು. ಈ ಎಲ್ಲಾ ಬೆಳವಣಿಗೆಗಳು ಕಾಮಿಂಟರ್ನ್‌ನ ನಿಲುವುಗಳನ್ನು ರೂಪಿಸಿದವು.

ಕಮ್ಯುನಿಸ್ಟರು ಅಳವಡಿಸಬೇಕಾದ ತಂತ್ರಗಳ ಕುರಿತು, ಈ ಪ್ರತಿಪಾದನೆಗಳು ಕಮ್ಯುನಿಸ್ಟ್ ಪಕ್ಷಗಳಿಗೆ ನಿರ್ದೇಶನ ನೀಡಿ ಎಲ್ಲಾ ಪುಟ್ಟ ಬಂಡವಾಳಶಾಹಿ ಗುಂಪುಗಳೂ ಮತ್ತು ಪಕ್ಷಗಳಿಂದ ರಾಜಕೀಯವಾಗಿ ಹಾಗೂ ಸಂಘಟನಾತ್ಮಕವಾಗಿಯೂ ಪ್ರತ್ಯೇಕವಾಗಿರುವಂತೆ ಹೇಳಿದವು. "ಕ್ರಾಂತಿಕಾರಿ ಹೋರಾಟಗಳ ಅಗತ್ಯಗಳಿಗೆ ಅನುಸಾರವಾಗಿ, ಒಂದು ತಾತ್ಕಾಲಿಕ ಸಹಕಾರವನ್ನು ಒಪ್ಪಬಹುದು ಮತ್ತು ಕೆಲವು ಸಂದರ್ಭಗಳಲ್ಲಿ, ಒಂದು ಕಮ್ಯುನಿಸ್ಟ್ ಪಕ್ಷ ಮತ್ತು ರಾಷ್ಟ್ರೀಯ ಕ್ರಾಂತಿಕಾರಿ ಚಳುವಳಿಯ ನಡುವೆ, ಆ ಕ್ರಾಂತಿಕಾರಿ ಚಳುವಳಿಯು ಪ್ರಾಮಾಣಿಕವಾಗಿದ್ದರೆ ತಾತ್ಕಾಲಿಕ ಒಕ್ಕೂಟ ಕೂಡ ಒಪ್ಪಿತವಾದದ್ದು; ಆ ಕ್ರಾಂತಿಕಾರಿ ಚಳುವಳಿಯು ನಿಜವಾಗಿಯೂ ಆಳುವ ಶಕ್ತಿಗಳ ವಿರುದ್ಧ ಹೋರಾಡುತ್ತಿದ್ದು, ರೈತರು ಮತ್ತು ವ್ಯಾಪಕ ಶೋಷಿತ ಜನಸಮುದಾಯವನ್ನು ಕ್ರಾಂತಿಕಾರಿ ವಿಧಾನದಲ್ಲಿ ತರಬೇತುಗೊಳಿಸಿ ಸಂಘಟಿಸುವ ಕಮ್ಯುನಿಸ್ಟರ ಕೆಲಸ ಕಾರ್ಯಗಳಿಗೆ ಅವರ ಪ್ರತಿನಿಧಿಗಳು ಅಡ್ಡಗಾಲು ಹಾಕುವುದಿಲ್ಲವಾದರೆ ಅದನ್ನು ಒಪ್ಪಬಹುದು."

ಭಾರತಕ್ಕೆ ಸಂಬಂಧಪಟ್ಟಂತೆ ಇದರಲ್ಲಿನ ಒಂದು ಮುಖ್ಯ ಅಂಶವೆಂದರೆ ಕಾರ್ಮಿಕರ ಮತ್ತು ರೈತರ ಪಕ್ಷಗಳ ರಚನೆಗೆ ವಿರೋಧ. ಏಕೆಂದರೆ: "ಅವು ಒಂದು ನಿರ್ದಿಷ್ಟ ಸಂದರ್ಭದಲ್ಲಿ ಬಹಳ ಸುಲಭವಾಗಿ ಸಾಮಾನ್ಯ ಪುಟ್ಟ ಬಂಡವಾಳಶಾಹಿ ಪಕ್ಷಗಳಾಗಿ ಪರಿವರ್ತನೆಯಾಗಿಬಿಡಬಹುದು . . . ದೇಶದ ವಿಮೋಚನೆಗಾಗಿ, ಪಾಳೇಗಾರಿ ಪದ್ಧತಿಯ ಪಳೆಯುಳಿಕೆಗಳನ್ನು ನಾಶಮಾಡುವ ಸಲುವಾಗಿ, ಕಾರ್ಷಿಕ ಕ್ರಾಂತಿಗಾಗಿ ಮತ್ತು ಸೋವಿಯತ್ ಗಣತಂತ್ರದ ರೀತಿಯಲ್ಲಿ ಶ್ರಮಜೀವಿಗಳ ಹಾಗೂ ರೈತರ ಸರ್ವಾಧಿಕಾರತ್ವವನ್ನು ಸ್ಥಾಪಿಸುವ ಸಲುವಾಗಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟ ಮಾಡಬೇಕಾಗಿರುವುದು ಭಾರತೀಯ ಕಮ್ಯುನಿಸ್ಟರ ಬಹು ಮುಖ್ಯವಾದ ಕೆಲಸವಾಗಿದೆ. ಈ ಕೆಲಸವನ್ನು ಯಶಸ್ವಿಯಾಗಿ ಮಾಡಲು ಸಾಧ್ಯವಾಗುವುದು ಒಂದು ಬಲಿಷ್ಠವಾದ ಕಮ್ಯುನಿಸ್ಟ್ ಪಕ್ಷವನ್ನು ಸೃಷ್ಟಿಸಿದರೆ ಮಾತ್ರ; ಅದು ಕಾರ್ಮಿಕ ವರ್ಗದ, ರೈತರ ಮತ್ತು ಎಲ್ಲಾ ಶ್ರಮಜೀವಿಗಳ ಅಪಾರ ಜನಸಮುದಾಯದ ಕೇಂದ್ರ ಸ್ಥಾನದಲ್ಲಿ ತನ್ನನ್ನು ತಾನು ಪ್ರತಿಷ್ಠಾಪಿಸಿಕೊಳ್ಳಲು ಮತ್ತು ಪಾಳೇಗಾರಿ-ಸಾಮ್ರಾಜ್ಯಶಾಹಿ ಕೂಟದ ವಿರುದ್ಧದ ಹೋರಾಟದಲ್ಲಿ ಅವರಿಗೆ ಮುಂದಾಳತ್ವ ನೀಡಲು ಸಮರ್ಥವಾಗಬೇಕು . . . ದೇಶಾದ್ಯಂತ ಹಂಚಿಹೋಗಿರುವ ಎಲ್ಲಾ ಕಮ್ಯುನಿಸ್ಟ್ ಗುಂಪುಗಳು ಮತ್ತು ವೈಯಕ್ತಿಕ ಕಮ್ಯುನಿಸ್ಟರನ್ನು ಒಂದುಗೂಡಿಸಿ ಏಕೈಕ ಸ್ವತಂತ್ರ ಕೇಂದ್ರೀಕೃತ ಪಕ್ಷವನ್ನು ಕಟ್ಟುವುದೇ ಭಾರತೀಯ ಕಮ್ಯುನಿಸ್ಟರ ಮೊದಲ ಕೆಲಸ."

ರಾಷ್ಟ್ರೀಯ ವಿಮೋಚನಾ ಚಳುವಳಿಯಲ್ಲಿ ಬಂಡವಾಳಶಾಹಿಗಳ ಪಾತ್ರದ ಪ್ರಶ್ನೆಯು ಕಾಮಿಂಟರ್ನ್‌ನ ಆರನೇ ಮಹಾಧಿವೇಶನದ ಚರ್ಚೆಗಳಲ್ಲಿನ ಒಂದು ಮುಖ್ಯ ಅಂಶವಾಗಿತ್ತು. ರಾಷ್ಟ್ರೀಯ ವಿಮೋಚನಾ ಹೋರಾಟಗಳಲ್ಲಿನ ರಣತಂತ್ರಗಳು ಮತ್ತು ರಾಷ್ಟ್ರೀಯ ಬಂಡವಾಳಶಾಹಿಗಳ ಪಾತ್ರದ ಪ್ರಶ್ನೆಗಳ ಮೇಲೆ ವಸಾಹತುಗಳ ಕುರಿತು ಮಹಾಧಿವೇಶನವು ಅಂಗೀಕರಿಸಿದ 'ಪ್ರತಿಪಾದನೆಗಳು' ಕೆಲವು ದೋಷಪೂರಿತ ಮತ್ತು ವಿರೋಧಾಭಾಸದ ಪ್ರಸ್ತಾಪಗಳನ್ನು ಹೊಂದಿದ್ದವು. ಉದಾಹರಣೆಗೆ, "ಸಾಮ್ರಾಜ್ಯಶಾಹಿಯ ವಿರುದ್ಧದ ಹೋರಾಟದಲ್ಲಿ ರಾಷ್ಟ್ರೀಯ ಬಂಡವಾಳಶಾಹಿಗಳು ಗಣನೀಯ ಶಕ್ತಿಯಾಗಿಲ್ಲ" ಎಂದು ಅದು ಪ್ರತಿಪಾದಿಸಿತ್ತು. ಕಾಮಿಂಟರ್ನ್‌ನ ಆರನೇ ಮಹಾಧಿವೇಶನದಲ್ಲಿ ಅಂಗೀಕರಿಸಿದ್ದ ನಿರ್ಣಯವು "ಅದೊಂದು ಸ್ಪಷ್ಟವಾದ ಪಂಥೀಯವಾದದ ಛಾಯೆಯನ್ನು ಹೊಂದಿದೆ" ಎಂದು ಸೋವಿಯತ್ ಯೂನಿಯನ್ ಕಮ್ಯುನಿಸ್ಟ್ ಪಕ್ಷದ 20ನೇ ಮಹಾಧಿವೇಶನದಲ್ಲಿ(1954), ಕಾಮಿಂಟರ್ನ್‌ನ ನಾಯಕ ಕೂಸಿನೆನ್ ಒಪ್ಪಿಕೊಂಡರು.

ಸ್ವಾತಂತ್ರ್ಯ ಹೋರಾಟದಲ್ಲಿ ಕಾರ್ಮಿಕ ವರ್ಗದ ಸ್ವಭಾವ ಮತ್ತು ಕಾರ್ಷಿಕ ಕ್ರಾಂತಿಯ ಮಹತ್ವದ ಬಗ್ಗೆ ಅದು(ಕಾಮಿಂಟರ್ನ್‌ನ ಆರನೇ ಮಹಾಧಿವೇಶನವು) ಸರಿಯಾಗಿಯೇ ವಿಶ್ಲೇಷಣೆ ಮಾಡಿದೆಯಾದರೂ, ಸಾಮ್ರಾಜ್ಯಶಾಹಿ-ವಿರೋಧಿ ಸಂಯುಕ್ತ ರಂಗವೆಂಬ ಆ ಹಿಂದಿನ ರಣತಂತ್ರದಿಂದ ಒಂದು ಪಲ್ಲಟ ಆ ಪ್ರತಿಪಾದನೆಗಳಲ್ಲಿ ಇತ್ತು. ವಸಾಹತುಗಳಲ್ಲಿ ರಾಷ್ಟ್ರೀಯ ವಿಮೋಚನಾ ಚಳುವಳಿಯ ಮುಂದಾಳುತ್ವ ವಹಿಸುವಲ್ಲಿ ಕಮ್ಯುನಿಸ್ಟ್ ಪಕ್ಷಗಳ ಮತ್ತು ಕಾರ್ಮಿಕ ವರ್ಗದ ಶಕ್ತಿಯನ್ನು ಅದು ಮಿತಿಮೀರಿ ಅಂದಾಜು ಮಾಡಿತ್ತು. ಭಾರತದಲ್ಲಿ ಅಂದಿನ ಆ ಸಮಯದಲ್ಲಿ ವಾಸ್ತವ ಏನಿತ್ತೆಂದರೆ, ವ್ಯವಸ್ಥೆಯು ಅತ್ತ 'ತಾನೇ ತಾನಾಗಿ ಕುಸಿಯುತ್ತಿರಲಿಲ್ಲ', ಇತ್ತ ವಸಾಹತುಗಳಲ್ಲಿ ವಸಾಹತು ವಿರೋಧಿ ಚಳುವಳಿಗೆ ಕಮ್ಯುನಿಸ್ಟ್ ಪಕ್ಷಗಳು ನೇತೃತ್ವ ನೀಡುವ ಪರಿಸ್ಥಿತಿಯಲ್ಲೂ ಇರಲಿಲ್ಲ. ಹೀಗಿದ್ದಾಗ್ಯೂ, ಸೌಮ್ಯೇಂದ್ರನಾಥ್ ಟಾಗೋರ್ ಡಬ್ಲ್ಯುಪಿಪಿಯ ಪರವಾಗಿ ಮಾತನಾಡಿದ ಮೇಲೂ ಭಾರತೀಯ ನಿಯೋಗವು ವಸಾಹತು ಕುರಿತ ಕರಡು ನಿರ್ಣಯವನ್ನು ಬೆಂಬಲಿಸಿತು.

ಕಾಮಿಂಟರ್ನ್‌ನ ನಿರ್ದೇಶನಗಳು ಭಾರತೀಯ ಕಮ್ಯುನಿಸ್ಟರಿಗೆ ಗಂಭೀರವಾದ ಸಂಘಟನಾತ್ಮಕ ಹಾಗೂ ರಾಜಕೀಯ ಸಂದಿಗ್ಧತೆಯನ್ನು ತಂದೊಡ್ಡಿದವು. ಕಾಮಿಂಟರ್ನ್‌ನ ನಿರ್ದೇಶನದ ಮೇರೆಗೆ, ಅಖಿಲ ಭಾರತ ಕಾರ್ಮಿಕರ ಮತ್ತು ರೈತರ ಪಕ್ಷದ ಸಮ್ಮೇಳನ(ಡಿಸೆಂಬರ್ 1928)ದ ನಂತರ ಕಮ್ಯುನಿಸ್ಟ್ ಮುಖಂಡರು ಕಲ್ಕತ್ತಾದಲ್ಲಿ ಒಂದು ಸಭೆಯನ್ನು ಆಯೋಜಿಸಿದರು. ವಸಾಹತು ಪ್ರಶ್ನೆಯ ಮೇಲಿನ ಪ್ರತಪಾದನೆಗಳನ್ನು 'ಕೆಲಸದ ಆಧಾರವೆಂದು ಬಗೆದು' ಅಂಗೀಕರಿಸಲು ತೀರ್ಮಾನಿಸಿದರು ಮತ್ತು ಒಂದು ಬಹಿರಂಗ ಸಿಪಿಐಯನ್ನು ಸ್ಥಾಪಿಸುವ ಸಾಧ್ಯತೆಯನ್ನು 'ಪ್ರಯೋಗಿಸಲು' ನಿರ್ಣಯಿಸಿದರು. ಕಾರ್ಮಿಕರು ಮತ್ತು ರೈತರ ಪಕ್ಷವನ್ನು ಮುಕ್ತಾಯಗೊಳಿಸುವ ನಿರ್ದೇಶನದ ಬಗ್ಗೆ ಆ ಸಭೆಯು ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳಲಿಲ್ಲ.

'ಎಲ್ಲಾ ಕಾರ್ಮಿಕರಿಗೆ ಸಿಪಿಐ ಪ್ರಣಾಳಿಕೆ'ಯಲ್ಲಿ ಕಾಮಿಂಟರ್ನ್ ಶಿಫಾರಸು ಮಾಡಿದ ಕಾರ್ಯನೀತಿಗಳು ಪ್ರತಿಬಿಂಬಿತವಾಗಿದ್ದವು. ಡಬ್ಲ್ಯುಪಿಪಿಯ ಜತೆಯಲ್ಲೇ ಸಿಪಿಐಯನ್ನೂ ಪುನಶ್ಚೇತನಗೊಳಿಸಬೇಕಾದ ಅವಶ್ಯಕತೆಯನ್ನು ಆ ದಸ್ತಾವೇಜು ಸಮರ್ಥಿಸಿತು. ಡಬ್ಲ್ಯುಪಿಪಿ ಒಂದು 'ಅಗತ್ಯವಾದ ಘಟ್ಟ' ಎಂದು ಪ್ರಣಾಳಿಕೆ ಬಣ್ಣಿಸಿತು. ಕಾರ್ಮಿಕರು ಮತ್ತು ಕಾರ್ಮಿಕ ಸಂಘಗಳು ಡಬ್ಲ್ಯುಪಿಪಿಯನ್ನು ಬೆಂಬಲಿಸಬೇಕು ಮತ್ತು 'ಈಗ' ಕಮ್ಯುನಿಸ್ಟ್ ಪಕ್ಷವನ್ನು 'ಅವರೇನಾದರೂ ಜಯಶೀಲರಾಗಬೇಕಾದರೆ . . ತಮ್ಮ ಮುಂಚೂಣಿ'ಯೆಂದು ಸಂಘಟಿಸಬೇಕು ಎಂದು ಪ್ರಣಾಳಿಕೆ ಕರೆ ನೀಡಿತು. ಕಾಮಿಂಟರ್ನ್‌ನ ಸೂಚನೆಗಳೊಂದಿಗೆ ಸಮನ್ವಯಗೊಳ್ಳಲು ಭಾರತದಲ್ಲಿರುವ ಕಮ್ಯುನಿಸ್ಟರು ಮಾಡಿದ ಪ್ರಯತ್ನದ ಭಾಗವೇ ಈ ಪ್ರಣಾಳಿಕೆ. ಒಂದು ನಿರ್ಣಾಯಕ ಮಾರ್ಗವನ್ನು ಗೊತ್ತುಮಾಡಿಕೊಳ್ಳುವ ಮುನ್ನವೇ, ಮಾರ್ಚ್ 1929ರಲ್ಲಿ ಮೀರತ್ ಪಿತೂರಿ ಪ್ರಕರಣವನ್ನು ಹೂಡಲಾಯಿತು, ಅದು ಭಾರತೀಯ ಕಮ್ಯುನಿಸ್ಟರಿಗೆ ದೊಡ್ಡ ಹೊಡೆತ ಕೊಟ್ಟಿತು.

1930ರಲ್ಲಿ ಪಕ್ಷವು ಅಂಗೀಕರಿಸಿದ ಕಾರ್ಯಾಚರಣೆಯ ಘೋಷಣಾ ಪತ್ರದಲ್ಲಿ ಕಾಮಿಂಟರ್ನ್‌ನ ಆರನೇ ಮಹಾಧಿವೇಶನದಲ್ಲಿ ಪ್ರಸ್ತಾಪಿಸಲ್ಪಟ್ಟ ಕೆಲವು ಪ್ರತಿಪಾದನೆಗಳು ಇದ್ದವು. "ಜವಾಹರ್‌ಲಾಲ್ ನೆಹರೂ, ಸುಭಾಶ್ ಚಂದ್ರ ಬೋಸ್, ಗಿನ್ವಾಲಾ ಮತ್ತಿತರ ರಾಷ್ಟ್ರೀಯ ಕಾಂಗೆಸ್ಸಿನ ಎಡಪಂಥೀಯ ವ್ಯಕ್ತಿಗಳ ನೇತೃತ್ವದ ಕ್ರಾಂತಿಕಾರಿ ಮಾತುಗಳ ಸೋಗಿನಡಿಯಲ್ಲಿ ನಡೆಸಿದ ಹೋರಾಟವು ಭಾರತದ ಕ್ರಾಂತಿಯ ಗೆಲುವಿಗೆ ಅತ್ಯಂತ ಹಾನಿಕಾರಕ ಹಾಗೂ ಅಪಾಯಕಾರಿ ಅಡಚಣೆಯಾಗಿದ್ದವು" ಎಂದು ಅದರಲ್ಲಿ ಹೇಳಲಾಗಿತ್ತು. ಈ ಗ್ರಹಿಕೆಯು 1930-32ರಲ್ಲಿ ಪಂಥೀಯವಾದಕ್ಕೆ ದಾರಿ ಮಾಡಿತು, ಅದು ಪಕ್ಷದ ವರ್ಚಸ್ಸಿಗೆ ದೊಡ್ಡ ಹಾನಿ ಉಂಟುಮಾಡಿತು.

1930ರ ಮಹಾ ಪತನದ ಆರಂಭಕ್ಕೆ ಸಾಕಷ್ಟು ಮುಂಚೆಯೇ ಕಾಮಿಂಟರ್ನ್ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಬಗ್ಗೆ ಭವಿಷ್ಯ ನುಡಿದಿತ್ತು ಮತ್ತು ಅದು ಸಾಮ್ರಾಜ್ಯಶಾಹಿಯ ವೈರುಧ್ಯಗಳನ್ನು ಇನ್ನೂ ತೀವ್ರಗೊಳಿಸುವುದರ ಮೂಲಕ ಕ್ರಾಂತಿಕಾರಿ ಚಟುವಟಿಕೆಗಳ ಹೊಸ ಹೆಚ್ಚಳಕ್ಕೆ ಕಾರಣವಾಗುತ್ತದೆ ಎಂದು ಕಮ್ಯುನಿಸ್ಟರಿಗೆ ಅಪಾಯದ ಸೂಚನೆ ನೀಡಿತ್ತು. ವರ್ಗ ಹೋರಾಟದ ಈ ಉದ್ರಿಕ್ತ ಸ್ಥಿತಿಯು ಪ್ರಭುತ್ವದ ದಮನಕಾರಿ ಕ್ರಮಗಳಿಗೆ ಕಾರಣವಾಗುತ್ತದೆ ಮತ್ತು ಅದು ಫ್ಯಾಸಿವಾದಕ್ಕೂ ದಾರಿ ಮಾಡುತ್ತದೆ ಎಂದೂ ಅದು ಎಚ್ಚರಿಸಿತ್ತು. ಬಿಕ್ಕಟ್ಟಿಗೆ ತಳ್ಳಲ್ಪಟ್ಟ ಬಂಡವಾಳಶಾಹಿಯ ದಾಳಿಗಳು ಮತ್ತು ಇನ್ನೂ ತೀವ್ರಗೊಳ್ಳುವ ಆಕ್ರಮಣಕಾರಿ ಫ್ಯಾಸಿಸ್ಟ್ ಕುತಂತ್ರಗಳನ್ನು ಎದುರಿಸಲು ಜನಸಮುದಾಯವನ್ನು ಅಣಿನೆರೆಸುವ ತುರ್ತಿನ ಬಗ್ಗೆ ಕಾಮಿಂಟರ್ನ್‌ನ ಹನ್ನೆರಡನೇ ಪ್ಲೀನಂನಲ್ಲಿ ಸಮಾಲೋಚಿಸಿತ್ತು. ಸಂಯುಕ್ತ ರಂಗ ನೀತಿಯತ್ತ ಕಾಮಿಂಟರ್ನ್‌ನ ಪಯಣದ ಆರಂಭವಾಗಿತ್ತು ಈ ಪ್ಲೀನಂ, ಅಂತಿಮವಾಗಿ 1935ರ ಏಳನೇ ಮಹಾಧಿವೇಶನದಲ್ಲಿ ಕಾಮಿಂಟರ್ನ್ ಆ ನೀತಿಯನ್ನು ಅಂಗೀಕರಿಸಿತು.

ಮೇ 1932ರಲ್ಲಿ, ಚೈನಾ, ಗ್ರೇಟ ಬ್ರಿಟನ್ ಮತ್ತು ಜರ್ಮನಿಯ ಕಮ್ಯುನಿಸ್ಟ್ ಪಕ್ಷಗಳು ಜಂಟಿಯಾಗಿ ಹೊರಡಿಸಿದ 'ಬಹಿರಂಗ ಪತ್ರ'ವನ್ನು ಕಾಮಿಂಟರ್ನ್‌ನ ಸಂಪೂರ್ಣ ಒಪ್ಪಿಗೆಯ ಮೇರೆಗೆ ಅದರ ಅಧಿಕೃತ ಮುಖವಾಣಿ 'ಇಂಪ್ರೆಕರ್'ನಲ್ಲಿ ಪ್ರಕಟಿಸಲಾಯಿತು. ಕಾಂಗ್ರೆಸ್ಸಿನ ಬಂಡವಾಳಶಾಹಿ ನೇತೃತ್ವ ಮತ್ತು ಕಾರ್ಮಿಕರು, ರೈತರು ಹಾಗೂ ಕಾಂಗ್ರೆಸ್ಸಿನ 'ವಿಶ್ವಾಸಘಾತಕ ಗುಣ'ವನ್ನು ಸರಿಯಾಗಿ ಅರಿಯುವಲ್ಲಿನ ಕೊರತೆಯಿಂದಾಗಿ ಅದನ್ನು ಹಿಂಬಾಲಿಸುತ್ತಿರುವ ಪಟ್ಟಣಗಳ 'ಪುಟ್ಟ ಬಂಡವಾಳಶಾಹಿಗಳ ಕ್ರಾಂತಿಕಾರಿ ಶಕ್ತಿಗಳ ನಡುವಿನ ವ್ಯತ್ಯಾಸವನ್ನು ಆ ಪತ್ರ ವಿವರಿಸಿತ್ತು. ಕಾಂಗ್ರೆಸ್ ಸಂಘಟಿಸುವ ಎಲ್ಲಾ ಬೃಹತ್ ಮತಪ್ರದರ್ಶನಗಳಲ್ಲಿ ಭಾರತೀಯ ಕಮ್ಯುನಿಸ್ಟರು ಭಾಗವಹಿಸಬೇಕಾದ 'ಅಗತ್ಯತೆ'ಯ ಬಗ್ಗೆ ಹೇಳಿ, ಅಲ್ಲಿ ತಮ್ಮದೇ ಆದ 'ಕಮ್ಯುನಿಸ್ಟ್ ಘೋಷಣೆಗಳನ್ನು ಮತ್ತು ಹೋರಾಟಗಳನ್ನು' ಹೇಳಲು ಮುಂದಾಗಬೇಕು ಎಂದು ಆ ಪತ್ರವು ಸಲಹೆ ನೀಡಿತ್ತು. ಕಾಂಗ್ರೆಸ್ ಸಂಘಟಿಸುವ ಸಾಮೂಹಿಕ ಕಾರ್ಯಾಚರಣೆಯಲ್ಲಿ ಕಮ್ಯುನಿಸ್ಟ್ ಪಕ್ಷವು ಭಾಗವಹಿಸಬೇಕು ಮತ್ತು ಮುಖ್ಯವಾಹಿನಿಯಿಂದ ಕಮ್ಯುನಿಸ್ಟ್ ಪಕ್ಷ ದೂರವಾಗದಂತೆ ನೋಡಿಕೊಳ್ಳಬೇಕೆಂದು ಆ ಪತ್ರವು ನಿರ್ದೇಶನ ನೀಡಿತ್ತು. 1933ರಲ್ಲಿ, ಚೈನಾ ಕಮ್ಯುನಿಸ್ಟ್ ಪಕ್ಷವು ಭಾರತೀಯ ಕಮ್ಯುನಿಸ್ಟರಿಗೆ ಮತ್ತೊಮ್ಮೆ ಬಹಿರಂಗ ಪತ್ರ ಬರೆಯಿತು.

ಆದರೆ, ಈ ಬಹಿರಂಗ ಪತ್ರಗಳು ತಪ್ಪುಗಳನ್ನು ಮತ್ತು ಪಂಥೀಯ ನಿಲುವುಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಸಾಕಾಗಲಿಲ್ಲ. ಪುನಶ್ಚೇತನಕ್ಕಾಗಿನ ಪಕ್ಷದ ಪ್ರಯತ್ನಗಳ ಹೊರತಾಗಿಯೂ, ಸ್ವಾತಂತ್ರ್ಯ ಚಳುವಳಿಯಲ್ಲಿನ ರಾಷ್ಟ್ರೀಯ ಬಂಡವಾಳಶಾಹಿಗಳ ಪಾತ್ರದ ಬಗೆಗಿನ ನಕಾರಾತ್ಮಕ ದೃಷ್ಟಿಕೋನವನ್ನು ಬದಲಿಸಲಾಗಲಿಲ್ಲ. ಬಂಡವಾಳಶಾಹಿಗಳ ಮೋಸವನ್ನು ಬಯಲು ಮಾಡುವುದರ ಬಗ್ಗೆಯೇ ಕಮ್ಯುನಿಸ್ಟರು ಹೆಚ್ಚು ಒತ್ತು ನೀಡಿದರು. ಅಂತರ್‍ರಾಷ್ಟ್ರೀಯ ಸನ್ನಿವೇಶದಲ್ಲಿನ ಬದಲಾವಣೆ ಮತ್ತು ಆ ನಂತರದಲ್ಲಿ ಕಾಮಿಂಟರ್ನ್‌ನ ನೀತಿಗಳಲ್ಲಿ ಆದ ಬದಲಾವಣೆಗಳು ಕಮ್ಯುನಿಸ್ಟರು ತದನಂತರದಲ್ಲಿ ಅಂಗೀಕರಿಸಿದ ಕೆಲವು ತಂತ್ರಗಾರಿಕೆ ನಿಲುವುಗಳಲ್ಲಿನ ದೋಷಗಳನ್ನು ಸರಿಪಡಿಸುವ ದಿಕ್ಕಿನಲ್ಲಿ ಸಹಾಯಕವಾದವು.

ಕಾಮಿಂಟರ್ನ್‌ನ ಏಳನೇ ಮಹಾಧಿವೇಶನ'(1935)ವು ವಸಾಹತುಗಳು ಮತ್ತು ಅರೆವಸಾಹತುಗಳಲ್ಲಿನ ರಾಷ್ಟ್ರೀಯ ವಿಮೋಚನಾ ಹೋರಾಟಗಳು ಮತ್ತು ಫ್ಯಾಸಿಸ್ಟ್ ವಿರೋಧಿ ಮತ್ತು ಯುದ್ಧ ವಿರೋಧಿ ಹೋರಾಟಗಳ ನಡುವೆ ನಿಕಟ ಸಂಪರ್ಕ ಕಲ್ಪಿಸಿತು. ಒಂದು ಸಂಯುಕ್ತ ಸಾಮ್ರಾಜ್ಯಶಾಹಿ-ವಿರೋಧಿ ರಂಗದ ಘೋಷಣೆಯನ್ನಾಗಿ ಈ ದೇಶಗಳ ಸಂಯುಕ್ತ ರಂಗಗಳಿಗೆ ನಿರ್ದಿಷ್ಟವಾಗಿ ಹೇಳಲಾಗಿತ್ತು. ಸಾಮ್ರಾಜ್ಯಶಾಹಿ-ವಿರೋಧಿ ನಿಲುವಿಗೆ ರಾಷ್ಟ್ರೀಯ ಬಂಡವಾಳಶಾಹಿಗಳು ದ್ರೋಹ ಎಸಗುತ್ತಿದ್ದಾರೆಂಬ ಪಂಥೀಯ ಪ್ರತಿಪಾದನೆಯನ್ನು ಅದು ತಿರಸ್ಕರಿಸಿತು. ರಾಷ್ಟ್ರೀಯ ಪರಿಷ್ಕರಣವಾದಿಗಳ ನೇತೃತ್ವದಲ್ಲಿನ ಸಾಮ್ರಾಜ್ಯಶಾಹಿ-ವಿರೋಧಿ ಜನಪ್ರಿಯ ಚಳುವಳಿಗಳಲ್ಲಿ ಕಮ್ಯುನಿಸ್ಟರು ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ಮತ್ತು ಜಂಟಿಯಾಗಿ ಕೆಲಸ ಮಾಡಿ ಎಂದು ಅದು ಕರೆ ನೀಡಿತು.

ಈ ಮಹಾಧಿವೇಶನದಲ್ಲಿ ದಿಮಿತ್ರೋವ್ ತಮ್ಮ ಭಾಷಣದಲ್ಲಿ, ಅಂದಿನ ಅಂತರ್‍ರಾಷ್ಟ್ರೀಯ ಸನ್ನಿವೇಶದಲ್ಲಿ ಭಾರತೀಯ ಕಮ್ಯುನಿಸ್ಟರ ಪಾತ್ರದ ಬಗ್ಗೆ ಮಾತನಾಡಿದರು: "ಭಾರತದಲ್ಲಿ, ರಾಷ್ಟ್ರೀಯ ಪರಿಷ್ಕರಣವಾದಿಗಳ ನೇತೃತ್ವದ ಅಡಿಯಲ್ಲಿರುವ ಚಟುವಟಿಕೆಗಳನ್ನೂ ಒಳಗೊಂಡಂತೆ ಸಾಮ್ರಾಜ್ಯಶಾಹಿ-ವಿರೋಧಿ ಸಾಮೂಹಿಕ ಚಟುವಟಿಕೆಗಳಲ್ಲಿ ಕಮ್ಯುನಿಸ್ಟರು ಭಾಗವಹಿಸಬೇಕು, ಬೆಂಬಲ ವ್ಯಕ್ತಪಡಿಸಬೇಕು. ತಮ್ಮ ರಾಜಕೀಯ ಹಾಗೂ ಸಂಘಟನಾತ್ಮಕ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವಾಗಲೇ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನೊಳಗೆ, ಅವರ ಸಂಘಟನೆಯೊಳಗೆ ತಮ್ಮ ಕೆಲಸವನ್ನು ಕೈಗೊಳ್ಳಬೇಕು." ಎಂದರು.

ಈ ತಿಳುವಳಿಕೆಯನ್ನು ಮುಂದೆ ಬೆಳೆಸುತ್ತಾ, 1936ರಲ್ಲಿ ಗ್ರೇಟ್ ಬ್ರಿಟನ್ ಕಮ್ಯುನಿಸ್ಟ್ ಪಕ್ಷ(ಸಿಪಿಜಿಬಿ)ದ ರಜನಿ ಪಾಮೆ ದತ್ ಮತ್ತು ಬೆನ್ ಬ್ರಾಡ್ಲಿಯವರು ಭಾರತದಲ್ಲಿನ ಸಾಮ್ರಾಜ್ಯಶಾಹಿ ವಿರೋಧಿ ಜನತಾರಂಗಕ್ಕಾಗಿ 'ದತ್-ಬ್ರಾಡ್ಲಿ ಪ್ರಮೇಯ'ವನ್ನು ಪ್ರಕಟಿಸಿದರು. ಈ ಪ್ರಮೇಯವು ಭಾರತದ ಕಮ್ಯುನಿಸ್ಟ್ ಚಳುವಳಿಯ ಮೇಲೆ ಅಗಾಧ ಪ್ರಭಾವ ಬೀರಿತು.

ಮೋದಿ ನೇತೃತ್ವದ ಬಿಜೆಪಿ ಮರಳಿ ಅಧಿಕಾರಕ್ಕೆ............

ಪುಟ 10 ರಿಂದ

ಉಳಿಸಿದೆ ಎಂದಿದೆ. ಶಿಕ್ಷೆಯ ಪ್ರಮಾಣ ಕೇವಲ ಶೇ 5 ಕೆಲವೇ ಕೆಲವು ದೂರುಗಳು ಮಾತ್ರ ವರದಿಯಾಗುತ್ತದೆ. ನ್ಯಾಯ ವ್ಯವಸ್ಥೆಯ ಈ ದುಸ್ಥಿತಿ, ಕ್ಷಿಪ್ರ ನ್ಯಾಯದ ಬೇಡಿಕೆಯನ್ನು ಮುಂದಿಡುತ್ತದೆ.

ಮನುವಾದಿ ಸಂಸ್ಕೃತಿಯನ್ನು ಬಿತ್ತಲು ಮುಂದಾಗಿರುವ ಆರ್ ಎಸ್.ಎಸ್. ಪ್ರಭಾವ ಮನಸ್ಸುಗಳನ್ನು ಎತ್ತಿ ಹಿಡಿಯುತ್ತಿದೆ. ಅದು ನವುದಾರೀಕರಣದ ಭಾಗವಾಗಿದೆ. ಹೀಗಾಗಿ ಅತ್ಯಾಚಾರ, ಕೊಲೆ, ಮಾಡಿದವರ ಪರವಾಗಿ ಕೆಲವು ಪ್ರಮುಖ ಬಿ.ಜೆ.ಪಿ ಮುಖಂಡರು ಪ್ರತಿಭಟನೆ ನಡೆಸುವುದು ಅಸಹಜವಲ್ಲ.

ಲಿಂಗ ಅಸಮಾನತೆ

ವಿಶ್ವ ಆರ್ಥಿಕ ಪೋರಂನ ಜಾಗತಿಕ ಲಿಂಗ ಅಸಮಾನತೆ ಸೂಚ್ಯಂಕದಲ್ಲಿ ಭಾರತವು 2017-18 ಭಾರತವು 108 ನೇ ಸ್ಥಾನದಲ್ಲಿತ್ತು. ಮತ್ತು 2019 ರಲ್ಲಿ ಅದು 150 ರಾಷ್ಟ್ರಗಳ ಪೈಕಿ 112 ನೇ ಸ್ಥಾನಕ್ಕೆ ಇಳಿಯಿತು. ಆರ್ಥಿಕ ಭಾಗವಹಿಸುವಿಕೆ ಮತ್ತು ಅವಕಾಶ ಶಿಕ್ಷಣದ ಎಟಕುವಿಕೆ ಆರೋಗ್ಯ ಮತ್ತು ಜೀವಂತಿಕೆ ಮತ್ತು ರಾಜಕೀಯ ಬಲವರ್ಧನೆ ಇವು ಸೂಚ್ಯಾಂಕದ ಸ್ಥಳಗಳು, ಮೊದಲ ವಿಭಾಗದಲ್ಲಿ ನಮ್ಮ ದೇಶದ ಬಾಂಗ್ಲಾದೇಶ, ನೇಪಾಳ, ಶ್ರೀಲಂಕಗಿಂತ ಹಿಂದಿದೆ. ನಮ್ಮ ದೇಶ ಹಿಂದೆ ಮಾಲ್ಡೀವ್ಸ್, ಭೂತಾನ್, ಪಾಕಿಸ್ತಾನ ಇದೆ.

ಸಾಮಾಜಿಕ ದಾಳಿ

ದಲಿತರು ಮತ್ತು ಆದಿವಾಸಿಗಳ ಪೋಲಿಸ್ ದಾಳಿ ಮುಂದುವರಿದಿದೆ. ಹಿರಿಯ ಡಾಕ್ಟರುಗಳು ನೀಡಿದ ಹಿಂಸೆ ಮತ್ತು ಮಾನಸಿಕ ಒತ್ತಡದಿಂದಾಗಿ ಆದಿವಾಸಿ ಜನಾಂಗಕ್ಕೆ ಸೇರಿದ ಪಾಯಲ್ ತಾಟ್ವಿ ಎನ್ನುವ ಡಾಕ್ಟರ್ ಆತ್ಮಹತ್ಯೆ ಮಾಡಿಕೊಂಡರು. "ಮರ್ಯಾದಾ ಹತ್ಯೆ" ಹೆಸರಿನಲ್ಲಿ ಅಂತರಜಾತಿ, ಅಂತರ್‌ಧರ್ಮಿಯ ವಿವಾಹವಾದ ಮಕ್ಕಳನ್ನು ಅವರ ಪೋಷಕರೇ ಕೊಲ್ಲಿಸುವುದು ನಡೆಯುತ್ತಿದೆ. ಈ ಕುಟುಂಬಗಳು ಸಾಮಾಜಿಕ ಬಹಿಷ್ಕಾರಕ್ಕೆ ಒಳಪಡಿಸುತ್ತಿದೆ.

ಸಿಎಎ, ಎನ್.ಆರ್.ಸಿ. ಮತ್ತು ಎನ್‌ಪಿಆರ್ ವಿರುದ್ಧದ ಹೋರಾಟಗಳಲ್ಲಿ ಹಿಂದೂಗಳಲ್ಲಿನ ಕೆಲವಿಭಾಗಗಳಲ್ಲಿರುವ ಮುಸ್ಲಿಂ ವಿರೋಧಿ ಧೋರಣೆಯು ಕಂಡು ಬರುತ್ತಿದೆ. ಎಲ್ಲ ಧರ್ಮಗಳನ್ನು ಮೀರಿ ಜನವಿಭಾಗಳ ಪ್ರಮುಖವಾಗಿ ಯುವಜನ ಮತ್ತು ಮಹಿಳೆಯರು ಪ್ರಭಟನೆಗಳಲ್ಲಿ ಪಾಲ್ಗೊಳ್ಳುತ್ತಿರುವುದು ಸ್ವಾಗರ್ತಾಹ. ಈ ಪ್ರತಿಭಟನೆಗಳಿಗೆ ಕೋಮು ಬಣ್ಣ ಬಳಿಯುವ ಮೂಲಕ ಬಿ.ಜೆ.ಪಿ ಮತ್ತು ಅದರ ಸರ್ಕಾರಗಳು ಗಣನೀಯ ಭಾಗದ ಹಿಂದೂಗಳನ್ನು, ಕಾರ್ಮಿಕರು ಉದ್ಯೋಗಿಗಳು ಒಳಗೊಂಡತೆ ಪ್ರಭಾವಿಸುತ್ತವೆ. ಮುಸ್ಲಿಂ, ಜಾಮಿಯ ಮೇಲಿನ ವಿ.ವಿ. ಹಾಗೂ ಅಲಿಗರ್ ವಿ.ವಿ.ಗಳನ್ನು ವಿಶೇಷವಾಗಿ ಪೋಲಿಸರು ಕೇಂದ್ರೀಕರಿಸಿ ದಾಳಿ ಮಾಡಿದ್ದಾರೆ. ಮಹಿಳೆಯರ ಮೇಲೆ ಹೆಚ್ಚುತ್ತಿರುವ ದಾಳಿಗೆ ಆರ್. ಎಸ್.ಎಸ್ ಪ್ರಾಯೋಜಿತ ಅತಿ ಹೆಚ್ಚು ಮಾತನಾಡುವ ಪ್ರಧಾನಮಂತ್ರಿಗಳು ಮೌನವಾಗಿದ್ದಾರೆ. ಒಂದೆಡೆ ಅವರು ಎನ್.ಆರ್.ಸಿ. ವಿರುದ್ಧ ಆಕ್ರೋಶ ಗೊಂಡಿರುವ ಜನರನ್ನೂ ಶಾಂತಿ ಕಾಪಾಡುವಂತೆ ಮನವಿ ಮಾಡಿಕೊಂಡರೆ ಇನ್ನೊಂದೆಡೆ ಅವರೆ ಪ್ರತಿಭಟನಾಕಾರನ್ನು ಅವರ ದಿರಿಸಿನಿಂದ ಪತ್ತೆ ಹಚ್ಚಬಹುದೆಂಬ ಕೋಮು ಹೇಳಿಕೆ ನೀಡುತ್ತಾರೆ. ಅದಕ್ಕೆ ಹೇಳುವುದು ದೆವ್ವಗಳು ಒಮ್ಮೊಮ್ಮೆ ವೇದ ಹೇಳುತ್ತಿದೆ ಎಂದು.

ಗಣನೀಯ ಪ್ರಮಾಣದ ಕಾರ್ಮಿಕರು ಕೂಡ ಪಾಳೆಗಾರಿ,ಪಿತೃಪ್ರಧಾನ, ಗೊಡ್ಡು ಮೌಲ್ಯಗಳು ಮತ್ತು ಅವೈಜ್ಞಾನಿಕ ಪದ್ದತಿಗಳಿಗೆ ಬಲಿಯಾಗುತ್ತಿದ್ದಾರೆ. ಶಬರಿಮಲೆ ತೀರ್ಪು ಮತ್ತು ಈ ತೀರ್ಪಿನ ಜಾರಿಗೆ ಎಲ್.ಡಿ.ಎಫ್ ಸರ್ಕಾರ ಮುಂದಾದಾಗ ಆಡಿದ ಪ್ರತಿಕ್ರಿಯೆ ಈ ಅವೈಜ್ಞಾನಿಕ ಮತ್ತು ಪಿತೃಪ್ರಧಾನ ಧೋರಣೆಗಳನ್ನು ಬಯಲಿಗೆಳೆದಿದೆ.

ಒಂದು ವರ್ಗದ ಸಂಘಟನೆಯಾಗಿ ಸಿಐಟಿಯು ಈ ಎಲ್ಲಾ ಮನಸ್ಸುಗಳ ವಿರುದ್ಧವಾಗಿ ಒಟ್ಟಾರೆಯಾಗಿ ಮತ್ತು ಕಾರ್ಮಿಕರು ಮತ್ತು ತನ್ನ ಸದಸ್ಯರಲ್ಲಿರುವ ಈ ಧೋರಣೆಗಳನ್ನು ನವ ಉದಾರವಾದವು ತನ್ನ ಹಿತಾಸಕ್ತಿಗಾಗಿ ಹರಿ ಬಿಡುತ್ತಿದೆ ಎಂಬುದನ್ನು ಅರಿಯಬೇಕು. ಎಲ್ಲರನ್ನೂ ಹೋರಾಟದ ತೆಕ್ಕೆಗೆ ಸೆಳೆಯಬೇಕು.

ಮಹಿಳೆಯರು ದಲಿತರು, ಆದಿವಾಸಿಗಳು ಅಥವಾ ಅಲ್ಪಸಂಖ್ಯಾತರ ಮೇಲಿನ ದಾಳಿಗಳನ್ನು ಅವರುಗಳೇ ಎದುರಿಸಬೇಕು ಎನ್ನುವ ಧೋರಣೆಯನ್ನು ತಕ್ಷಣದಲ್ಲಿಯೇ ಬಂದದ್ದು ವೈಜ್ಞಾನಿಕ ಚಿಂತನೆ ಬೆಳೆಸುವಂತಾಗಲು ಕೆಡರ್‌ಗಳಿಗೆ ಮತ್ತು ಕಾರ್ಯಕರ್ತರಿಗೆ ಶಿಕ್ಷಣ ನೀಡಬೇಕು.

ಪ್ರಜಾಸತ್ತೆಯನ್ನು ಕಡೆಗಣಿಸುವ ಬಿಜೆಪಿ

ಮಹಾರಾಷ್ಟ್ರದಲ್ಲಿ ಸರ್ಕಾರ ರಚಿಸಲು ಬಿಜೆಪಿ ಮುಂದಾದ ರೀತಿ ಅದು ಪ್ರಜಾಸತ್ತೆಯನ್ನು ಹೇಗೆ ಕಡೆಗಣಿಸುತ್ತಿದೆ ಎಂಬುದರ ಇನ್ನೊಂದು ನಿದರ್ಶನ. ರಾಷ್ಟ್ರಪತಿ, ಪ್ರಧಾನ ಮಂತ್ರಿ ಮತ್ತು ಮಹಾರಾಷ್ಟ್ರದ ರಾಜ್ಯಪಾಲರು-ಮೂವರು ಸಂವಿಧಾನಾತ್ಮಕ ಅಧಿಕಾರಿಗಳು, ದೇವೇಂದ್ರ ಫಡ್ನಾವೀಸ್ ರಾಜೀನಾಮೆ ನೀಡಬೇಕಾಯಿತು.

ಕರ್ನಾಟಕದಲ್ಲೂ ಇದೇ ರೀತಿ ನಡೆದುಕೊಂಡಿದ್ದು ಇದು ಬಿಜೆಪಿ ಹೇಗೆ ತನ್ನ ಅಧಿಕಾರ ಬಳಸಿಕೊಂಡು ಅದರ ಲಾಭ ಮಾಡಿಕೊಳ್ಳುತ್ತಿದೆ.

ಜನತೆಗಾಗಿ ಪ್ರಜಾಸತ್ತೆ

ನವ ಉದಾರವಾದದ ಮತ ಚಲಾಯಿಸುವವರು ಮತ್ತು ಜನರ ಪ್ರತಿನಿಧಿಗಳಿಬ್ಬರನ್ನು ಸಹ ಆಳುವ ವರ್ಗಗಳ ಪಕ್ಷಗಳು ವಸ್ತುವಾಗಿಯೇ ಪರಿಗಣಿಸುತ್ತವೆ. ಚುನಾವಣೆಗಳಲ್ಲಿ ಬೃಹತ ಕಾರ್ಪೋರೇಟ್ ದೇಶಿಗಳಿಗೆ ಸಂಗ್ರಹಿಸಿ ವೆಚ್ಚ ಮಾಡಲಾಗುತ್ತೆ. ಆರ್.ಬಿ.ಐ. ಮತ್ತು ಚುನಾವಣಾ ಆಯೋಗದ ವಿರೋಧದ ನಡುವೆವು ಬಿಜೆಪಿ ಸರಕಾರ ಚುನಾವಣಾ ಬಂಡ್‌ಗಳನ್ನು ಬಿಡುಗಡೆ ಮಾಡಿದೆ. ಎಂದು ಇತ್ತೀಚೆಗೆ ಗೊತ್ತಾಗುತ್ತದೆ. ಸಿ.ಎಮ್.ಎಸ್ ಪ್ರಕಾರ 2019 ರ ಚುನಾವಣೆಯಲ್ಲಿ ಸುಮಾರು ರೂ. 60000 ಕೋಟಿ ಖರ್ಚು ಮಾಡಲಾಗಿದೆ. ರೂ. 12000 ಕೋಟಿಯಿಂದ ರೂ. 15000 ಕೋಟಿ (ಶೇ.45) ಖರ್ಚುಮಾಡಿದೆ. ರೂ. 12000 ಕೋಟಿಯಿಂದ ರೂ. 15000 ಕೋಟಿ ರೂ.ಗಳನ್ನು ಮತ ಚಲಾಯಿಸುವವರಿಗೆ ನೇರವಾಗಿ ನೀಡಲಾಗಿದೆ ಮತ್ತು ರೂ. 20000 ಕೋಟಿಯಿಂದ ರೂ. 25000 ಕೋಟಿಯನ್ನು ಜಾಹಿರಾತಿಗಾಗಿ ಖರ್ಚು ಮಾಡಲಾಗಿದೆ. ಚುನಾವಣಾ ನಿಧಿಗೆ ದೊಡ್ಡ ಕೊಡುಗೆ ನೀಡಿರುವುದು ಕಾರ್ಪೋರೇಟ್ ಗಳು.

ಪ್ರಸ್ತುತ ವ್ಯವಸ್ಥೆಯಲ್ಲಿ ಜನ ಸಾಮಾನ್ಯರಿಗೆ ಪ್ರಜಾಪ್ರಭುತ್ವ ವ್ಯವಸ್ಥೆ ಅರ್ಥ ಕಳೆದುಕೊಳ್ಳುತ್ತಿದೆ. "ಜನ ಪ್ರತಿನಿಧಿಗಳು" ಒಂದು ಬೂರ್ಜ್ವಾ ಪಕ್ಷದಿಂದ ಗೆದ್ದ ಇನ್ನೊಂದು ಬೂರ್ಜ್ವಾ ಪಕ್ಷಕ್ಕೆ ಹಾರುವುದು ಮಾಮೂಲಾಗಿದೆ. ಬಹುತೇಕ ಬೂರ್ಜ್ವಾ ಪಕ್ಷಗಳಿಗೆ ತಮ್ಮ ಚುನಾಯಿತ ಸದಸ್ಯರನ್ನೂ "ರಕ್ಷಿಸಲು" ರೆಸಾರ್ಟ್‌ಗಳಿಗೆ/ಐಷಾರಾಮಿ ಹೋಟೆಲ್ಗಳಿಗೆ ತಂಡವಾಗಿ ಕೊಂಡೊಯ್ಯುವುದು ಸಹ ಮಾಮೂಲಾಗಿದೆ. ಜನರ ವಿಷಯಗಳು ಮತು ನೀತಿಗಳು ಚರ್ಚೆಗೆ ಬರುವುದೆ ಇಲ್ಲ.

ಆಳುವ ವರ್ಗಳು ಹಣ ಚೆಲ್ಲುವ ಪ್ರಮಾಣ ಜನರನ್ನೂ ತಪ್ಪುದಾರಿಗೆಳೆಯುವ ಮಾಧ್ಯಮಗಳು ಚುನಾವಣಾ ಆಯೋಗವು ಜನಪ್ರೀಯ, ಹೆಚ್ಚು ವೆಚ್ಚವಿಲ್ಲದ ಜನ ಸಾಮಾನ್ಯರು ಮತ್ತು ಅವರ ಪ್ರತಿನಿಧಿಗಳು ಗೆಲ್ಲವುದಿರಲಿ ಸ್ಪರ್ಧೆ ಮಾಡುವುದೇ ಬಹಳ ಕಷ್ಟವಾಗಿದೆ.

ಜನಸಾಮಾನ್ಯರ ಪಾತ್ರ ಕೇವಲ ಓಟು ಮಾಡಲು ಮಾತ್ರ ಸೀಮಿತವಾಗಿದೆ. ತಮ್ಮ ಬೇಡಿಕೆಗಳು, ಹಕ್ಕುಗಳಿಗೆ ಹೋರಾಡುವ ಕಾರ್ಮಿಕರು ಜನವಿಭಾಗಗಳಲ್ಲಿ ಸಹ ಈ ಅಸಹ್ಯ ಪ್ರಹಸನಕ್ಕೆ ಕಾರ್ಮಿಕರು ಮೂಕ ವೀಕ್ಷಕರಾಗುತ್ತಿದ್ದಾರೆ. ಈ ಅಸಹ್ಯ ವ್ಯವಸ್ಥೆಗೆ ಎಷ್ಟು ಮಾಮೂಲು ಆಗಿಬಿಟ್ಟಿದೆ ಎಂದರೆ ದುಡಿಯುವ ವರ್ಗ ಇವನ್ನು ತಮ್ಮ ಪ್ರಜಾಪಭುತ್ವದ ಹಕ್ಕುಗಳ ಮೇಲಿನ ದಾಳಿಯೆಂದು ಪರಿಗಣಿಸದೆ. ಒಂದು ತಮಾಷೆಯ ಬೆಳವಣಿಗೆಯಾಗಿ ನೋಡುತ್ತಿದ್ದಾರೆ.

ಆಳುವ ವರ್ಗಗಳ ಪಕ್ಷಗಳಿಗೆ ಪ್ರಜಾಪ್ರಭುತ್ವ ಎಂಬುದು ತಮಗೆ ಬೇಕಾದಾಗ ಮಾತ್ರ ಬಳಸುವಂತಹುದು ಎಂಬುದು ಸ್ಪಷ್ಟವಾಗುತ್ತದೆ. ನೀತಿಗಳ ವಿರುದ್ಧವಾಗಿ ಜನ ದನಿ ಎತ್ತಿದಾಗದನ್ನು ಆಡೇರಿಸಲು ಪ್ರಜಾಸತ್ತೆಯನ್ನೂ ಇದನನ್ನೂ ನೋಡಲಾಗಿತ್ತು. ಈಗ ಬಿಜೆಪಿ ಆಳ್ವಿಕೆಯಲ್ಲಿ ನೋಡುತ್ತಿದ್ದೇವೆ. ಜೂನ್ 25 ನೇ ದಿನವನ್ನು ಪ್ರತಿ ವರ್ಷವೂ ಕರಾಳ ದಿನವನ್ನಾಗಿ ಆಚರಿಸುವ ಬಿಜೆಪಿಯು ಅದನ್ನೆ ಈಗ ಮಾಡುತ್ತಿದೆ. ತುರ್ತು ಪರಿಸ್ಥಿತಿಯನನು ಘೋಷಿಸಿದೆಯೇ.

ಪ್ರಜಾಸತ್ತೆ ಉಳಿಸುವಲ್ಲಿ ದುಡಿಯುವ ವರ್ಗದ ಪಾತ್ರ

ಒಂದು ವರ್ಗ ಸಂಘಟನೆಯಾಗಿ ಸಿಐಟಿಯು ಚುನಾವಣಾ ಸಮಯದಲ್ಲಿ ಆಮಿಷ ಒತ್ತಾಯ ಹೆದರಿಸುವುದು ಇತ್ಯಾದಿಗಳ ಮೂಲಕ ಜನರ ಪ್ರಜಾಪ್ರಭುತ್ವ ಹಕ್ಕುಗಳ ಮೇಲಾಗುವ ದಾಳಿಯ ವಿರುದ್ಧ ಹೋರಾಡಬೇಕು. ಕಾರ್ಮಿಕ ವರ್ಗವು ತಮ್ಮ



ಕಾಂ. ವರಲಕ್ಷ್ಮಿ, ಉಪಾಧ್ಯಕ್ಷರು



ಮೀನಾಕ್ಷಿ ಸುಂದರಂ, ಕಾರ್ಯದರ್ಶಿ

"ಪ್ರತಿನಿಧಿ" ಯನ್ನು ಹೊಣೆಗಾರರನ್ನಾಗಿ ಮಾಡುವ ಅವಕಾಶ ಇರುವಂತಹ ನೈಜ ಪ್ರಜಾಪ್ರಭುತ್ವ ಜನತಾ ಪ್ರಜಾಪ್ರಭುತ್ವಕ್ಕಾಗಿ ಹೋರಾಡುವಂತೆ ಅವರಲ್ಲಿ ಪ್ರಜ್ಞೆ ಮೂಡಿಸಬೇಕು.

ಓಸ್ಕೋ ವಿವಿಯ ಮೂರು ಹಿರಿಯ ಸಂಶೋಧಕರು ಮತ್ತು ಪ್ರೋಫೆಸರ್‌ಗಳು ನೂರು ವರ್ಷಗಳ ಅವಧಿಯಲ್ಲಿ 150 ದೇಶಗಳಲ್ಲಿ ನಡೆದಿರುವ ಪ್ರತಿಭಟನೆಗಳ ಕುರಿತು ವಿಶ್ಲೇಷಣೆ ನಡೆಸಿ. ಒಂದು ಕುತೂಹಲಕಾರಿ ತೀರ್ಮಾನಕ್ಕೆ ಬಂದಿದ್ದಾರೆ. ಅಕ್ಟೋಬರ್ 2019 ರಲ್ಲಿ ಹೊರ ಬಂದ ಈ ವರದಿಯ ಪ್ರಕಾರ ಕೈಗಾರಿಕಾ ಕಾರ್ಮಿಕರು ಪ್ರಜಾಸತ್ತಾ ವ್ಯವಸ್ಥೆಯ ಪ್ರತಿನಿಧಿಗಳಾಗಿದ್ದಾರೆ. ಕೈಗಾರಿಕಾ ಕಾರ್ಮಿಕರನ್ನು ಅಣಿ ನೆರೆಸಿದಲ್ಲಿ ಸರ್ವಾಧಿಕಾರತ್ವದ ವಿರುದ್ಧ ಹಾಗೂ ಪ್ರಜಾಪ್ರಭುತ್ವಕ್ಕಾಗಿ ಸಾಮೂಹಿಕ ವಿರೋಧ, ಮಾಡುವುದು ಸಹಜ ಎಂದು ವರದಿ ತಿಳಿಸುತ್ತದೆ.

ವರದಿಯು ಈ ಹೋರಾಟಗಳಲ್ಲಿ ಕೈಗಾರಿಕ ಕಾರ್ಮಿಕರು ನಗರ ಮಧ್ಯಮ ವರ್ಗ, ಗ್ರಾಮೀಣ ಕೂಲಿಗಾರರು ಜನಾಂಗೀಯ ಗುಂಪುಗಳು, ಧಾರ್ಮಿಕ ಗುಂಪುಗಳು ಇತ್ಯಾದಿ ಪ್ರಮುಖವಾಗಿ ಪಾಲ್ಗೊಂಡಿದ್ದಾರೆ ಎಂದು ತಿಳಿಸಿದೆ. "ನಮ್ಮ ಅಧ್ಯಯನದ ಅತ್ಯಂತ ಬಲವಾದ ಅಂಶ ಕೈಗಾರಿಕಾ ಕಾರ್ಮಿಕರು ನಡೆಸಿದ ಪ್ರತಿಭಟನೆಗಳು ಉಳಿದ ಎಲ್ಲಾ ಪ್ರತಿಭಟನೆಗಳಿಗಿಂತ ಪ್ರಭಾವಶಾಲಿಯಾಗಿದೆ. ಪ್ರಜಾಪ್ರಭುಯತ್ವದ ಐತಿಹಾಸಿಕ ಬೆಳವಣಿಗೆಗೆ ಕೈಗಾರಿಕೆ ಕಾರ್ಮಿಕರು ಬಹಳ ಅಗತ್ಯ ಎಂದು ನಮ್ಮ ಅಧ್ಯಯನ ಸೂಚಿಸುತ್ತದೆ.

ಸಿದ್ಧಾಂತವನ್ನು ಪುನರುಜ್ಜೀವನ ಗೊಳಿಸಿ ಕಾರ್ಯವನ್ನು ಮರುಕೇಂದ್ರೀಕರಿಸಿ ಸಂಘಟನೆಯನ್ನು ಚುರುಕುಗೊಳಿಸಿ

ಒಂದು ದಾಳಿಕೋರ ಬಂಡವಾಳಶಾಹೀ ವ್ಯವಸ್ಥೆಯು ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಹಾದಿ ಹುಡುಕಿಕೊಳ್ಳುವ ಇಂತಹ ಸಂಕೀರ್ಣ ಪರಿಸ್ಥಿತಿಯಲ್ಲಿ ಹತಾಶರಾಗಿ ಸಾಮಾನ್ಯವಾಗಿ ಕೇಳುವ ಪ್ರಶ್ನೆ "ನಾವೇನು ಮಾಡಬಲ್ಲೇವು?" ಎಂಬುದು ಕೆಲವೊಮ್ಮೆ ಪ್ರಶ್ನೆಯೇ ನಿಷ್ಕ್ರೀಯವಾಗುವುದಕ್ಕೆ ನೆಪವಾಗುತ್ತದೆ. ಆದರೆ ಇತಿಹಾಸ ನಮ್ಮನ್ನು ಪ್ರಶ್ನೆಗಳನ್ನ ಈ ರೀತಿ ಬದಲಿಸುವಂತೆ ಹೇಳುತ್ತದೆ. "ನಮ್ಮಿಂದ ಆಗಿದ್ದೇನಿದೆ?" ಮತ್ತು ನಮಗೇಕೆ ಆಗುವುದಿಲ್ಲ?" ಕಾರ್ಮಿಕರಾದ ನಾವು ಜನ ಸಾಮಾನ್ಯರ ಜೊತೆಗೂಡಿದಾಗ ನಮ್ಮಿಂದ ಆಗುದೇನಿದೆ? ಕಾರ್ಮಿಕರು, ರೈತರಾದ ನಾವು ಸಂಪತ್ತಿನ ಉತ್ಪಾದಕರಾಗಿ ಒಟ್ಟಾಗಿದ್ದರೆ ಒಟ್ಟಾಗಿ ಎದುರಿಸಲು ಸಿದ್ಧರಾದರೆ ಆ ವರ್ಗದ ದಾಳಿಕೋರರು ನಮ್ಮನ್ನು ಪದೇ ಪದೇ ಮೋಸ ಮಾಡದಂತೆ ಬಿಡದಿದ್ದರೆ ನಮ್ಮಿಂದ ಆಗುವುದೇನಿದೆ?

ಆಳುವ ವರ್ಗಗಳ ಈಗಿನ ದಾಳಿ ಅವರ ಶಕ್ತಿಯಲ್ಲಿ ಎಂಬುದನ್ನು ನಾವು ತಿಳಿದಿಕೊಳ್ಳಬೇಕು. ಅದು ಅವರ ಹತಾಶೆ ಅವರು ಬಂಡವಾಳಶಾಹಿ ವ್ಯವಸ್ಥೆಯನ್ನು ಹೇಗಾದರೂ ಉಳಿಸಿಕೊಳ್ಳಲು ಎಲ್ಲಾ ಅಸ್ತ್ರಗಳನ್ನು ಬಳಸಿ ಸುಸ್ತಾಗಿದ್ದಾರೆ ಹೀಗಾಗಿ ಈಗ ಅವರು ಇನ್ನೂ ಕಂಡುಹಿಡಿಯದಿರುವ ಹೊಸ ಅಸ್ತ್ರಗಳನ್ನು ಹುಡುಕುತ್ತಿದ್ದಾರೆ.

ನಮ್ಮಲ್ಲಿ ವೈಜ್ಞಾನಿಕವಾದ ಮತ್ತು ಅನುಭವೀ ತಂತ್ರಜ್ಞಾನದ ಶಕ್ತಿಯಿದೆ. ನಮ್ಮಲ್ಲಿ ಸಂಖ್ಯೆಯಿದೆ ಉತ್ಪಾದನಾ ಪ್ರಕ್ರಿಯೆಯಲ್ಲಿ ನಾವು ಪಾಲ್ಗೊಂಡ ಸಂಪತ್ತನ್ನು ಉತ್ಪಾದಿಸುತ್ತೇವೆ. ನಾವು ಒಟ್ಟಾಗಿದ್ದರೆ ನಮ್ಮನ್ನ ವಿವಿಧ ಹೆಸರುಗಳ ಮೂಲಕ ವಿಭಜಿಸಿ ನಮ್ಮ ಗಮನ ಬೇರೆಡೆ ಸೆಳೆಯುವ ವರ್ಗದ ಮಾಹಾನ್ ಶಿಕ್ಷಕರ ಅವರ ಶಕ್ತಿಯನ್ನು ಅರ್ಥ ಮಾಡಿಸಿದಾಗ ದುಡಿಯುವ ವರ್ಗದ ಮೇಲಾಗುವ ಎಲ್ಲಾ ದಾಳಿಗಳನ್ನು ಹಿಮ್ಮೆಟ್ಟಿಸಬಹುದು.

ಇದು ಸುಲಭ ಕಾರ್ಯವಲ್ಲ ನಿಜ ಆದರೆ ದುಡಿಯು ವರ್ಗವು ಯಾವ ಸಂಧರ್ಭದಲ್ಲಿಯೋ ಆಗಲಿ, ಹೋರಾಟ ಮತ್ತು ತ್ಯಾಗಗಳಿಲ್ಲದೆಯೇ ಏನನ್ನಾದರೂ ಸಾಧಿಸಿದೆಯೇ?

ನಾವೇನು ಮಾಡಬಲ್ಲೆವು ಎಂದು ವಾದಿಸುತ್ತಾ ನಾವುಗಳಿಸಿದ ಸಾಧನೆಗಳನ್ನು ಬಿಟ್ಟುಕೊಡಲು ನಾವು ಬಿಡಬೇಕೇ ಎಂಬುದು ಇಂದಿನ ಪ್ರಶ್ನೆ ಅಥವಾ ತಮ್ಮ ಜೀವನಕ್ಕಾಗಿ ಭಾರತವೂ ಒಳಗೊಂಡಂತೆ ವಿಶ್ವದಾದ್ಯಾಂತ ವಿರೋಚಿತವಾಗಿ ಹೋರಾಡುತ್ತಿರುವ ಸಾಮಾನ್ಯ ಕಾರ್ಮಿಕರಿಂದ ನಾವು ಕಲಿಯಲು ಉತ್ಸುಕರಾಗಿ ಸಿಐಟಿಯುನ ಸಂವಿಧಾನದ ಉದ್ದೇಶದ ಜೊತೆ ಅದನ್ನು ಜೋಡಿಸಿ ಅವರಿಗೆ ಸರಿಯಾದ ದಿಕ್ಕೂ ತೋರಿಸಲು ಮುಂದಾಗುತ್ತೇವೆಯೇ? ಇದು ನಮ್ಮ ಮುಂದಿರುವ ಪ್ರಶ್ನೆ.

ಇಂತಹ ಅತ್ಯಂತ ಪ್ರಮುಖ ಘಟ್ಟದಲ್ಲಿ ನಮ್ಮ ಸಂಘಟನೆಯ ಕರ್ತೃಗಳಾದ ದುಡಿಯುವ ವರ್ಗದ ಚೇತನಗಳಾದ ಸಂಗಾತಿ ಬಿ.ಟಿ. ರಣದಿವೆ, ಪಿ. ರಾಮಮೂರ್ತಿ ಇನ್ನಿತರ ಮಹಾನ್ ವ್ಯಕ್ತಿಗಳು ಬಿಟ್ಟು ಹೋದ ಹಾದಿಯಲ್ಲಿ-ವರ್ಗ ಹೋರಾಟ ಇಡೀ ದುಡಿಯುವ ವರ್ಗವನ್ನು ಅವರ ಧರ್ಮ, ಜಾತಿ, ಪ್ರದೇಶ, ಭಾಷೆ, ಯಾವುದೇ ಇರಲಿ ಒಗ್ಗೂಡಿಸುವುದು ಸಾಗೋಣ. ಈ ಹಾದಿಯಲ್ಲಿ ಅಡ್ಡ ಬರುವ ಎಲ್ಲವನ್ನು ಪೌರತ್ವ ಕಾಯಿದೆ ಇರಲಿ, ಕಾರ್ಮಿಕ ಕೋಡ್ ಗಳಿರಲಿ ಕಿತ್ತೆಸೆಯೋಣ.

ನಮ್ಮ ಸಂಘಟನೆಯ ಸುವರ್ಣ ಮಹೋತ್ಸವದ ಈ ಸಂದರ್ಭದಲ್ಲಿ ನಮ್ಮ ಸಂಘಟನೆಯ ಧ್ಯೇಯ ಸಾಧಿಸಲು ಪಣ ತೊಡೋಣ. ನಾವು ತೆಗೆದುಕೊಂಡಿರುವ ನಿರ್ಧಾರಗಳನ್ನು ಮೇ 30, 2020 ರೊಳಗೆ ನಮ್ಮ ಸದಸ್ಯತ್ವ ಒಂದು ಕೋಟಿ ಮುಟ್ಟುವಂತೆ ಪಣ ತೊಡೋಣ ಈ ಸಮ್ಮೇಳನವು ಈ ನಿಟ್ಟಿನಲ್ಲಿ ನಿರ್ಧಾರಗಳನ್ನು ಕೈಗೊಳ್ಳುತ್ತದೆ ಎಂಬ ನಂಬಿಕೆ ನನಗಿದೆ.

ಸಂಗಾತೀಗಳೆ ನಾವು ಹೋರಾಡೋಣ,

ಗೆಲುವು ನಮ್ಮದೇ.

ಆಹಾರ ಧಾನ್ಯಗಳಲ್ಲಿ ಬೆಲೆಯುಬ್ಬರ ಏಕಾಗುತ್ತಿದೆ?



ಹಾಲಿ ಎದುರಾಗಿರುವ ಆಹಾರ ವಸ್ತುಗಳ ಬೆಲೆಯುಬ್ಬರವು ಕೃಷಿ ಸರಕುಗಳ ಸರಬರಾಜಿನಲ್ಲಿರುವ ಸಾಂಸ್ಥಿಕ ಬಿಕ್ಕಟ್ಟಿನ ಪರಿಣಾಮವಾಗಿದೆ.

ಗೋಧಿಯ ಆಪತ್ಕಾಲಿನ ಸಂಗ್ರಹ 27.5 ದಶಲಕ್ಷ ಟನ್ನುಗಳೆಂದು ನಿಗದಿಯಾಗಿದ್ದರೂ 2019ರ ಜುಲೈ ವೇಳೆಗೆ 45.8 ದಶಲಕ್ಷ ಟನ್ನುಗಳಷ್ಟು ಗೋಧಿ ಸಂಗ್ರಹವಾಗಿದೆ.. ಹಾಗೆಯೇ ಅಗತ್ಯವಿದ್ದ ಅಕ್ಕಿ ಸಂಗ್ರಹ 13.5 ದಶಲಕ್ಷ ಟನ್ನುಗಳಷ್ಟೇ ಆಗಿದ್ದರೂ ಅದರ ಎರಡು ಪಟ್ಟು ಸಂಗ್ರಹವಾಗಿದೆ. ಹೀಗಾಗಿ ಇಂದು ಭಾರತವು ಅಗತ್ಯಕ್ಕಿಂತ ಅಧಿಕ ಧಾನ್ಯ ಸಂಗ್ರಹವಾಗಿರುವ ದೇಶವಾಗಿದೆ. ಹಾಗಿದ್ದರೂ ಆಹಾರ ಧಾನ್ಯಗಳಲ್ಲಿ ಬೆಲೆಯುಬ್ಬರ ಏಕಾಗುತ್ತಿದೆ? ಇದು ಸರ್ಕಾರದ ಅತಾರ್ಕಿಕ ಧಾನ್ಯ ಸಂಗ್ರಹ ನೀತಿಯಿಂದ ಪರಿಣಮಿಸಿದೆಯೇ? ಈ ಸಂದರ್ಭದಲ್ಲ ಹಲವು ಮೂಲಭೂತ ಪ್ರಶ್ನೆಗಳು ಮೇಲೇಳುತ್ತವೆ.

–ಇಕೊನೊಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ(ಇಪಿಡಬ್ಲ್ಯು) ಸಂಪಾದಕೀಯ, ಜನವರಿ 25

ಅನು: ಶಿವಸುಂದರ್

2019ರ ಡಿಸೆಂಬರ್ ನಲ್ಲಿ ಆಹಾರ ಬಳಕೆ ಸರಕುಗಳ ಬೆಲೆಯುಬ್ಬರವು ಶೇ.14.12ಕ್ಕೇರಿತು. ಇದು ಕಳೆದ ಆರುವರ್ಷಗಳಲ್ಲೇ ಸಂಭವಿಸಿರುವ ಅತ್ಯಧಿಕ ಹಣದುಬ್ಬರವಾಗಿದೆ. ಹಾಗು ಇದರಿಂದಾಗಿ ದೇಶದ ಚಿಲ್ಲರೆ ಹಣದುಬ್ಬರವೂ ಹೆಚ್ಚಾಗಿದೆ. ಅದೇನೇ ಇದ್ದರೂ ಕೀಲಕ ಹಣದುಬ್ಬರದ ದರವು ರಿಸರ್ವ ಬ್ಯಾಂಕ್ ವಿಧಿಸಿರುವ ಸರಾಸರಿ ಶೇ.4(+/–2)ರ ಗಡಿಯನ್ನು ಇನ್ನೂ ದಾಟಿಲ್ಲವಾದ್ದರಿಂದ ಬರುವ ತಿಂಗಳಲ್ಲಿ ರಿಸರ್ವ್ ಬ್ಯಾಂಕಿನ ಹಣಕಾಸು ನೀತಿ ಸಮಿತಿಯು ಮತ್ತೊಮ್ಮೆ ಸಾಲ ನೀಡಿಕೆ ದರದಲ್ಲಿ ಕಡಿತವನ್ನು ಘೋಷಿಸುತ್ತದೆಯೇ ಎಂಬ ಬಗ್ಗೆ ಅಪಾರವಾದ ಊಹಾಪೋಹಗಳೆದ್ದಿವೆ. ಇದು ರಿಸರ್ವ ಬ್ಯಾಂಕಿನ ನೀತಿ ನಿರೂಪಕರಿಗೆ ಅತ್ಯಂತ ತಲೆನೋವಿನ ಸಂಗತಿಯೂ ಆಗಿದೆ. ಏಕೆಂದರೆ ಸರಾಸರಿಯ ಮಿತಿಗಿಂತ ಹಣದುಬ್ಬರವನ್ನು ಹೆಚ್ಚಿಸುವ ನೀತಿಯು ಅಭಿವೃದ್ಧಿಯನ್ನು ಕುಸಿಯುವಂತೆ ಮಾಡುವುದಲ್ಲದೆ ಅದನ್ನು ಸರ್ಕಾರದ ಶಿಥಿಲ ವಿತ್ತೀಯ ಪರಿಸ್ಥಿಯನ್ನು ಆಧರಿಸಿಯೇ ಮಾಡಬೇಕಿದೆ. ಅಷ್ಟು ಮಾತ್ರವಲ್ಲದೆ, ವಿತ್ತೀಯ ಕೊರತೆಯಂಥ ವಿಷಯಗಳನ್ನೂ ಒಳಗೊಂಡಂತೆ ಸರ್ಕಾರದ ಹಲವಾರು ಪ್ರಮುಖ ಆರ್ಥಿಕ ಅಂದಾಜುಗಳು ತಾಳಮೇಳವಿಲ್ಲದಂತೆ ಅಂದಾಜಿಸಲ್ಪಡುತ್ತಿವೆ.

ಭಾರತದ ಮಹಾಲೇಖಪಾಲರು ಕಳೆದೆರಡು ವರ್ಷಗಳ ಕೇಂದ್ರ ಸರ್ಕಾರದ ವಿತ್ತೀಯ ಕೊರತೆಯ ಅಂದಾಜುಗಳಲ್ಲಿರುವ ವ್ಯತ್ಯಾಸಗಳ ಬಗ್ಗೆ ತೀವ್ರವಾದ ಆಕ್ಷೇಪವನ್ನು ವ್ಯಕ್ತಪಡಿಸಿದ್ದಾರೆ. ಅವರ ಪ್ರಕಾರ ಕಳೆದೆರಡು ವರ್ಷಗಳ ವಿತ್ತೀಯ ಕೊರತೆಯನ್ನು ಶೇ.1.5 ಮತ್ತು ಶೇ.2 ಎಂದು ತಪ್ಪಾಗಿ ತೋರಿಸಲಾಗಿದೆ. ಏಕೆಂದರೆ ಅದರಲ್ಲಿ ಬಜೆಟ್ಟಿನ ಹೊರಗಡೆ ರಾಷ್ಟ್ರೀಯ ಸಣ್ಣ ಉಳಿತಾಯ ನಿಧಿಗಳಂತಹ ಸಾರ್ವಜನಿಕ ಖಾತೆಗಳಿಂದ ಮಾಡಿದ ಸಾಲಗಳನ್ನು ತೋರಿಸಿಯೇ ಇಲ್ಲ. ಮಾಧ್ಯಮಗಳ ವರದಿಗಳ ಪ್ರಕಾರ ಹಾಲಿ ಸರ್ಕಾರವು ಈ ಬಗೆಯಲ್ಲಿ ಮಾಡಿರುವ ಬಜೆಟ್ಟೇತರ ವೆಚ್ಚ 2019–20ರಲ್ಲಿ 1.5 ಲಕ್ಷ ಕೋಟಿಯಷ್ಟಾಗಿತ್ತು. ಮತ್ತು ಆತಂಕಕಾರಿ ಸಂಗತಿಯೆಂದರೆ ಹೆಚ್ಚುವರಿಯಾಗಿ ಮಾಡಿರುವ ಬಜೆಟ್ಟೇತರ ವೆಚ್ಚಗಳಲ್ಲಿ ಮುಕ್ಕಾಲು ಭಾಗ ಭಾರತ ಆಹಾರ ನಿಗಮಕ್ಕೆ ನೀಡಬೇಕಿರುವ ಸಬ್ಸಿಡಿ ಬಾಕಿಯದ್ದಾಗಿದೆ.

ಕಳೆದ ಆರು ವರ್ಷಗಳಲ್ಲಿ ಭಾರತದ ಆಹಾರ ಸಬ್ಸಿಡಿಯ ಮೊತ್ತ ಹೆಚ್ಚೂ ಕಡಿಮೆ ದ್ವಿಗುಣಗೊಂಡಿದ್ದರೂ ಕೇಂದ್ರ ಸರ್ಕಾರದ ಬಜೆಟ್ಟಿನ ದಸ್ತಾವೇಜುಗಳಲ್ಲಿ ಅದಕ್ಕಾಗಿ ತೋರಿಸಿರುವ ಮೊತ್ತ ಅತ್ಯಲ್ಪ. ಉದಾಹರಣೆಗೆ 2019–20ರಲ್ಲಿ ಕೇಂದ್ರ ಸರ್ಕಾರವು ಆಹಾರದ ಸಬ್ಸಿಡಿಗಾಗಿ 1.84 ಲಕ್ಷ ಕೋಟಿ ರೂಗಳನ್ನು ಎತ್ತಿಟ್ಟಿತ್ತು. ಆದರೆ ಈಗಾಗಲೇ ಕೇಂದ್ರ ಸರ್ಕಾರವು ಆಹಾರ ನಿಗಮಕ್ಕೆ 1.86 ಲಕ್ಷ ಕೋಟಿ ರೂ. ಬಾಕಿ ಉಳಿಸಿಕೊಂಡಿದೆ. ಈ ಏರುತ್ತಲೇ ಇರುವ ಬಾಕಿಗಾಗಿ ಹಾಲಿ ಸರ್ಕಾರವು ಸತತವಾಗಿ ಆಹಾರ ನಿಗಮದ ಆಯ–ವ್ಯಯದ ಲೆಕ್ಕವನ್ನು ಏರುಪೇರು ಮಾಡಿ ತೋರಿಸುತ್ತಾ ಬಂದಿದೆ. ಲೆಕ್ಕಗಳಲ್ಲಿ ಹೊಂದಾಣಿಕೆ ಮಾಡುತ್ತಾ ಆಹಾರ ಸಬ್ಸಿಡಿ ಮೊತ್ತವನ್ನು ಸಣ್ಣ ಉಳಿತಾಯ ನಿಧಿಯಿಂದ ಪಡೆದುಕೊಂಡ ಸಾಲವಾಗಿ ತೋರಿಸುತ್ತಾ ಆಹಾರ ನಿಗಮವನ್ನು ಸಾಲದ ಸುಳಿಗೆ ಸಿಕ್ಕಿಸಿದೆ. ಪರಿಣಾಮವಾಗಿ ಕಳೆದ ಮೂರು ವರ್ಷಗಳಿಂದ ಅಹಾರ ನಿಗಮವು ಬಜೆಟ್ಟಿನಿಂದಾಚೆಗೆ ಸಣ್ಣ ಉಳಿತಾಯ ನಿಧಿಯಿಂದ ಪಡೆದುಕೊಳ್ಳುತ್ತಿರುವ ಸಾಲ ಏರುತ್ತಲೇ ಹೋಗುತ್ತಿದೆ. ಇದು ಆಹಾರ ನಿಗಮವು 2018–19ರ ಸಾಲಿನಲ್ಲಿ ಹೊರಬೇಕಾಗಿ ಬಂದ ಹೆಚ್ಚುವರಿ ಸಾಲದ ಶೇ.70 ಭಾಗವಾಗುತ್ತದೆ.

ಸಬ್ಸಿಡೀ ಖಾತೆಯಲ್ಲಿ ಹೇರಾಫೇರಿ ನಡೆಸುವುದು ಸರ್ಕಾರಗಳಿಗೆ ಹೊಸದೇನಲ್ಲ ಎಂದು ಕೆಲವರು ವಾದಿಸಬಹುದಾದರೂ ಹಿಂದೆಂದೂ ಈ ಪ್ರಮಾಣದಲ್ಲೂ ನಡೆದಿರಲಲ್ಲ ಎಂಬುದನ್ನಾಗಲೀ, ವಿತ್ತೀಯ ಕೊರತೆಯಂತ ಆರ್ಥಿಕತೆಯ ಮಹತ್ವದ ಸೂಚಕಗಳಲ್ಲಿ ಕೃತಕ ಇಳಿಕೆಯನ್ನು ತೋರಿಸುವ ಸಲುವಾಗಿ ಇಂಥವು ಎಂದೂ ನಡೆದಿರಲಿಲ್ಲ ಎಂಬುದನ್ನು ಮಾತ್ರ ಯಾರೂ ಅಲ್ಲಗೆಳೆಯಲು ಸಾಧ್ಯವಿಲ್ಲ. ಇಂತಹ ವಿರೂಪಗೊಂಡ ಅಂಕಿಅಂಶಗಳನ್ನು ಆಧರಿಸಿ ಯಾವುದೇ ಬಗೆಯ ಹಣದುಬ್ಬರ ಗುರಿಗಳನ್ನು ಹಾಕಿಕೊಳ್ಳುವ ನೀತಿ ನಿರೂಪಣೆಗಳು ಪ್ರಶ್ನಾರ್ಹವಾಗುವುದಲ್ಲದೆ ಹಣದುಬ್ಬರದ ಅದರಲ್ಲೂ ಅಹಾರ ಸರಕಿನ ಹಣದುಬ್ಬರ ನಿರ್ವಹಣೆಯ ವಿಷಯದಲ್ಲಿ ಸರ್ಕಾರದ ರಾಜಕೀಯ ಉದ್ದೇಶವೇನೆಂಬುದೇ ಪ್ರಶ್ನಾರ್ಹವಾಗಿದೆ. ಎಂದಿನಂತೆ ಋತುಮಾನಕ್ಕೆ ವ್ಯತಿರಿಕ್ತವಾಗಿ ಸುರಿದ ಭಾರಿ ಮಳೆಯಿಂದಾಗಿ ಬೆಳೆನಾಶ ಆಗಿರುವುದೇ ಈ ವ್ಯತ್ಯಯಗಳಿಗೆ ಕಾರಣವೆಂದೂ ಹೊಸ ಬೆಳೆಯು ಮಾರುಕಟ್ಟೆಯನ್ನು ಪ್ರವೇಶಿಸಿದ ಕೂಡಲೇ ಹಣದುಬ್ಬರವು ನಿಯಂತ್ರಣಕ್ಕೆ ಬರುತ್ತದೆಂದು ವಾದಿಸುತ್ತಾ ಕೃಷಿ ಸರಕು ಸರಬರಾಜು ವಲಯದ ಸಮಸ್ಯೆಗಳನ್ನು ಪಕ್ಕಕ್ಕೆ ಸರಿಸಲಾಗುತ್ತಿದೆ. ಈ ವಾದವು ಕಳೆದ ವರ್ಷದ ರಾಬಿ ಋತುವಿನಲ್ಲಿ ಅತ್ಯಂತ ಕಡಿಮೆ ಬೆಳೆ ಬಂದಿದ್ದರಿಂದ ಕಳೆದ ನವಂಬರ್–ಡಿಸೆಂಬರ್‌ಗಳಲ್ಲಿ ಶೇ.200ರಷ್ಟು ಬೆಲೆ ಏರಿಕೆಯಾದ ಈರುಳ್ಳಿಯ ವಿಷಯಕ್ಕೆ ಅನ್ವಯವಾಗಬಹುದು. ಆದರೆ ಅದು ಗೋಧಿ ಮತ್ತು ದ್ವಿದಳ ಧಾನ್ಯಗಳ ಬೆಲೆಯುಬ್ಬರವನ್ನು ವಿವರಿಸುವುದಿಲ್ಲ.

ಇಂದು ಆಹಾರ ನಿಗಮದ ಗೋಡೋನುಗಳಲ್ಲಿ ಆಪತ್ಕಾಲಿನ ಸಂಗ್ರಹಕ್ಕೆ ವಿಧಿಸಲಾದ ಮಿತಿಗಿಂತಲೂ ಹೆಚ್ಚಿನ ಧಾನ್ಯಗಳನ್ನು ಸರ್ಕಾರ ಸಂಗ್ರಹಿಸಿಟ್ಟಿದೆ. ಉದಾಹರಣೆಗೆ ಗೋಧಿಯ ಆಪತ್ಕಾಲಿನ ಸಂಗ್ರಹ 27.5 ದಶಲಕ್ಷ ಟನ್ನುಗಳೆಂದು ನಿಗದಿಯಾಗಿದ್ದರೂ 2019ರ ಜುಲೈ ವೇಳೆಗೆ 45.8 ದಶಲಕ್ಷ ಟನ್ನುಗಳಷ್ಟು ಗೋಧಿ ಸಂಗ್ರಹವಾಗಿದೆ.. ಹಾಗೆಯೇ ಅಗತ್ಯವಿದ್ದ ಅಕ್ಕಿ ಸಂಗ್ರಹ 13.5 ದಶಲಕ್ಷ ಟನ್ನುಗಳಷ್ಟೇ ಆಗಿದ್ದರೂ ಅದರ ಎರಡು ಪಟ್ಟು ಸಂಗ್ರಹವಾಗಿದೆ. ಹೀಗಾಗಿ ಇಂದು ಭಾರತವು ಅಗತ್ಯಕ್ಕಿಂತ ಅಧಿಕ ಧಾನ್ಯ ಸಂಗ್ರಹವಾಗಿರುವ ದೇಶವಾಗಿದೆ. ಹಾಗಿದ್ದರೂ ಆಹಾರ ಧಾನ್ಯಗಳಲ್ಲಿ ಬೆಲೆಯುಬ್ಬರ ಏಕಾಗುತ್ತಿದೆ? ಇದು ಸರ್ಕಾರದ ಅತಾರ್ಕಿಕ ಧಾನ್ಯ ಸಂಗ್ರಹ ನೀತಿಯಿಂದ ಪರಿಣಮಿಸಿದೆಯೇ? ಈ ಸಂದರ್ಭದಲ್ಲ ಹಲವು ಮೂಲಭೂತ ಪ್ರಶ್ನೆಗಳು ಮೇಲೇಳುತ್ತವೆ.

ಮೊದಲನೆಯದಾಗಿ ಆಹಾರ ನಿಗಮವು ರೈತರಿಂದ ಅಹಾರ ಧಾನ್ಯಗಳನ್ನು ಖರೀದಿಸುವುದಕ್ಕೆ ಮತ್ತು ಸಂಗ್ರಹಿಸಿಡುವುದಕ್ಕೆ ತಗಲುವ ಆರ್ಥಿಕ ವೆಚ್ಚವು ಅದನ್ನು ಸಾರ್ವಜನಿಕ ಪಡಿತರ ವ್ಯವಸ್ಥೆಯಲ್ಲಿ ಹಂಚುವ ದರದ 12 ಪಟ್ಟಿಗಿಂತ ಹೆಚ್ಚಿದೆ. ಉದಾಹರಣೆಗೆ ಗೋಧಿಯ ಸಂಗ್ರಹ ವೆಚ್ಚ ಪ್ರತಿ ಕೆಜಿಗೆ 35 ರೂ.ಗಳಾದರೂ ಅದನ್ನು ಪಡಿತರ ವ್ಯವಸ್ಥೆಯಲ್ಲಿ ಕೇವಲ ಕೆಜಿಗೆ 3 ರೂಗಳಂತೆ ಹಂಚಲಾಗುತ್ತಿದೆ. ಹಾಗೆಯೇ ಅಕ್ಕಿಯ ಸಂಗ್ರಹ ವೆಚ್ಚ ಕೆಜಿಗೆ 25 ರೂ.ಗಳಾದರೂ ಅದರ ಪಡಿತರ ವಿತರಣಾ ಬೆಲೆ ಮಾತ್ರ ಕೆಜಿಗೆ ಕೇವಲ 2 ರೂ.ಗಳಾಗಿವೆ. ಹೀಗಾಗಿ ಹೆಚ್ಚೆಚ್ಚು ಸಂಗ್ರಹವನ್ನು ಪೇರಿಸಿಟ್ಟುಕೊಳ್ಳುವುದೆಂದರೆ ಹೆಚ್ಚೆಚ್ಚು ಸಬ್ಸಿಡಿಯನ್ನು ತೆರಬೇಕಾಗುತ್ತದೆಂದೇ ಅರ್ಥವಾಗಿದೆ. ಎರಡನೆಯದಾಗಿ, ಆಹಾರ ಸಂಗ್ರಹಗಳ ತಾತ್ಕಾಲಿಕ ಬಿಡುಗಡೆಯಿಂದ ಎದುರಾಗಿರುವ ಪರಿಸ್ಥಿತಿಗೆ ಯಾವ ಪರಿಹಾರವು ಸಿಗುವುದಿಲ್ಲ. ಅದರಿಂದ ಸಬ್ಸಿಡಿ ಮೊತ್ತ ಗಗನಕ್ಕೇರುತ್ತದೆ. ಆದರೆ ಅದು ಆಳುವ ಸರ್ಕಾರಕ್ಕೆ ಒಂದಷ್ಟು ರಾಜಕೀಯ ಲಾಭವನ್ನಂತೂ ತಂದುಕೊಡುತ್ತದೆ. ಮೂರನೆಯದಾಗಿ, ಈ ಹಿನ್ನೆಲೆಯಲ್ಲಿ ಬಜೆಟ್ಟೇತರ ಸಾಲಗಳು ಹಲವಾರು ರಾಜಕೀಯ ಉದ್ದೇಶಗಳನ್ನೂ ಈಡೇರಿಸಬಹುದಾಗಿದೆ. ಇದು ಭಾರತದ ಆಯವ್ಯಯದಲ್ಲಿ ಸಬ್ಸಿಡಿ ಮೊತ್ತವು ಶೇ.1ಕ್ಕಿಂತ ಕಡಿಮೆ ಇದೆ ಎಂದು ಬಿಂಬಿಸುವ ಸಾಮರ್ಥ್ಯವನ್ನು ತಂದುಕೊಡುತ್ತದೆ. ಆ ಮೂಲಕ ಎರಡು ಗಂಭೀರ ಸಂಗತಿಗಳಿಂದ ಜನರ ಗಮನವನ್ನು ಬೇರೆಡೆಗೆ ಸೆಳೆಯಲಾಗುತ್ತಿದೆ. ಮೊದಲನೆಯದು ಆಹಾರ ನಿಗಮದ ಹಣಕಾಸು ಪರಿಸ್ಥಿತಿ ಹದಗೆಡುತ್ತಿರುವುದು ಹಾಗೂ ಎರಡನೆಯದು ವಿತ್ತೀಯ ಕೊರತೆಯ ಕೆಳ ಅಂದಾಜು.

ಒಂದು ಅಸಮರ್ಥ ಸರಬರಾಜು ವ್ಯವಸ್ಥೆಯ ಬಳಕೆಯೇ ಇಷ್ಟೊಂದು ಅನುಕೂಲಕಾರಿಯಾಗಿರುವಾಗ ಕೃಷಿಯು ಎದುರಿಸುತ್ತಿರುವ ಸರಬರಾಜು ವಲಯದ ಆತಂಕಗಳನ್ನು ನಿವಾರಿಸಲು ಸರ್ಕಾರ ಏಕೆ ಮುಂದಾದೀತು? ಅಲ್ಲದೆ ಕೃಷಿ ಬೆಳೆ ಪದ್ಧತಿಯನ್ನು ಹೆಚ್ಚು ಬೆಲೆ ಸರಕಿನ ಕೃಷಿಯ ಕಡೆ ಕೊಂಡೊಯ್ಯುವ ಮತ್ತು ರೈತಾಪಿಯ ಆದಾಯವನ್ನು ದ್ವಿಗುಣಗೊಳಿಸುವ ಆಡಂಬರದ ಮಾತುಗಳು ಮತದಾರರನ್ನು ಸೆಳೆಯಲು ಯಶಸ್ವಿಯಾಗಿರುವಾಗ ನೀರಿನಾಶ್ರಯ ಇರುವ ಮತ್ತು ದ್ವಿದಳ ಧಾನ್ಯ ಕೃಷಿ ತೀವ್ರವಾಗಿರುವ ರಾಜ್ಯಗಳಲ್ಲಿ ಭಿನ್ನ ಬೆಳೆಗಳನ್ನು ಬೆಳೆಯಬೇಕೆಂಬ 2015ರ ಶಾಂತಕುಮಾರ್ ಸಮಿತಿಯ ಶಿಫಾರಸ್ಸುಗಳು ಮತ್ತದರ ಅನುಷ್ಠಾನಗಳು ಹೇಗೆ ಆಕರ್ಷಕವಾಗಿ ಕಂಡೀತು?

ಮೇಲಾಗಿ ಗಂಭೀರ ಪ್ರಮಾಣದ ಅಹಾರ ಧಾನ ಬೆಲೆಯುಬ್ಬರವನ್ನು ಅನುಮೋದಿತವಾದ ಹಣದುಬ್ಬರದ ಮುಸುಕಿನಲ್ಲಿ ಮುಚ್ಚಿಡುವ ಅವಕಾಶವನ್ನು ಯಾವ "ಗ್ರಾಹಕ ಸ್ನೇಹೀ" ಸರ್ಕಾರ ತಾನೇ ಕಳೆದುಕೊಂಡೀತು? ಆದರೆ ಈ ಸರ್ಕಾರದ ಗ್ರಾಹಕ ಸ್ನೇಹಿತನವನ್ನು ಪ್ರತಿಪಾದನೆ ಮಾಡುತ್ತಿರುವವರು ಅರ್ಥಮಾಡಿಕೊಳ್ಳಬೇಕಾದ ವಿಷಯವೇನೆಂದರೆ ಈ ಅನುಮೋದಿಸಲಾದ ಹಣದುಬ್ಬರ ಮಿತಿಯ ಗ್ರಹಿಕೆಯು ಸಾಮಾನ್ಯ ಗ್ರಾಹಕರ ಉಳಿತಾಯವನ್ನು ಆಧರಿಸಿ ಅಂದಾಜಿಸಲಾಗುತ್ತದೆ. ಆದರೆ ಆ ಉಳಿತಾಯವನ್ನು ಕೂಡಾ ಸರ್ಕಾರದ ತನ್ನ ಲಾಭಕ್ಕಾಗಿ ತಪ್ಪಾಗಿ ಬಳಕೆ ಮಾಡಿಕೊಳ್ಳುತ್ತಿದೆ.



ಸಬ್ಸಿಡೀ ಖಾತೆಯಲ್ಲಿ ಹೇರಾಫೇರಿ ನಡೆಸುವುದು ಸರ್ಕಾರಗಳಿಗೆ ಹೊಸದೇನಲ್ಲ ಎಂದು ಕೆಲವರು ವಾದಿಸಬಹುದಾದರೂ ಹಿಂದೆಂದೂ ಈ ಪ್ರಮಾಣದಲ್ಲೂ ನಡೆದಿರಲ್ಲು ಎಂಬುದನ್ನಾಗಲೀ, ವಿತ್ತೀಯ ಕೊರತೆಯಂತ ಆರ್ಥಿಕತೆಯ ಮಹತ್ವದ ಸೂಚಕಗಳಲ್ಲಿ ಕೃತಕ ಇಳಿಕೆಯನ್ನು ತೋರಿಸುವ ಸಲುವಾಗಿ ಇಂಥವು ಎಂದೂ ನಡೆದಿರಲಿಲ್ಲ ಎಂಬುದನ್ನು ಮಾತ್ರ ಯಾರೂ ಅಲ್ಲಗೆಳೆಯಲು ಸಾಧ್ಯವಿಲ್ಲ. ಇಂತಹ ವಿರೂಪಗೊಂಡ ಅಂಕಿಅಂಶಗಳನ್ನು ಆಧರಿಸಿ ಯಾವುದೇ ಬಗೆಯ ಹಣದುಬ್ಬರ ಗುರಿಗಳನ್ನು ಹಾಕಿಕೊಳ್ಳುವ ನೀತಿ ನಿರೂಪಣೆಗಳು ಪ್ರಶ್ನಾರ್ಹವಾಗುವುದಲ್ಲದೆ ಹಣದುಬ್ಬರದ ಅದರಲ್ಲೂ ಅಹಾರ ಸರಕಿನ ಹಣದುಬ್ಬರ ನಿರ್ವಹಣೆಯ ವಿಷಯದಲ್ಲಿ ಸರ್ಕಾರದ ರಾಜಕೀಯ ಉದ್ದೇಶವೇನೆಂಬುದೇ ಪ್ರಶ್ನಾರ್ಹವಾಗಿದೆ.



ನಾಜಿಗಳ ‘ಅಂತಿಮ ಪರಿಹಾರ’ದ (ಫೈನಲ್ ಸೊಲ್ಯುಶನ್) ಯೋಜನೆ ಯುರೋಪಿನ ಮೂರನೆಯ–ಎರಡಷ್ಟು ಯೆಹೂದಿಯರನ್ನು ನಿರ್ಮೂಲನ ಮಾಡಿತು. ಯುರೋಪಿನ ಯೆಹೂದಿಯರನ್ನು ನಿರ್ಮೂಲನ ಮಾಡಲು ಹಿಟ್ಲರ್ ನೇತೃತ್ವದ ನಾಜಿ ಪಕ್ಷವು, ಒಂದು ನಿರ್ಧಾರವನ್ನು ತೆಗೆದುಕೊಳ್ಳಲಿಲ್ಲ. ಬದಲಾಗಿ, ಅವರು ಅಧಿಕಾರಕ್ಕೆ ಬಂದ ಸಮಯದಿಂದ, ಅದಕ್ಕಾಗಿ ಸೂಕ್ತ ನೀತಿಗಳ, ಕ್ರಮಗಳ ಮತ್ತು ಕಾನೂನುಗಳ ಒಂದು ಸರಣಿಯನ್ನು ರೂಪಿಸಿ ಜಾರಿಗೊಳಿಸಿದರು. ಇದರ ಭಾಗವಾಗಿ ಯೆಹೂದಿಯರನ್ನು ಮೊದಲು ಹೇಗೆ ಪ್ರತ್ಯೇಕಿಸಲಾಯಿತು, ನಂತರ ಬಹಿಷ್ಕರಿಸಲಾಯಿತು ಮತ್ತು ಆನಂತರ ‘ಅಮಾನವೀಯ’ಗೊಳಿಸಲಾಯಿತು, ಕೊನೆಗೆ ಹೇಗೆ ಕೊಲ್ಲಲಾಯಿತು ಎಂಬುದನ್ನು ನೆನಪಿಸಿಕೊಳ್ಳಬೇಕು. ಒಂದು ಸಮುದಾಯದ ನರಮೇಧದ ಹಲವು ಹಂತಗಳ ಈ ಭೀಕರ ಚರಿತ್ರೆ ಮರೆಯುವಂತಹದ್ದಲ್ಲ. ಇದು ಯಾವುದೇ ಇತರ ಸಮುದಾಯಕ್ಕೆ ಮರುಕಳಿಸಬಾರದು. ಇಂತಹ ಕ್ರಮಗಳನ್ನು ಕೈಗೊಳ್ಳುವುದರಿಂದ ಮಾತ್ರ ‘ಯೆಹೂದಿ ನರಮೇಧ’ದಲ್ಲಿ ಬಲಿಯಾದವರ ನೆನಪಿಗೆ ಅರ್ಥಪೂರ್ಣ ಗೌರವ ಸಲ್ಲಿಸಿದಂತಾಗುತ್ತದೆ.

‘ಯೆಹೂದಿ ನರಮೇಧ 75’

60 ಲಕ್ಷ ಯೆಹೂದಿಗಳ ನರಮೇಧ 1933–45 ಅವಧಿಯಲ್ಲಿ ಹೇಗಾಯಿತು?

ಜಗದ ಸುತ್ತ


ನಾಗರಾಜ ನಂಜುಂಡಯ್ಯ

ಈ ಜನವರಿ 27 ರಂದು, ಪೋಲೆಂಡಿನಲ್ಲಿರುವ ‘ಆಶ್ವಿಟ್ಜ್’ ಯಾತನಾ ಶಿಬಿರವಾಸಿಗಳು ಸೋವಿಯೆಟ್ ಕೆಂಪು ಸೇನೆಯಿಂದ, ವಿಮೋಚನೆ ಹೊಂದಿದ ದಿನದ 75ನೇ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಈಗ ಅದನ್ನು ‘ಅಂತರರಾಷ್ಟ್ರೀಯ ಯೆಹೂದಿ ನರಮೇಧ ನೆನಪಿನ ದಿನ" ವೆಂದು ಆಚರಿಸಲಾಗುತ್ತಿದೆ. ಸುಮಾರು 55 ರಿಂದ 60 ಲಕ್ಷ ಜನ ಈ ಯೆಹೂದಿ ನರಮೇಧದಲ್ಲಿ ಕೊಲ್ಲಲ್ಪಟ್ಟರು. ಆಶ್ವಿಟ್ಜ್ ಸಂಕೀರ್ಣದ ಯಾತನಾ ಶಿಬಿರ (ಕಾನ್ಸೆಂಟ್ರೇಶನ್ ಕ್ಯಾಂಪ್) ವೊಂದರಲ್ಲೇ ಸುಮಾರು 9.6 ಲಕ್ಷ ಜನರು, ಅದರಲ್ಲಿ ಬಹುತೇಕ ಎಲ್ಲರೂ ಯೆಹೂದಿ ಸಮುದಾಯುದವರೇ ಸಾವನ್ನಪ್ಪಿದ್ದರು ಎಂದು ದಾಖಲಾಗಿದೆ. ಲಕ್ಷಾಂತರ ಯೆಹೂದಿಗಳನ್ನು ನಾಜಿಗಳು ‘ನಿರ್ಮೂಲನ’ (ಸಾಮಾನ್ಯವಾಗಿ ವಿನಾಶಕಾರಿ ಕೀಟಗಳಿಗೆ ಬಳಸುವ ಶಬ್ದ) ಮಾಡಿದ್ದರ ಕುರಿತು ಅರಿಯಲು, ಯೆಹೂದಿಗಳನ್ನು ಮೊದಲು ಹೇಗೆ ಪ್ರತ್ಯೇಕಿಸಲಾಯಿತು, ನಂತರ ಬಹಿಷ್ಕರಿಸಲಾಯಿತು ಮತ್ತು ಆನಂತರ ಅಮಾನವೀಯ ಗೊಳಿಸಲಾಯಿತು, ಕೊನೆಗೆ ಹೇಗೆ ಕೊಲ್ಲಲಾಯಿತು ಎಂಬುದನ್ನು ನೆನಪಿಸಿಕೊಳ್ಳಬೇಕು.

1945ರ ಹೊತ್ತಿಗೆ ನಾಜಿಗಳ ‘ಅಂತಿಮ ಪರಿಹಾರ’ದ (ಫೈನಲ್ ಸೊಲ್ಯುಶನ್) ಯೋಜನೆ ಯುರೋಪಿನ ಮೂರನೆಯ–ಎರಡಷ್ಟು ಯೆಹೂದಿಯರನ್ನು ನಿರ್ಮೂಲನ ಮಾಡಿತು. ಯುರೋಪಿನ ಯೆಹೂದಿಯರನ್ನು ನಿರ್ಮೂಲನ ಮಾಡಲು ಹಿಟ್ಲರ್ ನೇತೃತ್ವದ ನಾಜಿ ಪಕ್ಷವು, ಒಂದು ನಿರ್ಧಾರವನ್ನು ತೆಗೆದುಕೊಳ್ಳಲಿಲ್ಲ. ಬದಲಾಗಿ, ಅವರು ಅಧಿಕಾರಕ್ಕೆ ಬಂದ ಸಮಯದಿಂದ, ಅದಕ್ಕಾಗಿ ಸೂಕ್ತ ನೀತಿಗಳ, ಕ್ರಮಗಳ ಮತ್ತು ಕಾನೂನುಗಳ ಒಂದು ಸರಣಿಯನ್ನು ರೂಪಿಸಿ ಜಾರಿಗೊಳಿಸಿದರು. ಈ ನೀತಿಗಳು ಹಂತ ಹಂತವಾಗಿ ಹೊಮ್ಮುತ್ತಾ ಹೋದಂತೆ, ಅವುಗಳ ಭೀಕರತೆ ಜರ್ಮನಿಯ ಹೊರಗೂ ಒಳಗೂ ಸ್ಪಷ್ಟವಾಗಿ ಗೋಚರಿಸಿದರೂ ಅದನ್ನು ನಿರ್ಲಕ್ಷಿಸಲಾಯಿತೆಂದೇ ಹೇಳಬೇಕು.

ನ್ಯೂರೆಂಬರ್ಗ್ ಕಾನೂನುಗಳು

ಇಂತಹ ಸರಣಿಯ ಮೊದಲ ಹಂತವೆಂದರೆ, ಎಲ್ಲಾ ಯೆಹೂದಿಗಳ ಗುರುತಿಸುವಿಕೆ ಮತ್ತು ಅವರ ನೊಂದಾಣಿ. ಇದನ್ನು ನಂತರ ಅವರ ಆಸ್ತಿಯನ್ನು ವಿವಿಧ ರೀತಿಯಲ್ಲಿ ಮುಟ್ಟು ಗೋಲು ಹಾಕಿಕೊಳ್ಳುವುದಕ್ಕೆ ಬಳಸಲಾಯಿತು. ಆ ನಂತರ ಅವರ ಪೌರತ್ವ, ಜೀವನೋಪಾಯದ ವಿಧಾನಗಳು ಮತ್ತು ಕಾನೂನುಬದ್ಧ ಪರಿಹಾರಗಳನ್ನು ತಡೆಯುವ ಕಾನೂನುಗಳನ್ನು ಅಂಗೀಕರಿಸಲಾಯಿತು. ಈ ಎಲ್ಲಾ ಪ್ರಭುತ್ವ–ಪ್ರಾಯೋಜಿತ ಕ್ರಮಗಳ ಮೂಲಕ ಯೆಹೂದಿಯರಿಗೆ ಬೆದರಿಕೆಗಳನ್ನು ಒಡ್ಡಲಾಯಿತು, ಅವರ ಮೇಲೆ ಹಿಂಸಾಚಾರ ವೆಸಗಲಾಯಿತು. ಅವರನ್ನು ಇನ್ನಷ್ಟು ಬಡತನದತ್ತ ಮತ್ತು ಪರಕೀಯಭಾವದತ್ತ ತಳ್ಳಲಾಯಿತು. ಇವೆಲ್ಲದರ ಫಲವಾಗಿ 1933 ಒಂದು ವರ್ಷದಲ್ಲೇ ಸುಮಾರು



37 ಸಾವಿರ ಯೆಹೂದಿಯರು ಜರ್ಮನಿ ಬಿಟ್ಟು ವಲಸೆ ಹೋದರು.

"ನ್ಯೂರೆಂಬರ್ಗ್ ಕಾನೂನುಗಳು" ಎಂದು ಕುಪ್ರಸಿದ್ಧವಾದ 1935ರಲ್ಲಿ ತರಲಾದ ಕಾನೂನಿನಲ್ಲಿ ಎರಡು ಅಂಶಗಳಿದ್ದವು. ಮೊದಲನೆಯದು "ಯೆಹೂದಿ" ಯಾರೆಂದು ಪ್ರತ್ಯೇಕವಾಗಿ ಗುರುತಿಸುವುದು. ಮತ್ತೊಂದು, "ಜರ್ಮನ್ ಪೌರತ್ವದ " ಪ್ರತ್ಯೇಕತೆಯನ್ನು ವ್ಯಾಖ್ಯಾನಿಸಿದ ರೀತಿ. ಈ ಎರಡು ಕಾನೂನುಗಳಲ್ಲಿ ಮೊದಲನೆಯದರಲ್ಲಿ, ಯೆಹೂದಿ ಯಾರೆಂದು ಸ್ಪಷ್ಟೀಕರಿಸಲಾಗಿತ್ತು. ಎರಡನೆಯದರಲ್ಲಿ 'ಜರ್ಮನ್ ಪೌರತ್ವ' ಯಾರಿಗೆ ಕೊಡಲಾಗುವುದು ಎಂದು ಸ್ಪಷ್ಟಪಡಿಸಲಾಯಿತು. ಮೊದಲನೆಯ ಕಾನೂನಿನಲ್ಲಿ ‘ಯೆಹೂದಿ’ ಮತ್ತು ‘ಜರ್ಮನ’ರ ನಡುವಿನ ವಿವಾಹವನ್ನು ನಿಷೇಧಿಸಲಾಯಿತು. ಜೊತೆಗೆ, ಯೆಹೂದಿಯರ ಮನೆಗಳಲ್ಲಿ 45 ವರ್ಷದೊಳಗಿನ ಜರ್ಮನ್ ಮಹಿಳೆಯರು ಕೆಲಸ ಮಾಡುವುದನ್ನು ನಿಷೇಧಿಸಲಾಯಿತು. ಜರ್ಮನ ರ ಪೌರತ್ವವನ್ನು ‘ರಕ್ತದ’ ಮತ್ತು ‘ನಡವಳಿಕೆಯ ನಿರಂತರತೆ’ಗಳ ಮೂಲಕ ಸಾಬೀತು ಪಡಿಸಬೇಕೆಂದು ಕಾನೂನು ಹೇಳಿತು. ಪೌರತ್ವ ಹೊಂದಿದವರು " ಕಡ್ಡಾಯವಾಗಿ ಜರ್ಮನ್ ಜನರು ಮತ್ತು ರೀಚ್ ’ ಗೆ ಸೇವೆ ಸಲ್ಲಿಸಲು ಸಿದ್ದರಿರಬೇಕು. ಒಟ್ಟಿನಲ್ಲಿ ‘ನ್ಯೂರೆಂಬರ್ಗ್ ಕಾನೂನುಗಳು’ ಯೆಹೂದಿಯರ ಸಾಮಾಜಿಕ ಮತ್ತು ಆರ್ಥಿಕ ಪ್ರತ್ಯೇಕತೆ ಮತ್ತು ಕಳಂಕಿತತೆಯನ್ನು ಪೂರ್ಣಗೊಳಿಸಿದವು.

ಈ ಪ್ರತ್ಯೇಕತೆ ಮತ್ತು ಕಳಂಕಿತತೆಗಳು 1938 ರಲ್ಲಿ, ಕುಖ್ಯಾತ ‘ಕ್ರಿಸ್ಟಾಲ್‌ನಕ್ತ್’ (ಒಡೆದ ಗಾಜುಗಳ ರಾತ್ರಿ) ನಲ್ಲಿ ಪರಿಸಮಾಪ್ತಿಯಿತು. ಈ ಕಾನೂನನ್ನು ಬಳಸಿಕೊಂಡು, ಪ್ರಭುತ್ವ ಪ್ರಾಯೋಜಿತ ಹಿಂಸಾತ್ಮಕ ಕೃತ್ಯಗಳು ಮತ್ತು ಕಿರುಕುಳಗಳನ್ನು ನಡೆಸಲಾಯಿತು. ನಾಜಿ ಅರೆ ಸೈನಿಕರು, ನಾಗರಿಕರು ಒಟ್ಟಾಗಿ ಯೆಹೂದಿ ಮನೆಗಳು, ಅವರ ವ್ಯಾಪಾರ ವಹಿವಾಟುಗಳು, ಆಸ್ಪತ್ರೆಗಳು ಮತ್ತು ಅವರ ಪೂಜಾಮಂದಿರ (ಸಿನೆಗಾಗ್) ಗಳ ಮೇಲೆ ದಾಳಿ ನಡೆಸಿದರು. ಇದನ್ನು ಜರ್ಮನ್ ಆಡಳಿತ ಪೋಲಿಸಿನ ಎದುರೇ ನಡೆಸಿದ್ದು, ಅವರು ಅದಕ್ಕೆ ಮೂಕಸಾಕ್ಷಿಗಳಾಗಿದ್ದರು.

ಸತತ ‘ರಾಕ್ಷಸೀಕರಣ’

ಆನಂತರವೂ ವಲಸೆ ಹೋಗದ ಯೆಹೂದಿಗಳನ್ನು 1939ರಲ್ಲಿ ನಾಜಿ ಆಕ್ರಮಣ ನಡೆಸಿ ವಶಪಡಿಸಿಕೊಂಡ ಪೋಲೆಂಡಿನ ಕೊಳೆಗೇರಿ (ಘೆಟ್ಟೋಸ್) ಗಳಿಗೆ ಓಡಿಸಲಾಯಿತು. ಹೀಗೆ ಒಂದೇ ಸ್ಥಳದಲ್ಲಿ ಅವರನ್ನು ಕೂಡಿಹಾಕಿದ್ದು, ಮುಂದೆ 1941ರ ಹೊತ್ತಿಗೆ ನಾಜಿ ಕಾರ್ಯಕರ್ತರು ಇಡೀ ಯೆಹೂದಿ ಕುಟುಂಬಗಳನ್ನು ಸಮರ್ಥವಾಗಿ ಸುತ್ತುವರಿದು ಯಾತನಾ (ಕಾನ್ಸಂಟ್ರೇಶನ್ ಕ್ಯಾಂಪ್)ಗಳಿಗೆ ಕಳಿಸುವುದನ್ನು ಸುಗಮಗೊಳಿಸಿತು. ಈ ಇಡೀ ಅವಧಿಯಲ್ಲಿ ಯೆಹೂದಿಗಳ (ಅವರನ್ನು ರಾಕ್ಷಸರಂತೆ ಬಿಂಬಿಸುವ) ‘ರಾಕ್ಷಸಿಕರಣ’ ಸತತವಾಗಿ ಮುಂದುವರೆದಿತ್ತು. 1941 ರಲ್ಲಿಯೇ ಫೀಲ್ಡ್ ಮಾರ್ಷಲ್ ವಾಲ್ಟರ್ ವಾನ್ ರೀಚೆನೌ ಯೆಹೂದಿಯರನ್ನು ಮನುಷ್ಯರೇ ಅಲ್ಲದ ಕೀಳು ಪ್ರಾಣಿಗಳೆಂದು ಪರಿಗಣಿಸುವ ‘ಕಠೋರ ಆಜ್ಞೆ’ ಹೊರಡಿಸಿದ್ದ. ಯೆಹೂದಿಯರನ್ನು ಮನುಷ್ಯರೇ ಅಲ್ಲದ ಕೀಳುಪ್ರಾಣಿಗಳೆಂದು ಪರಿಗಣಿಸಿದ ಮೇಲೆ, ನಿರ್ಲಿಪ್ತ ದಕ್ಷತೆಯಿಂದ ಅವರ ನಿರ್ಮೂಲನೆಗೆ ಮುಂದಾದರು. ಫೀಲ್ಡ್ ಮಾರ್ಷಲ್ ರೀಚೆನೌ ರವರ ಆಜ್ಞೆಯಲ್ಲಿ ‘ಕಠೋರ ಆದರೆ, ನ್ಯಾಯಯುತ ಪ್ರತಿಕಾರ" ಎಂದು ಎಚ್ಚರಿಕೆಯಿಂದ ಕೊಡಲಾದ ಸಂದೇಶ ಯೆಹೂದಿ ಗಳನ್ನು ಕೊಲ್ಲುವ ಸಂಕೇತವಾಗಿತ್ತು. ಇಂತಹುದೇ ಸಂದೇಶವನ್ನು ಇತರ ಆಜ್ಞೆಗಳಲ್ಲೂ ಕೊಡಲಾಯಿತು. ಇದು ಜರ್ಮನಿ ವಶಪಡಿಸಿಕೊಂಡ ಪೋಲೆಂಡ್ ಮತ್ತು ಸೋವಿಯೆಟ್ ಒಕ್ಕೂಟದ ಪ್ರದೇಶಗಳಲ್ಲಿ ನರಮೇಧಧ ಅತ್ಯಂತ ಕ್ರೂರವಾದ ಹಂತವಾಗಿತ್ತು. ನಾಜಿ ‘ಕೊಲೆಗಡುಕ ದಳ’ಗಳು, ಜರ್ಮನ್ ಮಿಲಿಟರಿ ಪಡೆ ಮತ್ತು ಸ್ಥಳೀಯ ಸಹಾಯಕ ಪಡೆಗಳೊಂದಿಗೆ 13 ಲಕ್ಷ ಯೆಹೂದಿಯರನ್ನು ಸುತ್ತುವರೆದು ಸಾಮೂಹಿಕವಾಗಿ ಗುಂಡುಹೊಡೆದು ಕೊಲೆ ಮಾಡಿದರು. ಮೊದ ಮೊದಲು ಯೆಹೂದಿ ಹುಡುಗರು ಮತ್ತು ಪುರುಷರು, ಬುದ್ಧಿಜೀವಿಗಳು ಮತ್ತು ವಿರೋಧಿ ರಾಜಕೀಯ ಪಕ್ಷಗಳ ಕಾರ್ಯಕರ್ತರನ್ನು (ಅವರು ಯೆಹೂದಿ ಅಲ್ಲದಿದ್ದರೂ) ವಿವಿಧ ಬೊಗಳೆ ಆಪಾದನೆಗಳ ಮೇಲೆ ಗುಂಡಿಕ್ಕಿ ಕೊಲೆ ಮಾಡಲಾಯಿತು. ಕ್ರಮೇಣ ಈ ಕಾನೂನುಗಳ ನೆನಪಗಳನ್ನು ಬದಿಗಿಡಲಾಯಿತು ಮತ್ತು ಹೆಣ್ಣು ಮಕ್ಕಳನ್ನು ಹೆಂಗಸರನ್ನು ಸಹ ಗುಂಡಿಕ್ಕಿ ಕೊಲ್ಲಲಾಯಿತು.

ದುರಂತವೆಂದರೆ ನಾಜಿ ‘ಕೊಲೆಗಡುಕ ದಳ’ಗಳಿಗೆ ದೊಡ್ಡ ಪ್ರಮಾಣದಲ್ಲಿ ಸ್ಥಳೀಯ ಸಹಾಯಕ ಪಡೆಗಳು ಬೆಂಬಲ ನೀಡಿದವು. ಒಬ್ಬ ನಾಜಿ ‘ಕೊಲೆಗಡುಕ ದಳ’ದ ಸದಸ್ಯನಿಗೆ 10 ಸ್ಥಳೀಯ ಸಹಾಯಕರು ಬೆಂಬಲ ನೀಡುತ್ತಿದ್ದರು. ಆಕ್ರಮಣಕೋರ ಜರ್ಮನಿಯ ಮಿಲಿಟರಿ ಪಡೆಗಳು ಹೊಸ ಹೊಸ ಪ್ರದೇಶಗಳಿಗೆ ದಾಳಿ ಮಾಡುವಾಗ, ಯೆಹೂದಿಯವರ ಮೇಲೆ ದಾಳಿ ಮಾಡಲು ಸ್ಥಳೀಯರನ್ನು ಪ್ರಚೋದಿಸುವಲ್ಲಿ ಯಶಸ್ವಿಯಾಗಿದ್ದರು. 1941 ರ ಜೂನ್ ನಲ್ಲಿ ಸೋವಿಯೆತ್ ಒಕ್ಕೂಟದ ಆಕ್ರಮಣದ ನಂತರದ 6 ತಿಂಗಳಲ್ಲಿ, ಲಾಟ್ವಿಯಾ, ಲಿಥುವೇನಿಯಾ, ಮತ್ತು ಉಕ್ರೇನ್ ನಲ್ಲಿ, 60 ಕ್ಕೂ ಹೆಚ್ಚು ಹತ್ಯಾಕಾಂಡಗಳು ನಡೆದು, ಸುಮಾರು 24,000 ಯೆಹೂದಿ ಜೀವಗಳನ್ನು ಬಲಿ ಪಡೆದವು. ‘ನಾಜಿ ಕೊಲೆಗಡುಕ ದಳ’ಗಳ ಅತ್ಯಂತ ಕುಖ್ಯಾತ ನರಮೇಧಗಳಲ್ಲಿ ಒಂದು ಕೀವ್ ಬಳಿಯ ಬಾಬಿಯಾರ್ ನಲ್ಲಿ ನಡೆಯಿತು. ಅಲ್ಲಿ 33 ಸಾವಿರಕ್ಕೂ ಹೆಚ್ಚು ಯೆಹೂದಿಗಳನ್ನು ಕೊಲ್ಲಲಾಯಿತು. ಹಾಗೆಯೇ, 1941 ರ ನವೆಂಬರ್ ಮತ್ತು ಡಿಸೆಂಬರ್ ನ ಎರಡು ದಿನಗಳಲ್ಲಿ, ರಿಗಾ ಬಳಿಯ ರುಂಬುಲಾ ದಲ್ಲಿ ಸುಮಾರು 25 ಸಾವಿರ ಯೆಹೂದಿಗಳನ್ನು ಬಲಿ ತೆಗೆದು ಕೊಳ್ಳಲಾಗಿದೆ. ಆದಾಗ್ಯೂ, ಈ ಸಾಮೂಹಿಕ ಕೊಲೆಗಳು ಅಸಮರ್ಪಕ ಮತ್ತು ದುಬಾರಿಯಾಗಿದ್ದವು. ಇದು ಸೈನಿಕರ ಸ್ಥೈರ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿವೆ ಎಂದು ಮಿಲಿಟರಿ ಕಮಾಂಡರುಗಳು ದೂರುತ್ತಿದ್ದರು.

ಈ ಹಿನ್ನೆಲೆಯಲ್ಲಿ ಜನವರಿ 1942ರಲ್ಲಿ ಯೆಹೂದಿಗಳ ‘ಸಮಸ್ಯೆ’ಯ ‘ಅಂತಿಮ ಪರಿಹಾರ’ದ ಯೋಜನೆ ರೂಪಿಸಲಾಯಿತು. ಸಾಧ್ಯವಿರುವ (ವಿಶೇಷವಾಗಿ ಯುರೋಪಿನ) ಎಲ್ಲಾ ಯೆಹೂದಿಯರನ್ನು ನಿರ್ಮೂಲನ ಮಾಡುವುದು ಈ ಯೋಜನೆಯ ಉದ್ದೇಶವಾಗಿತ್ತು. ಯೆಹೂದಿಗಳ ಸಂಖ್ಯೆ ಸಾಕಷ್ಟು ದೊಡ್ಡದಿದ್ದು ಸಾಮೂಹಿಕ ಗುಂಡೇಟು ‘ದಕ್ಷ’ ವಿಧಾನವಲ್ಲ ಎಂದು ➚



ಕರ್ನಾಟಕ ಪ್ರಾಂತ ರೈತ ಸಂಘದಿಂದ ಪ್ರತಿಭಟನೆ

ವಿಜಯಪುರ: 2019ರಲ್ಲಿ ಲೋಕಸಭಾ ಹಾಗೂ ರಾಜ್ಯ ಸಭೆಯಲ್ಲಿ ಅಂಗೀಕರಿಸಲಾದ ಸಿಎಎ ಕಾಯ್ದೆಯನ್ನು ಕೇಂದ್ರ ಸರ್ಕಾರ ಹಿಂಪಡೆಯಬೇಕೆಂದು ಒತ್ತಾಯಿಸಿ ವಿಜಯಪುರ ನಗರದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡು ಮಾನವ ಸರಪಳಿ ನಡೆಸಿ ಜಿಲ್ಲಾಧಿಕಾರಿಗಳ ಕಛೇರಿಗೆ ತೆರಳಿ ಜಿಲ್ಲಾಧಿಕಾರಿಗಳ ಮುಖಾಂತರ ರಾಷ್ಟ್ರಪತಿಗಳಿಗೆ ಕರ್ನಾಟಕ ಪ್ರಾಂತ ರೈತ ಸಂಘ ಜಿಲ್ಲಾ ಸಮಿತಿ ಹಾಗೂ ವಿಜಯಪುರ ಜಿಲ್ಲಾ ಸಂಘಟನೆಗಳು ಮನವಿ ಸಲ್ಲಿಸಲಾಯಿತು.



ಈ ಸಂದರ್ಭದಲ್ಲಿ ರಾಜ್ಯ ಉಪಾಧ್ಯಕ್ಷ ಭೀಮಶಿ ಕಲಾದಗಿ ಮಾತನಾಡಿ, 1948 ಜನವರಿ 30 ರಂದು ಗೊಡ್ಸೆ ಗಾಂಧೀಜಿಯವರಿಗೆ ಕೊಂದಿದ್ದ, ಸದ್ಯ ಸಂಘ ಪರಿವಾರದವರು ಡಾ. ಬಿ.ಆರ್. ಅಂಬೇಡ್ಕರ್ ರಚಿಸಿರುವ ಸಂವಿಧಾನವನ್ನು ಕೊಲ್ಲಲು ನಿಂತಿದ್ದಾರೆ. ಇದನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ದೇಶದ ಜನತೆ ತೀವ್ರತರ ಆರ್ಥಿಕ ಹಾಗೂ ಸಾಮಾಜಿಕ ಬಿಕ್ಕಟ್ಟುಗಳನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ ಜನ ಜೀವನದ ಸಮಸ್ಯೆಗಳ ವಿರುದ್ಧ ಜನರು ನಡೆಸಬೇಕಾದ ಐಕ್ಯ ಹೋರಾಟಗಳಿಗೆ ಧಕ್ಕೆ ತರಲು ಕೇಂದ್ರ ಸರ್ಕಾರವು ಪೈಶಾಚಿಕ ಉಪಾಯಗಳನ್ನು ರೂಪಿಸುತ್ತಿದೆ. ಪೌರತ್ವ (ತಿದ್ದುಪಡಿ) ಕಾಯ್ದೆ (ಸಿಎಎ) ಯ ಜಾರಿ ಮತ್ತು ತನ್ಮೂಲಕ ರಾಷ್ಟ್ರದಾದ್ಯಂತ ನಾಗರಿಕ ದಾಖಲೆ (ಎನ್‌ಆರ್‌ಸಿ) ಯನ್ನು ತಯಾರಿಸಲು ನಡೆಸಲಾಗುತ್ತಿರುವ ಹುನ್ನಾರವು ಕೋಮುಗಳ ನಡುವೆ ಅನ್ಯಕ್ಯತೆಯನ್ನು ಸೃಷ್ಟಿಸುವ ಇರಾದೆಯನ್ನು ಹೊಂದಿದೆ. 'ಕಿರುಕುಳಕ್ಕೊಳಗಾಗಿರುವ ನಮ್ಮ ನೆರೆಯ ರಾಷ್ಟ್ರಗಳ ಜನರಿಗೆ ರಕ್ಷಣೆ ನೀಡುವ ಸದುದ್ದೇಶವನ್ನು ಸಿಎಎ ಹೊಂದಿದೆ' ಎಂದು ಸರ್ಕಾರವು ಒಂದು 'ಪವಿತ್ರ' ಘೋಷಣೆಯನ್ನು ಮಾಡುತ್ತದೆ. ಆದರೆ, ವಾಸ್ತವವಾಗಿ ಈ ಕಾಯ್ದೆಯಲ್ಲಿ ಕಿರುಕುಳಕ್ಕೊಳಗಾಗಿರುವ ಸಮುದಾಯಗಳ ಪಟ್ಟಿಯಲ್ಲಿ ಮುಸಲ್ಮಾನರನ್ನು ಬಿಟ್ಟು ಉಳಿದ ಧರ್ಮಗಳು ಇವೆ. "ಸಿಎಎ ಮೂಲಭೂತವಾಗಿ ತಾರತಮ್ಯದಿಂದ ಕೂಡಿದೆ" ಎಂದು ವಿಶ್ವ ಸಂಸ್ಥೆಯ ಮಾನವ ಹಕ್ಕು ಸಮಿತಿಯ ಖಂಡಿಸಿದೆ. ಅಸ್ಸಾಮದಲ್ಲಿ 1955ರಲ್ಲಿ ಜನಗಣತಿಯಲ್ಲಿ 3 ಕೋಟಿ 40 ಲಕ್ಷ ಜನಸಂಖ್ಯೆ ಇದ್ದು, ಅದರಲ್ಲಿ ಬಾಂಗ್ಲಾದೇಶದಿಂದ ನುಸುಳಿ ಬಂದವರು 19.06.657 ಇದ್ದು, ಇದರ ಬಗ್ಗೆ 1955ರಲ್ಲಿ ಕಾಯ್ದೆ ತಗೆದು 6 (ಎ) ಸಿ(ಎ) ಆ ಪ್ರಕಾರ ಆದೇಶ ಹೊರಡಿಸಿದ್ದರು. ಇದರ ವಿರುದ್ಧ ಫಣ ಪರಿಷತ್ ವಿದ್ಯಾರ್ಥಿ ಯುವ ಜನ ಹೋರಾಟದಿಂದ ತಡೆ ಹಿಡಿಯಲು ಸಾಧ್ಯವಾಗಿದೆ ಎಂದರು.

ಕರ್ನಾಟಕ ಸರ್ಕಾರ ಕಂದಾಯ ಕಾನೂನು ತಿದ್ದುಪಡೆ ಮಾಡಿ ಸರ್ಕಾರಿ ಭೂಮಿ ಗೋಮಾಳಾ, ಅರಣ್ಯ ಭೂಮಿ ಸಾಗುವಳಿ ಮಾಡುವಿಕೆ, ಅಕ್ರಮ ಸಕ್ರಮಗೊಳಿಸುವಿಕೆ 1917 ರಲ್ಲಿ ಕಾಂಗ್ರೆಸ್ ಸರ್ಕಾದ ಆದೇಶ ಮಾಡಿತ್ತು. ಫಾರ್ಮ್ 57 ತುಂಬಲು ಆದೇಶ ಮಾಡಿ ಎರಡು ವರ್ಷ ಕಳೆದರೂ ಅಕ್ರಮ-ಸಕ್ರಮ ಗೊಳಿಸುವ ಕಮಿಟಿಯನ್ನು ಇಲ್ಲಿಯವರೆಗೆ ನೇಮಿಸಿಲ್ಲ. ಬಿಜೆಪಿ ಸರ್ಕಾರ ವಿಳಂಭ ನೀತಿಯನ್ನು ಅನುಸರಿಸುತ್ತಿದೆ. ತಕ್ಷಣ ವಿಜಯಪುರ, ಇಂಡಿ, ಬಸವನ ಬಾಗೇವಾಡಿ ತಾಲೂಕುಗಳಿಗೆ ಶಾಸಕರ ಅಧ್ಯಕ್ಷತೆಯಲ್ಲಿ ತಕ್ಷಣ ಕಮಿಟಿ ರಚಿಸಬೇಕು. ಆ ಕಮಿಟಿಯಲ್ಲಿ ರೈತ ಸಂಘದ ಪ್ರತಿನಿಧಿ ಇರಬೇಕು. ಸರ್ಕಾರಿ ಭೂಮಿ ಹಾಗೂ ಅರಣ್ಯ ಭೂಮಿ, ಗೋಮಾಳಾ ಅಂದಾಜು 2000 ಎಕರೆ ಜಮೀನು ದಲಿತರು ಹಿಂದುಳಿದವರು ಸುಮಾರು ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ. ತಕ್ಷಣ ಅಕ್ರಮ ಸಕ್ರಮ ಕಮಿಟಿ ರಚನೆ ಮಾಡಿ ಭೂಮಿ ಸಾಗುವಳಿ ಮಾಡುವವರಿಗೆ ಅಕ್ರಮ ಸಕ್ರಮಗೊಳಿಸಿ ಹಕ್ಕುಪತ್ರ ನೀಡಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಿಐಟಿಯು ಕಾರ್ಯದರ್ಶಿ ಲಕ್ಷಣ ಹಂದ್ರಾಳ ಮಾತನಾಡಿ, ಜುಲೈ 2018 ರಲ್ಲಿ ಮೊದಲ ಎನ್‌ಆರ್‌ಸಿ ಪಟ್ಟಿಯ ಹೊರಬಂದಾಗ ಒಟ್ಟು ಅರ್ಜಿ ಸಲ್ಲಿಸಿದ 3.2 ಕೋಟಿ ಜನರಲ್ಲಿ 40 ಲಕ್ಷ ಜನರ ಹೆಸರುಗಳು ಅದರಲ್ಲಿ ಇರಲಿಲ್ಲ. ಇದು ಊಹಿಸಲು ಅಸಾಧ್ಯವಾದ ಸಂಖ್ಯೆ 2013ರಲ್ಲಿ ಸುಪ್ರಿಂಕೋರ್ಟ್ ನೇರ ನಿಗಾವಣೆಯಲ್ಲಿ ನಡೆದ ಆ ಪ್ರಕ್ರಿಯೆಗೆ 52,000 ಮಂದಿಯನ್ನು ನಿಯೋಜಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಅಂಗನವಾಡಿ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷರಾದ ಭಾರತಿ ವಾಲಿ ಮಾತನಾಡಿ, ಎಲ್ಲ ರಂಗಗಳಲ್ಲೂ ತಾನು ಸೋತಿರುವುದನ್ನು ಮರೆಮಾಚಿಕೊಳ್ಳಲು ಕೇಂದ್ರ ಸರ್ಕಾರವು ಈ ಕಾಯ್ದೆಯನ್ನು ಬಳಸಿಕೊಳ್ಳುತ್ತಿದೆ. ಅತೀವ ಆರ್ಥಿಕ ಬಿಕ್ಕಟ್ಟು, ನಿರುದ್ಯೋಗ, ಬಡತನ, ಬೆಲೆ ಏರಿಕೆ, ಉದ್ಯೋಗ ನಾಶ, ರೈತರ ಆತ್ಮಹತ್ಯೆಗಳು, ಜಿಡಿಪಿ ಕುಸಿತ, ಮಹಿಳೆಯರ ಮೇಲಿನ ಪಾತಕಗಳು, ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ಇತ್ಯಾದಿ ಕಾರಣಗಳಿಗಾಗಿ ಆಕ್ರೋಶಗೊಂಡಿರುವ ಜನರ ಗಮನವನ್ನು ಬೇರೆಡೆ ಸೆಳೆಯುವ ಹುನ್ನಾರ ಈ ಕಾಯ್ದೆಯ ಜಾರಿಯ ಹಿಂದೆ ಇದೆ. ಅದೇ ಸಂದರ್ಭದಲ್ಲಿ, ಬಿಜೆಪಿಗೆ ತನ್ನ ಕೋಮುವಾದಿ ರಾಜಕಾರಣವನ್ನು ನಡೆಸಿಕೊಂಡು ಹೋಗಲು ಈ ಕಾಯ್ದೆಯಿಂದ ಅಪಾರ ಅವಕಾಶ ಲಭ್ಯವಾಗಿದೆ. ತಮ್ಮ ದೈನಂದಿನ ಸಮಸ್ಯೆಗಳ ಬಗ್ಗೆ ಜನರು ಹೋರಾಡದೆ, ತಮ್ಮ ಐಕ್ಯತೆಗೆ ತಾವೇ ಕೊಡಲಿ ಪೆಟ್ಟು ಹಾಕಿಕೊಳ್ಳುವಂತಾದರೆ, ಅದು ಈ ದೇಶದ ಏಕಸ್ವಾಮ್ಯ ಬಂಡವಾಳಗಾರರಿಗೆ ಲಾಭದಾಯಕವಾಗುತ್ತದೆ ಎಂದುರು.

ಈ ಸಂದರ್ಭದಲ್ಲಿ ಸುನಂದ ನಾಯಕ, ಮಳಸಿದ್ಧ ನಾಯಕೋಡಿ, ಸಲೀಂ ನಾಯಕೋಡಿ, ಸುಭಾಸ ತಳಕೇರಿ, ಸೋಮನಿಂಗ ತಳಕೇರಿ, ರಾಜಮಾ ನದಾಪ, ಸೋಮುಬಾಯಿ ರಾಠೋಡ, ಸುಮಿತ್ರ ಘೋಣಸಗಿ, ಕುಸಮಾ ಹಜೇರಿ, ಸಿದ್ರಾಮ ಬಂಗಾರಿ, ಶಕೀಲಾ ಜಮಾದಾರ, ಯಮನಪ್ಪ ಚೂರಿ, ದಾದಾಪೀರ ಜೈನಾಪೂರ, ಮುಂತಾದ ನೂರಾರು ಜನರು ಇದ್ದರು.

-ಭೀಮಶಿ ಕಲಾದಗಿ

ನಾಜಿಗಳು ಪರಿಗಣಿಸಿದರು. ಆದ್ದರಿಂದ ನರಮೇಧವನ್ನು ದೊಡ್ಡ ಪ್ರಮಾಣದ 'ಕೈಗಾರಿಕೀಕರಣ'ದ ವಿಧಾನ ಬಳಸಿ ಮಾಡುವುದು 'ಅಂತಿಮ ಪರಿಹಾರ'ದ ಯೋಜನೆಯ ಭಾಗವಾಗಿತ್ತು. ದೊಡ್ಡ ಪ್ರಮಾಣದಲ್ಲಿ ಕೆಲವೇ ಕ್ಷಣಗಳಲ್ಲಿ ಕೊಲ್ಲುವ 'ಗ್ಯಾಸ್ ಕೋಣೆ'ಗಳನ್ನು ಹೊಂದಿದ್ದ ಜರ್ಮನಿಯ ಆಶ್ವಿಟ್ಜ್ ಯಾತನಾ ಶಿಬಿರವನ್ನು ಇದಕ್ಕಾಗಿ ಸಜ್ಜುಗೊಳಿಸಲಾಯಿತು. 'ಗ್ಯಾಸ್ ಕೋಣೆ'ಗಳು ಸ್ನಾನದ ಕೋಣೆಯ ಹಾಗೆ ಕಾಣುತ್ತಿತ್ತು. ಶಿಬಿರವಾಸಿಗಳನ್ನು ಸರದಿಯಲ್ಲಿ ಸ್ನಾನಕ್ಕೆಂದು ಕಳಿಸಿ ಸೈನೈಡ್ ವಿಷ ಗ್ಯಾಸ್ ಬಿಟ್ಟು ಅವರನ್ನು ಕೊಲ್ಲಲಾಗುತ್ತಿತ್ತು. ಕೆಲವು ನಿಮಿಷಗಳ ಭೀಕರ ಯಾತನೆಯ ನಂತರ ಅವರ ಹೆಣ ಬೀಳುತ್ತಿತ್ತು. ಈ ಯಾತನಾ ಶಿಬಿರಕ್ಕೆ ರೈಲುಗಳಲ್ಲಿ ಸಾಮೂಹಿಕವಾಗಿ ಕಳಿಸಲಾದ 13 ಲಕ್ಷ ಯೆಹೂದಿಯರಲ್ಲಿ 11 ಲಕ್ಷ ಬಲಿಯಾದರು. ಹೆಚ್ಚಿನವರು 'ಗ್ಯಾಸ್ ಕೋಣೆ'ಗಳಲ್ಲಿ ಬಲಿಯಾದರು. ಉಳಿದವರು ಹಸಿವಿಗೆ, ಹಸಿವಿನಿಂದ ಉಂಟಾದ ನಿಶ್ಶಕ್ತಿಗೆ, ರೋಗಗಳಿಗೆ ಬಲಿಯಾದರು. 'ಗ್ಯಾಸ್ ಕೋಣೆ'ಗಳ ಹೆಣಗಳ ಬೆಲೆಬಾಳುವ ವಸ್ತುಗಳನ್ನು ಕಿತ್ತು ಹಾಕಲಾಗುತ್ತಿತ್ತು. ಮಹಿಳೆಯರ ಕೂದಲು ಕತ್ತರಿಸಲಾಗುತ್ತಿತ್ತು. ಚಿನ್ನದ ಹಲ್ಲುಗಳನ್ನು ದಂತವೈದ್ಯರುಗಳು ಚಿನ್ನವನ್ನು ಪ್ರತ್ಯೇಕಿಸುತ್ತಿದ್ದರು. 1944ರ ವರೆಗೆ ಈ ರೀತಿಯಲ್ಲಿ 10-12 ಕೆ.ಜಿ ಚಿನ್ನ ಸಂಗ್ರಹಿಸಲಾಗಿತ್ತು ಎಂದು ದಾಖಲಾಗಿದೆ. ಯೆಹೂದಿಯರ ಹೆಣಗಳನ್ನೂ ಸಹ ಪೂರ್ಣವಾಗಿ ಈ ರೀತಿ 'ಅಮಾನವೀಯ'ಗೊಳಿಸಲಾಗಿತ್ತು. ನಾಜಿ ಸೈನ್ಯವನ್ನು ಸೋವಿಯೆಟ್ ಕೆಂಪು ಸೈನ್ಯ ಸೋಲಿಸಿ ಆಶ್ವಿಟ್ಜ್ ತಲುಪಿ ಅಲ್ಲಿರುವ ಶಿಬಿರವಾಸಿಗಳನ್ನು ಬಿಡುಗಡೆ ಮಾಡದಿದ್ದರೆ ಎಷ್ಟು ಕಾಲ ಈ ನರಮೇಧ ಮುಂದುವರೆಯುತ್ತಿತ್ತೋ ಗೊತ್ತಿಲ್ಲ.

ಒಂದು ಸಮುದಾಯದ ನರಮೇಧದ ಹಲವು ಹಂತಗಳ ಈ ಭೀಕರ ಚರಿತ್ರೆ ಮರೆಯುವಂತಹದ್ದಲ್ಲ. ಇದು ಯಾವುದೇ ಇತರ ಸಮುದಾಯಕ್ಕೆ ಮರುಕಳಿಸಬಾರದು. ಅದಕ್ಕಾಗಿ ಈ ವಾರ್ಷಿಕವನ್ನು ಪ್ರತಿ ವರ್ಷ ಆಚರಿಸಲಾಗುತ್ತದೆ. ಆದರೆ ಹಿಟ್ಲರನ ಸಂತಾನ ಕೊನೆಗೊಂಡಿಲ್ಲ. ಬದಲಾಗಿ ಕಳೆದ ಒಂದೆರಡು ದಶಕಗಳಲ್ಲಿ ನಮ್ಮ ದೇಶ ಸೇರಿದಂತೆ ಇಡೀ ಜಗತ್ತಿನಲ್ಲಿ ಬೆಳೆಯುತ್ತಿದೆ. ಅವರು ಈ ಚರಿತ್ರೆಯನ್ನು ಅರಗಿಸಿಕೊಂಡು ಅದನ್ನು ಮರುಕಳಿಸಲು ಪ್ರಯತ್ನಿಸುತ್ತಿದ್ದಾರೆ. ಅವರನ್ನು ತಡೆಯುವತ್ತ ಕ್ರಮಗಳನ್ನು ಕೈಗೊಳ್ಳುವುದು ಮಾತ್ರ 'ಯೆಹೂದಿ ನರಮೇಧ'ದಲ್ಲಿ ಬಲಿಯಾದವರ ನೆನಪಿಗೆ ಅರ್ಥಪೂರ್ಣ ಗೌರವ ಸಲ್ಲಿಸಿದಂತಾಗುತ್ತದೆ. ●

#ಕೊರೊನಾ_ವೈರಸ್, ಹೆಸರಲ್ಲೇ ಇರುವಂತೆ, ಒಂದು ವೈರಸ್. ಹೆಚ್ಚಿನ ವೈರಸ್ ಸೋಂಕುಗಳನ್ನು ಬಹುತೇಕ ರೋಗಿಗಳಲ್ಲಿ ದೇಹದ ರೋಗ ರಕ್ಷಣಾ ವ್ಯವಸ್ಥೆಯೇ ಸದೆಬಡಿದು ಗುಣಪಡಿಸುತ್ತವೆ, ಆದ್ದರಿಂದ ಈ ಸೋಂಕುಗಳಿಗೆ ಔಷಧಗಳ ಅಗತ್ಯವಿಲ್ಲ, ಅತಿ ಸಾಮಾನ್ಯವಾಗಿ, ಅತಿ ಹೆಚ್ಚಿನವರಿಗೆ ತಗಲಿ, ಅತಿ ಸುಲಭದಲ್ಲಿ ಗುಣಹೊಂದುವ ಇಂಥ ಸೋಂಕುಗಳಿಗೆ ಔಷಧಗಳನ್ನು ಅಭಿವೃದ್ಧಿಪಡಿಸಿಯೂ ಇಲ್ಲ. ದಡಾರ (measles), ಕೆಪ್ಪಟೆ ಬಾವು (mumps), ನೆಗಡಿ (rhino virus etc) ಮುಂತಾದವು ಇವಕ್ಕೆ ಉದಾಹರಣೆಗಳು. ಇತ್ತೀಚೆಗೆ ಸಾಮಾನ್ಯವಾಗುತ್ತಿದ್ದು, ಅಪರೂಪಕ್ಕೊಮ್ಮೆ (ಲಕ್ಷ ಸೋಂಕಿತರಲ್ಲಿ 20-30) ಸಾವನ್ನುಂಟುಮಾಡುವ ಡೆಂಗಿಗೂ ನಿರ್ದಿಷ್ಟವಾದ ವೈರಸ್ ನಿರೋಧಕ ಔಷಧ ಇಲ್ಲ. ಆದರೆ ಅತಿ ಗಂಭೀರವಾಗಬಲ್ಲ, ಸಾವನ್ನುಂಟು ಮಾಡಬಲ್ಲ ಎಚ್.ಐ.ವಿ, ಹೆಪಟೈಟಿಸ್ ಬಿ, ಸಿ ಗಳಿಗೆ ಆಧುನಿಕ ವೈದ್ಯವಿಜ್ಞಾನದಲ್ಲಿ ಅತ್ಯುತ್ತಮ ಔಷಧಗಳನ್ನು ಅಭಿವೃದ್ಧಿಪಡಿಸಲಾಗಿದೆ, ಸಾವನ್ನು ತಡೆಯಲಾಗಿದೆ.

ಈ ಯಾವ ಸೋಂಕುಗಳ ಪರಿಚಯವೂ ಆಯುರ್ವೇದ, ಹೋಮಿಯೋಪತಿ, ಯುನಾನಿಗಳಲ್ಲಿ ಇಲ್ಲ. ವಾತ, ಪಿತ್ತ, ಕಫ, ಮಿಯಸ್ಮ್ ಗಳಲ್ಲಿ ಸೂಕ್ಷ್ಮಾಣುಗಳ ಸಂಗತಿಯೇ ಇಲ್ಲ. ಈ ಪ್ರಾಚೀನ ಪದ್ಧತಿಗಳಲ್ಲಿ ಈ ಸೂಕ್ಷ್ಮಾಣುಗಳನ್ನು ತಡೆಯುವ ಅಥವಾ ಗುಣಪಡಿಸುವ ಜ್ಞಾನವಾಗಲೀ, ವಿಧಾನಗಳಾಗಲೀ ಇಲ್ಲ.

ಆದರೆ ಪ್ರತೀ ಸಲವೂ ವೈರಸ್ ಸೋಂಕು ಸುದ್ದಿ ಮಾಡಿದಾಗ ಈ ಪದ್ಧತಿಗಳವರು ಅವನ್ನು ತಡೆಯುವ/ಗುಣ ಪಡಿಸುವ ವಿಧಾನಗಳು ತಮ್ಮಲ್ಲಿವೆ ಎಂದು ಪ್ರಚಾರ ಮಾಡತೊಡಗುತ್ತಾರೆ. 2009ರಲ್ಲಿ ಫ್ಲೂ ಹೆಚ್ಚಾದಾಗ ಅಮೃತ ಬಳ್ಳಿ ಬಗ್ಗೆ ರಾಮಕಿಶನ್ ಯಾದವ್ ಯಾನೆ ರಾಮದೇವ್ ನಿಂದ ಹಿಡಿದು ಎಲ್ಲ ಆಯುರ್ವೇದದವರೂ ಬೊಬ್ಬೆ ಹಾಕಿದ್ದರು. ಅದಕ್ಕೆ ಎರಡು ವರ್ಷ ಮೊದಲು ಚಿಕುನ್ ಗುನ್ಯಾ ಹರಡಿದಾಗಅದನ್ನುತಡೆಯುವುದಕ್ಕೆಂದು ಸರಕಾರವೇ ಹೋಮಿಯೋಪತಿ ವಿತರಿಸಿತ್ತು, ಅದನ್ನು ನಂಬಿದವರು ಅದಕ್ಕಾಗಿ ಸರದಿ ಕಾಯುತ್ತಾ ಸೊಳ್ಳೆಯಿಂದ ಕಚ್ಚಿಸಿಕೊಂಡು ಚಿಕುನ್ ಗುನ್ಯಾ ಪಡೆದುಕೊಳ್ಳುವಂತಾಗಿತ್ತು. ನಾಲ್ಕು ವರ್ಷಗಳ ಹಿಂದೆ ಆಫ್ರಿಕಾದಲ್ಲಿ ಎಬೋಲಾ ಹರಡಿದಾಗ ಇದೇ ರಾಮಕಿಶನ್ ಯಾದವ್ ತಾನು ಅಫ್ರಿಕಾಕ್ಕೆ ಹೋಗಿ ಅದನ್ನು ತಡೆಯುವುದಾಗಿ ಹೇಳಿ ನಗೆಪಾಟಲಾದಾದ್ದೂ ಆಗಿತ್ತು. ಈಗ ಕೊರೊನಾ ಸರದಿ!

ಕೊರೊನಾ ವೈರಸ್ ತಗಲಿದವರಲ್ಲಿ ಹೆಚ್ಚಿನವರು ತಾವಾಗಿ ಗುಣಮುಖರಾಗುತ್ತಾರೆ, ಅದಕ್ಕೆ ಯಾವ ಚಿಕಿತ್ಸೆಯೂ ಅಗತ್ಯವಿಲ್ಲ. ಅಪರೂಪಕ್ಕೆಯಾರಾದರಿಗೂಗಂಭೀರ ಸಮಸ್ಯೆಗಳಾದರೆ ಅದಕ್ಕೆತಕ್ಕ ವಿಶೇಷ ಚಿಕಿತ್ಸೆಗಳನ್ನು ಆಧುನಿಕ ಆಸ್ಪತ್ರೆಗಳಲ್ಲಷ್ಟೇ ಪಡೆಯಬಹುದು. ಕೊರೊನಾ ಸೋಂಕು ತಡೆಯುವುದಕ್ಕೆ ನೆಗಡಿಯನ್ನುತಡೆಯುವುದಕ್ಕೆ ಕೈಗೊಳ್ಳುವ ಸರಳ ಕ್ರಮಗಳನ್ನು ಕೈಗೊಂಡರೆ (ನೆಗಡಿಯಿದ್ದವರ ಬಳಿ ಹೋಗದಿರುವುದು, ಅಂಥವರು ತಮ್ಮ ಮೂಗನ್ನೊರಸಿ ಅದೇ ಕೈಯಿಂದ ಮುಟ್ಟಿರಬಹುದಾದ ವಸ್ತುಗಳನ್ನು/ಬಾಗಿಲಿನ ಹಿಡಿ ಇತ್ಯಾದಿಗಳನ್ನು ನಾವು ಮುಟ್ಟಿದರೆ ಅದೇ ಕೈಯಿಂದ ನೇರವಾಗಿ ನಮ್ಮ ಮೂಗನ್ನು ಒರಸಿಕೊಳ್ಳದಿರುವುದು) ಕೊರೊನಾ ಸೋಂಕನ್ನೂ ತಡೆಯಬಹುದು. ಈ ಜಾಗ್ರತೆಗಳನ್ನು ಮಾಡದೆ ಆಯುರ್ವೇದ, ಹೋಮಿಯೋಪತಿ ನಂಬಿದರೆ ಕೆಡುವುದು ಖಂಡಿತ. ಮುಖಕ್ಕೆ ಕವಚ ಹಾಕಿಕೊಂಡು ಊರಿಡೀ ತಿರುಗುವ ಅಗತ್ಯವೇ ಇಲ್ಲ.


ಅಂತೂ ಒಂದೊಂದು ಸೋಂಕು ಹರಡತೊಡಗಿದಾಗ ಈ ಬದಲಿ ಪದ್ಧತಿಗಳ ಬೊಗಳೆಗೆ ವಹಿವಾಟಿನ ಅವಕಾಶ, ಅವಕ್ಕೆ ಸರಕಾರದ ಬೆಂಬಲ. ಇದು ಸರಕಾರಕ್ಕೂ ತಾನು ಮಾಡಬೇಕಾದ್ದನ್ನು ಮಾಡದೇ ಉಳಿಯುವುದಕ್ಕೆ ಒಳ್ಳೆಯ ಉಪಾಯ. ಆಧುನಿಕ ವೈದ್ಯ ವಿಜ್ಞಾನದ ಕೆಲವರಿಗೂ ಕೈಗವಸು, ಮುಖ ಕವಚ ಇತ್ಯಾದಿ ಮಾರುವುದಕ್ಕೂ ಒಳ್ಳೆಯ ಸಂದರ್ಭ. ಈ ಗದ್ದಲದಲ್ಲಿ ನಿಜಕ್ಕೂ ಮಾಡಬೇಕಾಗಿರುವ ಜಾಗ್ರತೆಗಳು ಯಾರಿಗೂ ತಿಳಿಯದೆ ರೋಗ ಹರಡುವುಕ್ಕೂ ಅವಕಾಶ.

– ಡಾ. ಶ್ರೀನಿವಾಸ ಕಕ್ಕಿಲ್ಲಾಯ

JANASHAKTHI KANNADA VARA PATRIKE February 3-9, 2020 Price: Rs. 10/- Date of Publication: 31 JANUARY 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

CAA-NRC-NPR ಗೆ ಕಾವ್ಯ ಪ್ರತಿರೋಧ

FIR ಎದುರಿಸಿದ ಸಿರಾಜ್ ಬಿಸರಳ್ಳಿ ಕವಿತೆಗೆ ಎರಡೇ ದಿನಗಳಲ್ಲಿ 11 ಭಾಷೆಗಳಿಗೆ ಅನುವಾದದ ದಾಖಲೆ!



ಕೊಪ್ಪಳದ ಕವಿ ಹಾಗೂ ಪತ್ರಕರ್ತ ಸಿರಾಜ್ ಬಿಸರಳ್ಳಿಯವರು ಇತ್ತೀಚೆಗೆ ನಡೆದ ಆನೆಗೊಂದಿ ಉತ್ಸವದಲ್ಲಿ ತಾವು ರಚಿಸಿದ್ದ ಕವಿತೆಯೊಂದನ್ನು ಓದಿದರು. 'ಕಷ್ಟಜೀವಿ' ಗೆ ಎಡ–ಬಲದಲ್ಲಿ ಇರುವವನೇ ಕವಿ ಎಂಬ ಆಶಯದಂತೆ ಕವಿ ಸಿರಾಜ್ ಬಿಸರಳ್ಳಿ ನಮ್ಮನ್ನು ಆಳುವ ಪ್ರಭುತ್ವವನ್ನು ಪ್ರಶ್ನಿಸಿರುವ ನಿಜವಾದ ದೇಶಪ್ರೇಮಿ ಕವಿತೆ ಇದಾಗಿದೆ. ಆದರೆ ಪ್ರಭುತ್ವದ ಗುಲಾಮರು ಈ ಕವಿತೆಯ ವಿರುದ್ಧ ನೀಡಿದ ದೂರಿನ ಮೇರೆಗೆ ಗಂಗಾವತಿಯ ಪೊಲೀಸರು ಈ ಕವಿತೆಯ ಮೇಲೆ FIR ಹಾಕಿದ್ದಾರೆ. "ಇಕ್ರಲಾ ವದೀರ್ಲಾ, ಈ ನನ್ ಮಕ್ಕಳ ಚರ್ಮ ಎಬ್ರಲಾ" ಎಂದು ಹೊಟ್ಟೆಯೊಳಗಿನ ಸಂಕಟವನ್ನು ಆಕ್ರೋಶದ ರೂಪದಲ್ಲಿ ಹೊರ ಹಾಕಿರುವ ಕನ್ನಡದ ನೆಲದಲ್ಲಿ, ಈ ನೆಲದ ಮೂಲನಿವಾಸಿಗಳ ದಾಖಲೆ ಕೇಳುವವನಿಗೆ "ನಿನ್ನ ದಾಖಲೆ ತೋರಿಸು" ಎಂದು ಕೇಳುವುದು ದೇಶದ್ರೋಹಿಯಾಗಿ ಕಾಣಿಸಿದೆ.

ಕವಿಗಳನ್ನು ದೇಶದ್ರೋಹಿಗಳೆಂದು, ಕವಿತೆಗಳನ್ನು ದೇಶದ್ರೋಹದ, ಧರ್ಮದ್ರೋಹದ ಕೃತ್ಯಗಳು ಎಂದು ಪರಿಗಣಿಸುವ ಪರಿಪಾಠ ಇಂದು ನೆನ್ನೆಯದೇನೂ ಅಲ್ಲ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ 'ನರಬಲಿ' ಎಂಬ ಕವಿತೆ ಬರೆದ ದ.ರಾ.ಬೇಂದ್ರೆಯವರನ್ನೂ ಜೈಲಿಗೆ ತಳ್ಳಿತ್ತು ಅಂದಿನ ಬ್ರಿಟಿಷ್ ಸರ್ಕಾರ.

"ಹೋರಾಟವೆ ಡೈರೆಕ್ಷನ್, ಪದ್ಯ ನನಗೆ ಆಕ್ಸಿಜನ್" ಎಂದಿದ್ದ ದಿಗಂಬರ ಕವಿ ಚರಬಂಡರಾಜುಗೆ ಕವಿತೆ ಬರೆಯಕೂಡದು ಎಂದಾಗ, "ಮುಂಗೈಯನು ಕತ್ತರಿಸೆ, ಹಿಡಿದ ಲೇಖನಿ ಬಿಡೆನು, ನೇಣಿಗೆ ನಾ ಹಾಡು ಕಲಿಸಿ ಪಲ್ಲವಿಯನು ಹಾಡಿಸುವೆ" ಎಂದು ಗುಡುಗಿದ್ದರು.


ಇದೀಗ ಒಂದು ಕವಿತೆಯ ಮೇಲೆ FIR ದಾಖಲಿಸಿದ್ದನ್ನು ಪ್ರತಿಭಟಿಸಿ CAA-NRC-NPRಗಳನ್ನು ಪ್ರಶ್ನಿಸುವ, ಮೋದಿ–ಶಾ ಪ್ರಭುತ್ವಕ್ಕೆ ಸೆಡ್ಡು ಹೊಡೆಯುವ ಸಾಲು ಸಾಲು ಕವಿತೆಗಳು ಬರುತ್ತಿವೆ. ಅಕ್ಷರ ಲೋಕದ ಈ ಸಾತ್ವಿಕ ಪ್ರತಿರೋಧ ಹೇಗಿದೆ ಎಂದರೆ ಸಿರಾಜ್ ಬಿಸರಳ್ಳಿಯವರ ಪದ್ಯ



ಕೇವಲ ಎರಡು ದಿನಗಳಲ್ಲಿ 11 ಭಾಷೆಗಳಿಗೆ (ಕನ್ನಡ, ಇಂಗ್ಲಿಷ್, ಹಿಂದಿ, ತುಳು, ಕೊಂಕಣಿ, ತೆಲುಗು, ಉರ್ದು, ಮಲಯಾಳಂ, ಮುಲಾಮೆ, ಕೊಡವ, ಲಂಬಾಣಿ, ಬ್ಯಾರಿ) ತರ್ಜುಮೆಯಾಗಿದೆ.

ಈಗಾಗಲೇ ಸಿಎಎ–ಪ್ರತಿರೋಧದ ಸಭೆ, ರ್‍ಯಾಲಿ, ಮೆರವಣೀಗೆಗಳಲ್ಲಿ ಕವಿತೆ ವಾಚನ ಸಾಮಾನ್ಯವಾಗಿತ್ತು. ಆದರೆ ಒಂದು ಕವಿತೆಯ ಮೇಲೆ FIR ದಾಖಲಿಸಿದ್ದನ್ನು ಪ್ರತಿಭಟಿಸಿ, ಆ ನಂತರ ಹಲವಾರು ಪ್ರಸಿದ್ಧ ಕವಿಗಳೂ,ಹೊಸ ಕವಿಗಳೂ ಸಿಎಎ–ವಿರೋಧಿ ಕವಿತೆಗಳನ್ನು ಬರೆದು ಸಾರ್ವಜನಿಕವಾಗಿ ಓದುವುದು, ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳುವುದು ಒಂದು ಚಳುವಳಿಯ ರೂಪ ಪಡೆದುಕೊಂಡಿದೆ. ಇದನ್ನು ಸಿಎಎ–ವಿರೋಧಿ ಕಾವ್ಯ ಪ್ರತಿರೋಧ ಎಂದು ಕರೆಯಬಹುದಾದಷ್ಟು ನಿಚ್ಚಳವಾದ ಟ್ರೆಂಡ್ ಆಗಿದೆ. ಇಂತಹ ಕಾವ್ಯದ ಸಾಲುಗಳನ್ನು ಕಲಾತ್ಮಕ ಪೋಸ್ಟರ್ ಮಾಡಿ ಹಂಚಿಕೊಳ್ಳಲಾಗುತ್ತಿದೆ. ಜನವರಿ 30ರ 'ಹುತಾತ್ಮರ ದಿನ'ದಂದು ನಡೆದ ಮಾನವ ಸರಪಣಿ ಮತ್ತಿತರ ಹಲವು ಕಾರ್ಯಕ್ರಮಗಳಲ್ಲಿ ಸಹ ಕವಿತೆ ವಾಚನ ಮಾಡಲಾಗಿದೆ.

ಇಲ್ಲಿ ಸಿರಾಜ್ ಬಿಸರಳ್ಳಿ ಅವರ ಕನ್ನಡ ಕವಿತೆ ಮತ್ತು ತುಳು ಅನುವಾದ, ವಿನಯಾ ಒಕ್ಕುಂದ ಅವರ ಕವಿತೆ ಮತ್ತು ಕೆಲವು ಕವನ–ಆಧಾರಿತ ಪೋಸ್ಟರುಗಳ ಉದಾಹರಣೆಗಳನ್ನು ಕೊಡಲಾಗಿದೆ.





ನಿನ್ನ ದಾಖಲೆ ಯಾವಾಗ ನೀಡುತ್ತಿ?

ಆಧಾರು, ರೇಷನ್ ಕಾರ್ಡಗಳ ಕ್ಯೂನಲ್ಲಿ
ಥಂಬಿನ, ಸರ್ವರಿನ ಮಂಗನಾಟದಲ್ಲಿ
ಬದುಕ ಕಳೆದುಕೊಳ್ಳು ತ್ತಿರುವವರ ದಾಖಲೆ
ಕೇಳುವವನೇ ನಿನ್ನ ದಾಖಲೆ ಯಾವಾಗ ನೀಡುತ್ತಿ?

ನಾಡಿನ ಸ್ವಾತಂತ್ರ್ಯಕ್ಕಾಗಿ ನಗುನಗುತ್ತಲೇ
ನೇಣಿಗೇರಿದವರ,
ಹೆಸರೂ ಬೇಡವೆಂದು ಹುತಾತ್ಮರಾದವರ
ಇತಿಹಾಸದ ಹಾಳೆಗಳ ಹರಿಯುತ್ತಿರುವವನೇ
ನಿನ್ನ ದಾಖಲೆ ಯಾವಾಗ ನೀಡುತ್ತಿ.?

ತಾಜ್ ಮಹಲ್, ಚಾರ್ ಮಿನಾರು ಗುಂಬಜಗಳಿಗೆ
ಕೆಂಪು ಕೋಟೆ ಕುತುಬ್ ಮಿನಾರುಗಳಿಗೆ ಸಾಕ್ಷಿ
ಕೇಳುತ್ತಿರುವವನೇ
ನಿನ್ನ ದಾಖಲೆ ಯಾವಾಗ ನೀಡುತ್ತಿ?

ಬ್ರಿಟೀಷರ ಬೂಟು ನೆಕ್ಕಿದ ತಲೆಹಿಡುಕರ
ಧರ್ಮ ದ್ವೇಷದ ಅಮಲಿನಲ್ಲಿ ರಕ್ತ ಕುಡಿಯುತ್ತಿರುವ
ಗೊಬೆಲ್ ಸಂತತಿಯವನೇ
ನಿನ್ನ ದಾಖಲೆ ಯಾವಾಗ ನೀಡುತ್ತಿ?
ಪಕೋಡ ಮಾರಿ ಬದುಕಿದವನೇ
ಚಾ ಮಾರಿ ಬದುಕಿದವನು ನನ್ನೂರಿನಲ್ಲಿ
ಮನುಷ್ಯತ್ವ ಮಾರಿಕೊಂಡಿಲ್ಲ
ಸ್ವಾಭಿಮಾನ ಮಾರಿಕೊಂಡಿಲ್ಲ,
ಸುಳ್ಳಿನ ಕಂತೆಗಳ ಕತೆ ಕಟ್ಟಿಲ್ಲ
ಹೇಳು ನಿನ್ನ ದಾಖಲೆಗಳ ಯಾವಾಗ ನೀಡುತ್ತಿ ?

ಮುಳ್ಳು ಚುಚ್ಚಿ, ಹರಿದು, ಸಿಡಿದು ಹೋದ
ಟ್ಯೂಬುಗಳ, ಟೈಯರುಗಳ ತಿದ್ದಿ ತೀಡಿ ಗಾಳಿ ತುಂಬಿದ
ಪಂಚರ್ ನವನು ತನ್ನತನವನ್ನು ಮಾರಿಕೊಳ್ಳಲಿಲ್ಲ
ನೀನು ದೇಶವನ್ನೇ ಮಾರಿಬಿಟ್ಟೆಯಲ್ಲ
ಹೇಳು ನಿನ್ನ ದಾಖಲೆಗಳ ಯಾವಾಗ ನೀಡುತ್ತಿ ?

ದೇಶವನ್ನೇ ಯಾಮಾರಿಸಿದ ನಿನಗೆ
ನಕಲಿ ದಾಖಲೆಗಳು ದೊಡ್ಡದಲ್ಲ ಬಿಡು
ಕನಿಷ್ಠ ಮನುಷ್ಯತ್ವವೂ ನಿನಗಿದೆ
ಎನ್ನುವ ದಾಖಲೆ ಯಾವಾಗ ನೀಡುತ್ತಿ ?

–ಸಿರಾಜ್ ಬಿಸರಳ್ಳಿ

ನಿನ್ನ ಕಾಕಜಿ ಏಪ ತೂಪಾವ?

(ಸಿರಾಜ್ ಕವಿತೆಯ ತುಳು ಅನುವಾದ :ಗುರು ಸೂಳ್ಯ)

ಆಧಾರ್ ಕಾರ್ಡ್ ದ, ರೇಷನ್ ಕಾರ್ಡ್ ದ ಲೈನ್ ಡ್
ಥಂಭ್ ಒತ್ತುನ, ಸರ್ವರ್ ಹಾಳಾಪಿನ ಮಲ್ದಾಟೊಡ್
ಬದ್ಕ್ ಇಜ್ಜಾಂದಾಪಿನಕ್ಲೆನ ಕಾಕಜಿ ಕೇನೊಂದುಲ್ಲತ
ನಿನ್ನ ಕಾಕಜಿ ಏಪ ತೂಪಾವ?

ದೇಸೊದ ಸ್ವಸಂತ್ರಗ್ ಬೋಡಾದ್
ತೆಲ್ತೊಂದೇ ಗಲ್ಲ್ ಗ್ ಬೂರ್ನಕ್ಲೆನ,
ಪುದರ್ ಗೊತ್ತಾಯೆರ್ಲಾ ಬುಡಂದೆ ಮಣ್ಣಾಯಿನಕ್ಲೆನ
ಇತಿಹಾಸೊದ ಒಂಜೊಂಜಿ ಕಾಕಜಿನ್ಲಾ ಪರಿತೊಂದುಲತಾ
ನಿನ್ನ ಕಾಕಜಿ ಏಪ ತೂಪಾವ?

ತಾಜ್ ಮಹಲ್, ಚಾರ್ ಮಿನಾರ್ ಗುಂಬಜ್ ಲೆಗ್
ಕೆಂಪು ಕೋಟೆ, ಕುತುಬ್ ಮಿನಾರುಲೆಗ್
ಸಾಕ್ಷಿ ಕೇನೊಂದುಲ್ಲತಾ..!
ನಿನ್ನ ಕಾಕಜಿ ಏಪ ತೂಪಾವ?

ಪೊಣ್ಣು ಜೋಕುಲೆನ್ಲ ಅಡ ದೀದ್
ಪರಂಗಿದಕ್ಲೆನ ಬೂಟ್ಸು ನಕ್ಕಿನ,
ಧರ್ಮದ ಪುದರ್ ಡ್ ನೆತ್ತೆರ್ ಪರೊಂದುಪ್ಪುನ
ಗೊಬೆಲ್ ಕುಲತಾಯೆ ಆಯಿನ ಈ
ನಿನ್ನ ಕಾಕಜಿ ಏಪ ತೂಪಾವ ?

ಎಂಕ್ಲೆನ ಊರುಡು
ನೀರುಳ್ಳಿ ಬಜೆ ಮಾರೊಂದು
ಚಾತ ಅಂಗಡಿ ದೀದ್ ಬದುಕುನ ಏರ್ಲಾ
ಮನುಷ್ಯತ್ವ ಮಾರೊಂದಿಜೆರ್,
ಸ್ವಾಭಿಮಾನ ಮಾರೊಂದಿಜೆರ್,
ಸುಳ್ಳು ಕತೆ ಪಂಡ್ದ್ ನಂಬಾದಿಜೆರ್.
ಪನ್, ಏಪ ತೂಪಾವ ನಿನ್ನ ಕಾಕಜಿನ್?
ಆಣಿ ಕಂತ್ ದ್ ಪರಿನ ಟ್ಯೂಬುಗು, ಟಯರ್ ಗ್
ಜೋಪಾನಡ್ ಪಂಚರ್ ಪಾಡುನಕಲು ಏರ್ಲಾ
ಅಕ್ಲೆನಕ್ಲೆನ್ ಮಾರೋಂದಿಜೆರ್,
ಊರುಗೂರುನೇ ಮಾರೊಂದುಲ್ಲತಾ
ಈ ಏಪ ತೂಪಾವ ನಿನ್ನ ಕಾಕಜಿನ್?

ಊರ್ದಕ್ಲೆನ್ ಪೂರಾ ಮಂಗ ಮಲ್ತಿನ ನಿಕ್ಕ್
ಡುಬ್ಲಿಕೇಟ್ ದಾಖಲೆ ಮಲ್ಪುನ ದಾಲ
ಮಲ್ಲ ವಿಷಯ ಅತ್ತ್ ಬುಡು,
ಒಂಚೂರೇ ಚೂರು ಮಾನವೀಯತೆ ಆಂಡಲಾ
ಉಂಡು ಪನ್ಪಿನ ಕಾಕಜಿ ಏಪ ತೂಪಾವ ?

ಮೌನ

ಮೌನ, ಸದ್ಯ ನನ್ನ ಕೊರಳನ್ನು
ಕುಣಿಕೆಯಿಂದ ಪಾರುಮಾಡಬಲ್ಲದು
ಆದರೆ, ಒಳಗೆ ಲಾಳಿಯಾಡುವ
ಲಾವರಸವನ್ನೆಂದಿಗೂ ತಣಿಸಲಾರದು

ಮೌನ, ನನ್ನ ಬಟ್ಟಲಿಗೆ
ಅನ್ನ ಕೊಡಬಹುದು ಮುಫತ್ತಾಗಿ
ಆದರೆ ನೆತ್ತರು ಕೀವುಗಟ್ಟುವ
ದ್ರೋಹದ ಯಾತನೆಯಿಂದ ಪಾರುಗಾಣಿಸದು

ಮೌನ, ಹೆಗಲಿಗೆ ಜರಿಶಾಲನ್ನು
ಕೈಗೆ ಸನ್ಮಾನ ಪತ್ರವನ್ನು ಕೊಡಬಹುದು
ಆದರೆ, ಲಜ್ಜೆಗೆಟ್ಟು ಕೇಡು ಸಂಧಾನಕ್ಕೆ
ಸಂದುಹೋದ ಆತ್ಮದ ಮರ್ಯಾದೆ ಕಾಯುವ
ಕಫನ್ನಿನ ಬಟ್ಟೆಯೂ ಆಗಲಾರದು

ಮೌನ, ನಮ್ಮಷ್ಟಕ್ಕೇ ನಾವಿರುವ
ಸಭ್ಯತೆಯ ಸೋಗು ಕೊಡಬಹುದು
ಆದರೆ ಒಳಗೊಳಗೇ ಅರೆಬೆಂದು
ಹಳಸಿದ, ಜೀವತ್ರಾಣವನೆಂದೂ ಮರಳಿಸದು

ಮೌನ ಹರಳುಗಟ್ಟಿದೆ
ಒಳಹೊಕ್ಕು ಪ್ರಾಣವ ಹೆನೆಗೆ ಮಾಡಿದೆ
ಉಪ್ಪುನೀರು ಕುದಿಯೊಡದರೂ ತಣ್ಣಗಿದೆ ಕಣ್ಣೀರು

ನನ್ನ ಮುದ್ದು ದೇಶವೇ
ನಿನ್ನ ಮೇಲಾಡುವ ಗಾಳಿಯಲೆಯಾಣೆ
ಎಲ್ಲರೆಲ್ಲರ ಉಸಿರು ತಾಕಿ ಜುಂಎನ್ನುವ ತ್ರಿವರ್ಣದಾಣೆ
ಮಕ್ಕಳ ನೆತ್ತರಂಟಿದ ಹಾದಿಯಾಣೆ
ಈ ಜವುಳು ಸವಳಿನ ದುರ್ಭರ ದಿನಗಳಲಿ
ಮೌನವೊಂದು ಮಹಾಪಾಪ

ಕಾನ್ಸಂಟ್ರೇಶನ್ ಕ್ಯಾಂಪಿನಿಂದ ಕವಿ ಹೇಳುತ್ತಿದ್ದಾನೆ
ನೊಂದವರ ದ್ವನಿಯಾಗದ ಮೌನ ಮಹಾಪಾಪ

– ವಿನಯಾ ಒಕ್ಕುಂದ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**